ಕೊಡಗು ಸಂಗಾತಿ

ಫೆಬ್ರವರಿ 1 ರಿಂದ 28, 2002 ಪಾಕ್ಷಿಕ ಪತ್ರಿಕೆ (ಪೊನ್ನಿ 18-29 - ಜಾರ್ದೆ 1-16)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 21-22A ಪುಟಗಳು : 24 ಬೆಲೆ ರೂ. : 12-00



ಮಾದರಿ ನಗರ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನ !


ಭ್ರಷ್ಟಾಚಾರ ರಹಿತ ಆಡಳಿತಕ್ಕಾಗಿ ಯಾವುದೇ ನಿಷ್ಠುರ ಕ್ರಮಕ್ಕೂ ಸಿದ್ಧ !!

ಪ್ರಥಮ ಮಹಿಳಾ ಮಡಿಕೇರಿ ಪುರಸಭಾಧ್ಯಕ್ಷೆ

ಶ್ರೀಮತಿ ಕೂಡಕಂಡಿ ಕಾವೇರಮ್ಮ ಸೋಮಣ್ಣ ಉವಾಚ

ಲೇಖನ : ಒಳಪುಟದಲ್ಲಿ.

ಶುಭ ಹಾರೈಕೆಗಳು



ಡಾ. ಪಟ್ಟಡ ದೇವಯ್ಯ ಶಿವಕುಮಾರ್

ಕಳೆದ ತಾ. 22-12-2001ರಂದು ಜರುಗಿದ ಮೈಸೂರು ವಿಶ್ವವಿದ್ಯಾನಿಲಯದ 82ನೇ ಘಟಿಕೋತ್ಸವದಲ್ಲಿ ಪಟ್ಟಡ ದೇವಯ್ಯ ಶಿವಕುಮಾರ್ ಜೈವಿಕ ತಂತ್ರಜ್ಞಾನದಲ್ಲಿನ (ಬಯೊಟೆಕ್) ಅತ್ಯುನ್ನತ ಸಾಧನೆಗಾಗಿ ಡಾಕ್ಟರೇಟ್ ಪದವಿಯನ್ನು ಮಾನ್ಯ ಸಮಕುಲಪತಿ ಡಾ. ಜಿ. ಪರಮೇಶ್ವರ್ ಅವರಿಂದ ಸ್ವೀಕರಿಸಿ ನಮ್ಮ ಕುಟುಂಬಕ್ಕೂ, ಊರಿಗೂ, ನಾಡಿಗೂ ಮತ್ತು ಜನಾಂಗಕ್ಕೂ ಕೀರ್ತಿಯನ್ನು ತಂದಿದ್ದು ನಿಜಕ್ಕೂ ಹೆಮ್ಮೆಯೆನಿಸಿದೆ. ನಿನ್ನ ಮುಂದಿನ ಭವಿಷ್ಯವು ಉತ್ತಮ ಶುಭಕರ ವಾಗಿರಲೆಂದು ನಮ್ಮ ಕುಲಗುರು ವೆಂಕಟರಮಣ, ತಾಯಿ ಶಾರದಾಂಬೆ, ಗುರು ಕಾರೋಣರ ಆಶೀರ್ವಾದ ಸದಾ ಇರಲೆಂದು ಬಯಸುವ

ಪಟ್ಟಡ ಕುಟುಂಬಸ್ತರ ಜೀರ್ಣೋದ್ಧಾರ ಸಂಘ, ಅವಂದೂರು ಗ್ರಾಮ ಮತ್ತು ಅಂಚೆ - 571 201

ಪ್ರಕಟಣೆ : **ಪಟ್ಟಡ ಪೊನ್ನಪ್ಪ ಗಣಪತಿ, ಅಧ್ಯಕ್ಷರು ಹಾಗೂ ಕಾರ್ಯಕಾರಿ ಮಂಡಳಿ**

"ಪುಣ್ಯ" ವಧು-ವರರ ಅನ್ವೇಷಣಾ ಕೇಂದ್ರ - ಸುಂಟಿಕೊಪ್ಪ

1. ಪಾಲಿಬೆಟ್ಟದ ಆಜೀರಾ ಮನೆ ಉತ್ತಯ್ಯನವರ ಪುತ್ರ ನಿರ್ಮಲ ಹಾಗೂ ಮೈಸೂರಿನ ನಿವೇದಿತ ನಗರದಲ್ಲಿ ವಾಸವಿರುವ ಮುಕ್ಕಾಟಿ ದೇವಯ್ಯನವರ ಪುತ್ರ ವೇಣುಗೋಪಾಲ್ ಇವರ ವಿವಾಹವು ದಿನಾಂಕ 29-10-2001ರಂದು ಕುಶಾಲನಗರದ ಕಾಳೇಘಾಟ್ ಕಲ್ಯಾಣಮಂಟಪದಲ್ಲಿ ವಿಜೃಂಭಣೆಯಿಂದ ನಡೆಯಿತು.
2. ಚೆಟ್ಟಿಮಾನಿಯ ಕೆದಂಬಾಡಿ ಬೆಳ್ಯಪ್ಪನವರ ಪುತ್ರಿ ದಿವ್ಯ ಹಾಗೂ ಮಕ್ಕಂದೂರಿನ ಚೀಯಂಡಿ ದಿ. ರವೀಂದ್ರರವರ ಪುತ್ರ ವಿನು ಇವರ ವಿವಾಹವು ತಾರೀಖು 9-12-2001ರಂದು ಮಡಿಕೇರಿಯ ಮೇಲಿನ ಗೌಡ ಸಮಾಜದಲ್ಲಿ ವಿಜೃಂಭಣೆಯಿಂದ ನಡೆಯಿತು.
3. ಮಡಿಕೇರಿಯಲ್ಲಿ ವಾಸವಿರುವ ಕಳುವಾಜೆ ತಿಮ್ಮಪ್ಪಗೌಡರ ಪುತ್ರಿ ರೇಣುಕ ಹಾಗೂ ಆಳಂಕಳಿಯ ದಿ. ಬೋಜಪ್ಪಗೌಡರ ಪುತ್ರ ಮೋಹನ್ ಇವರ ವಿವಾಹವು ತಾರೀಖು 19-12-2001ರಂದುಮಡಿಕೇರಿಯ ಕೆಳಗಿನ ಗೌಡ ಸಮಾಜದಲ್ಲಿ ಭಾರಿ ವಿಜೃಂಭಣೆಯಿಂದ ನಡೆಯಿತು.

ಈ ಎಲ್ಲಾ ನವದಂಪತಿಗಳಗೆ ನಮ್ಮ ಸಂಸ್ಥೆಯ ಮೂಲಕ ಬಾಳಸಂಗಾತಿಗಳಾದ ಇವರಿಗೆ ಶುಭಹಾರೈಕೆಗಳು.

ಪ್ರಕಟಣೆ : **ಶ್ರೀಮತಿ ಕಡ್ಯದ ರತಿ ಅರುಣ್‌ಕುಮಾರ್**

"ಪುಣ್ಯ ವಧು-ವರರ ಅನ್ವೇಷಣಾ ಕೇಂದ್ರ", ಸುಂಟಿಕೊಪ್ಪ, ☎ : ಮನೆ : 08276 - 62252 ಕಛೇರಿ : 62083

ದಂಪತಿಗಳ "ಬೆಳ್ಳಿ ಹಬ್ಬ"



ಪಟ್ಟಡ ರಾಮಪ್ಪ ಸೋಮಣ್ಣ (R. S. I)
ಪಟ್ಟಡ ಪದ್ಮಾವತಿ ಸೋಮಣ್ಣ (ಶಿಕ್ಷಕಿ)

ನೀವು ಸತಿಪತಿಯರಾಗಿ 20-2-2002ಕ್ಕೆ 25 ಸಂವತ್ಸರವನ್ನು ಕಂಡಿದ್ದೀರಿ. ನಿಮ್ಮ "ಆದರ್ಶ ಜೀವನ" ನಮಗೆಲ್ಲರಿಗೂ ಮಾದರಿಯಾಗಿರುವ ನಿಮ್ಮ ದಾಂಪತ್ಯ ಜೀವನಕ್ಕೆ ನಮ್ಮೆಲ್ಲರ ಶುಭ ಹಾರೈಕೆಗಳು,

ಯಿಂದ : ಮಗ : ಪಟ್ಟಡ ನವೀನ್ ಸೋಮಣ್ಣ
ಮಗಳು : ನೂತನ್, ಅಳಿಯ : ಮಂಜುನಾಥ
ಮೊಮ್ಮಕ್ಕಳು : ಮೋನಿಕಾ ಮತ್ತು ಅಕಿಲೇಷ್

ವಿಳಾಸ : ನಂ. 30, 'ಸಿ' ಬ್ಲಾಕ್, ಕೆ. ಎಸ್. ಆರ್. ಪಿ., ಜಾಕೀ ಕ್ವಾಟರ್ಸ್, ಮೈಸೂರು - 11 ☎ : 0821 - 443380

2002, ಫೆಬ್ರವರಿ 1 ರಿಂದ 28ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ	**ಕೊಡಗು ಸಂಗಾತಿ**, 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. **ಫೋನ್ : 0821/516771**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ ಕೀ ಚೈನ್ ಲಭ್ಯ	**ಬೈತಡ್ಕ ಜಾನಕಿ ಬೆಳ್ಯಪ್ಪ**,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, **ಫೋನ್ : 08272/28047**
	ಚೆರಿಯಮನೆ ರಮೇಶ್, C/o **ಪಾಂಡ್ಯನ್ ಕ್ಯಾಸೆಟ್ ಅಂಗಡಿ**, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, **ಫೋನ್** : 08272/29620
ವಿರಾಜಪೇಟೆ	**ಬಾರಿಕೆರ ಮನೋಜ್‌ಕುಮಾರ್**, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ **ಫೋನ್** : 08274/56591
ಕುಶಾಲ ನಗರ	**ಕುಂಭಗೌಡನ ಸೋಮಣ್ಣ**, ಮಯೂರ ಕೋಲ್ಡ್ ಸ್ಟೋರೆಜ್, ಮುಖ್ಯ ರಸ್ತೆ, ಕುಶಾಲನಗರ - 571 234 **ಫೋನ್** : 08276/73370
ಬೆಂಗಳೂರು ಮಹಾನಗರ	**ಕಲ್ಲುಮುಟ್ಲು ಬಸಪ್ಪ**, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,**ಫೋನ್** : 080/6500946

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 6 ರೂ.

ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಜಾತಿ, ಮತಾಂಧತೆ

ಮನುಷ್ಯ ಸಂಘ ಜೀವಿ. ಅವನು ತಾನುವಾಸಿಸುತ್ತಿರುವ ಸುತ್ತ ಮುತ್ತಲಿನ ಪರಿಸರದನುಗುಣವಾಗಿ ಸಮಾಜ ಹಾಗೂ ಧರ್ಮವನ್ನು ಸ್ಥಾಪಿಸುವುದಕ್ಕೆ ಪ್ರಯತ್ನಿಸುತ್ತಾನೆ. ಅನಾಗರಿಕ ಜಗತ್ತಿನಲ್ಲಿ ಒಂದು ಧರ್ಮಕ್ಕೂ ಒಂದು ಸಮಾಜಕ್ಕೂ ಒಂದು ಜಾತಿಗೂ ಘರ್ಷಣೆ ನಡೆಯುತ್ತಿತ್ತು. ಇದಕ್ಕೆ ಕಾರಣ ಒಂದು ಧರ್ಮದ ನೀತಿ ನಿಯಮಗಳ ಅರಿವು ಇನ್ನೊಂದು ಧರ್ಮದವರಿಗೆ ಅರಿವಿಲ್ಲದ ಕಾರಣ ತಿಕ್ಕಾಟ ಉಂಟಾಗುತ್ತಿತ್ತು. ಆದರೆ ಈ ನವ ನಾಗರೀಕತೆ ಹೊಂದಿದ ಈ ಕಾಲದಲ್ಲಿ ಒಂದು ಧರ್ಮದ ಜನರಿಗೂ, ಇನ್ನೊಂದು ಧರ್ಮದ ಜನರಿಗೂ ತಿಕ್ಕಾಟ ಉಂಟಾಗುತ್ತಿರುವುದು ಆ ಧರ್ಮದ ಜನರಿಗೆ ಪರಧರ್ಮದ ನೀತಿ ನಿಯಮಗಳನ್ನು ಸಹಿಸಲಾಗದೆ ತನ್ನ ಧರ್ಮ ಮಾತ್ರ ಉಳಿದು ಬೇರೆ ಧರ್ಮಗಳು ವಿನಾ ಶವಾಗಬೇಕೆಂಬ ಮತಾಂಧಕಾರದ ಹುಚ್ಚು ಹೆಚ್ಚಾಗಿರುವುದರಿಂದಾಗಿಯೇ ಈಗ 21ನೇ ಶತಮಾನದಲ್ಲಿ ಹತ್ತನೇಯ ಶತಮಾನದ ಮನುಷ್ಯರಂತೆ ನಡೆದು ಕೊಳ್ಳುತ್ತಿರುವುದು ನಾಗರೀಕತೆಯ ಅಭಿವೃದ್ಧಿಯ ಶ್ರೇಯಸ್ಸನ್ನು ನುಂಗಿ ನಾಗರೀಕತೆಯುಳ್ಳ ಸಮಾಜಕ್ಕೆ ಜಾತ್ಯಾಂಧಕಾರವೆಂಬ ಕಪ್ಪು ಚುಕ್ಕೆಯ ಲೇಪನವಲ್ಲದೆ ಮತ್ತೇನು?

ತನ್ನ ಧರ್ಮವೇ ಬೇರೆ ಧರ್ಮಗಳಿಗಿಂತ ಶ್ರೇಷ್ಠ ವೆಂಬ ಭಾವನೆ ನಾಗರೀಕತೆಯ ಸಂಕೇತವೇನೊ ಸರಿ. ಕುವೆಂಪುರವರ ವಿಶ್ವ ಮಾನವರಾಗಲು ಇನ್ನೆಷ್ಟು ಶತಮಾನಗಳು ನಮಗೆ ಬೇಕೋ ಆ ಪರಮಾತ್ಮನಿಗೆ ಗೊತ್ತು.

ಕೊಡಗಿನಲ್ಲಿ ಇತ್ತೀಚೆಗೆ ಹಲವಾರು ಬಾರಿ ಶಾಂತಿ ಕದಡಿದರೂ ಸರಕಾರ ದ್ವಂದ ನೀತಿಯನ್ನು ಅನುಸರಿಸುತ್ತಿರುವುದು ನಿಜಕ್ಕೂ ಖೇದಕರ. ಇತ್ತೀಚಿನ ಘಟನೆಗಳಲ್ಲಿ ಅಮಾಯಕರ ಸೆರೆ, ತಪ್ಪಿತಸ್ತರ ವಿರುದ್ಧ ಯಾವುದೆ ಕ್ರಮವಿಲ್ಲ. ನಾಡಿನಿಂದ ಕಾಡಿಗೆ ಯುವಕರ ಪಲಾಯನ ಹಿಂದೂ ಧರ್ಮದ ಬಗ್ಗೆ ಕೀಳಿರಿಮೆ, ಅವಹೇಳನ ತಾನು ತನ್ನ ನಿಜವಾದ ತಂದೆಗೆ ಹುಟ್ಟಿದ್ದೊ ಅಲ್ಲವೊ ಎಂದ ತನ್ನ ಹೆತ್ತ ತಾಯಿಯನ್ನು ಪ್ರಶ್ನಿಸುವ ಕಾಲ ಸನ್ನಿಹಿತವಾಗಿದ್ದು ಕಲಿಯುಗದ ಅಂತ್ಯವೆಂಬುದರ ಸಂಕೇತವೇ? ಕೊಡಗಿನ ಒಟ್ಟಭಿಪ್ರಾಯಕ್ಕೆ ಸರಕಾರ ಬದ್ಧವಾಗಿ ನಡೆಯಬೇಕೆಂಬುದು ಕೊಡಗಿನ ಯುವಕರ ನಿಲುವಾಗಿದೆ. ವಿಜ್ಞಾನ ತತ್ವ, ಕಲೆಯೇ ಮುಂದುವರಿದರೇ ವಿಶ್ವದಲ್ಲಿ ಧರ್ಮ, ಜಾತಿಯ ಅಂಧಕಾರ ಪ್ರತೀ ಹಿಂದುಳಿದ ಮಾನವರ ಅಭಿಪ್ರಾಯವೆಂದು ಸಂಗಾತಿಯು ಅಭಿಪ್ರಾಯ ಪಡುತ್ತದೆ.

ಕೊಡಗಿನ ಕೇಕಡ ನಾಣಯ್ಯ ಅವರಿಗೆ ಮುಖ್ಯಮಂತ್ರಿಗಳ ಬೆಳ್ಳಿ ಪದಕ ಪ್ರಧಾನ



ಬಳ್ಳಾಪುರದ ಬಾಗೇಪಲ್ಲಿಯಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಕೊಡಗಿನ ಕೊಟ್ಟೂರು ನಿವಾಸಿ ಕೇಕಡ ಎ. ನಾಣಯ್ಯ ಅವರಿಗೆ 2000 ಸಾಲಿನ ಮುಖ್ಯಮಂತ್ರಿಗಳ ಬೆಳ್ಳಿಯ ಪದಕ ದೊರೆತಿದೆ.

ಸುಮಾರು 20 ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನಾಣಯ್ಯ ಅವರು 2001ರ ಏಪ್ರಿಲ್ ತಾ. 2 ರಂದು ಬೆಂಗಳೂರಿನಲ್ಲಿ ನಡೆದ ಪೊಲೀಸ್ ಧ್ವಜ ದಿನಾಚರಣಾ ಸಮಾರಂಭದಲ್ಲಿ ಮುಖ್ಯಮಂತ್ರಿ ಎಸ್. ಎಂ. ಕೃಷ್ಣ ಅವರಿಂದ ಈ ಪದಕ ಸ್ವೀಕರಿಸಿದರು. ಶ್ರೀಯುತರು ಚೇರಂಬಾಣೆ ಸಮೀಪ ಕೊಟ್ಟೂರು ನಿವಾಸಿ ಕೇಕಡ ಅಪ್ಪಯ್ಯ ಹಾಗೂ ಅಮ್ಮವ್ವ ದಂಪತಿಗಳ ಪುತ್ರರಾಗಿದ್ದಾರೆ.

- ಸಂಗಾತಿ

ತೊಪ್ಪುನ ತೋರ್ಸುದು ಯಾಕೆ?

ನಾನ್ ಮಾಡ್ದ ತಪ್ಪ್‌ನ ಇನ್ನೊಬ್ಬ ಎತ್ತಿ ತೋರ್ಸಿಕಾಕನ ನಂಗೆ ಸಿಟ್ಟ್ ಬಂದದೆ. ನನ್ನ ಹೊಗಳಿ ಮಾತಾಡಿರೆ ಕುಷಿ ಆದ. ನಾನ್ ಮಾಡ್ದ್ ತಪ್ಪ್‌ತ ಗೊತ್ತಿದ್ದರೂ ಅದರ ಮರೆ ಮಾಡುವವನ ನಾನ್ ಮೆಚ್ಚಿಕಂಡನೆ. "ಇದ್ ಸರಿ ಅಲ್ಲ". ನಮ್ಮ ತಪ್ಪ್‌ನ ನಮಿಗೆ ಎತ್ತಿ ತೋರ್ಸುವವನೆ ನಮ್ಮ ಸ್ನೇಹಿತಂಗ. ನಮ್ಮ ತಪ್ಪ್ ನಮಿಗೆ ಗೊತ್ತಾದುಲೆ. ತಪ್ಪುನ ತಿದ್ದುವ ಸ್ನೇಹಿತ ಇರ್‍ಕ್‌ನ ನಾವ್ ತಿದ್ದಿಕಣ್‌ಕ್. ನಮ್ಮನ್ನ ಹೊಗುಳ್ದು ನಮಿಗೆ ಕಷ್ಟ. ನಮ್ಮನ್ನ ತಿದ್ದುವರ ಜೊತೆ ಸ್ನೇಹ ಒಳ್ಳೆದ್. ಕನ್ನಡಿಲಿ ನಾವ್ ನೋಡಿಕಾಕನ ನಮಿಗೆ ಕಂಡದೆ. ಕಿಡ್‌ಕಿ ತೆರ್ದ್ ಹೊರಗೆ ನೋಡಿರೆ ಮನ್ಸ್‌ಗೆ ಖುಷಿ. ಮೊಟ್ಟೆಕೋಳಿ ಕಾಪು ಕುದ್ದಮೊಟ್ಟೆನ ಬೇಯಿಸಿಕಲ್ಲ. ಅದ್ ಮೊಟ್ಟೆ ಒಡ್ಡ್ ಮರಿ ಬಾಕೆ ಇರ್ದು ಹಂಗೆ ನಮ್ಮನ ತಿದ್ದುವಂವ ನಮಿಗೆ ಒಳ್ಳೆದಾಗಲಿ ತ್ತೇಳಿ ಆಶೆ ಪಟ್ಟದಲ್ಲದೆ ನಮ್ಮ ನಾಶಕ್ಕಾಗಿ ಅಲ್ಲ.

ಕೊಡವ ಭಾಷೆಲಿ : ಚೇಂದ್ರಿಮಾಡ ಜಿ. ಮುತ್ತಪ್ಪ

ಅರೆಭಾಷೆಗೆ : ಪಟ್ಟಡ ಪ್ರಭಾಕರ

ನುಡಿ ಮುತ್ತುಗಳು

ಬಿಟ್ಟ ಬಾಣ, ಆಡಿದ ಮಾತು, ಗತಜೀವನ ಮತ್ತು ಕಳೆದುಕೊಂಡ ಅವಕಾಶ ನಾಲ್ಕು ಎಂದಿಗೂ ತಿರುಗಿ ಬರುವುದಿಲ್ಲ.

ಕೆ. ಟಿ. ರಾಮಪ್ಪ (ಕುದುಕುಳಿ)

ಕಿಚ್ಚಿಗೆ ಇರುವೆ ಮುತ್ತುವುದೇ (ಕ್ರೂರಿಗಳ ಸಮೀಪಕ್ಕೆ ಹೋಗಲು ಜನರು ಹಿಂಜರಿಯುವರು)

ಭ್ರಷ್ಟಾಚಾರ ರಹಿತ ಆಡಳಿತಕ್ಕಾಗಿ ಯಾವುದೇ ನಿಷ್ಟುರ ಕ್ರಮಕ್ಕೂ ಸಿದ್ಧ



ಮಾದರಿ ಮಡಿಕೇರಿ ನಗರ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನ ಪುರಸಭಾ ಅಧ್ಯಕ್ಷೆ ಕಾವೇರಮ್ಮ ಸೋಮಣ್ಣ ಇಂಗಿತ.

ಮಡಿಕೇರಿ ಪುರ ಸಭಾ ವ್ಯಾಪ್ತಿಯ ಬಡ ಜನತೆ ತಮ್ಮ ಕೆಲಸ ಗಳಿಗಾಗಿ ಪುರಸಭಾ ಕಛೇರಿಗೆ ನಿತ್ಯ ಅಲೆಯುತ್ತಿರುವ ದೃಶ್ಯ ಸಾಮಾನ್ಯವಾಗಿದೆ. ಇಲ್ಲಿನ ಸಿಬ್ಬಂದಿ ಕರ್ತವ್ಯ ಪಾಲನೆಯಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂಬ ಆರೋಪವಿದೆ. ಯಾವದೇ ಕೆಲಸಕ್ಕೂ ಇಂತಿಷ್ಟು ಎಂದು ಮಾಮೂಲು ನೀಡಬೇಕಾದ ಪರಿಸ್ಥಿತಿ ಎದುರಾಗಿರುವದು ದುರಂತ ಎಂದು ಬಣ್ಣಿಸಿದ ಪುರಸಭೆಯ ನೂತನ ಅಧ್ಯಕ್ಷೆ ಕೂಡಕಂಡಿ ಕಾವೇರಮ್ಮ ಸೋಮಣ್ಣ ಅವರು, ತಮ್ಮ ಅಧಿಕಾರಾವಧಿಯಲ್ಲಿ ಭ್ರಷ್ಟಾಚಾರ ರಹಿತ ಆಡಳಿತ ನೀಡಲು ಯಾವದೇ ಸಿಬ್ಬಂದಿ ಮೇಲೆ ನಿಷ್ಟುರ ಕ್ರಮಕ್ಕೆ ಹಿಂಜರಿಯಲಾರೆ ಎಂಬ ದೃಢ ನಿಲುವು ವ್ಯಕ್ತ ಪಡಿಸಿದರು.

ಮಡಿಕೇರಿ ಪುರಸಭೆಯ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಆಯ್ಕೆಯಾದ ಕಾವೇರಮ್ಮ ತಮ್ಮ ಕಲ್ಪನೆಯ ಮಡಿಕೇರಿ ನಗರದ ಬಗ್ಗೆ ಈ ಮೇಲಿನ ಅಭಿಪ್ರಾಯ ಹೊರಗೆಡವಿದರು. ಪಡಿತರ ಚೀಟಿ, ಭೂ ದಾಖಲೆಗಳಿಗೆ ಸಂಬಂಧಿಸಿದಂತೆ ಪುರಸಭಾ ಕಛೇರಿಯಲ್ಲಿ ಆಗುವಂತಹ ಕೆಲಸಗಳಿಗೆ ಮಹಿಳೆಯರು ದಿನ ನಿತ್ಯ ಬಂದು ಹೋಗುತ್ತಿರುವ ದೃಶ್ಯ ನಾನೇ ಕಣ್ಣಾರೆ ಕಂಡಿದ್ದೇನೆ. ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವದಾಗಿ ಅವರು ವಿವರಿಸಿದರು.

ನಗರದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಕೇಳಿದ ಪ್ರಶ್ನೆಗೆ ಇದು ಇಂದು ನಿನ್ನೆಯದಲ್ಲ. ಆದರೆ ಈವರೆಗೆ ಪರಿಹಾರಕ್ಕೆ ಕೈಗೊಂಡ ಎಲ್ಲ ಕ್ರಮಗಳೂ ವಿಫಲವಾಗಿವೆ. ಈ ನಿಟ್ಟಿನಲ್ಲಿ ಶಾಶ್ವತ ಯೋಜನೆಯೊಂದನ್ನು ರೂಪಿಸಬೇಕಾದ ಅಗತ್ಯವಿದೆ. ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ. ಎಂ. ನಾಣಯ್ಯ ಅವರು ಸಮಗ್ರ ಯೋಜನೆ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆ ಬಗ್ಗೆ ಆಡಳಿತ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಪ್ರಮುಖರೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಎಲ್ಲಾ ವಾರ್ಡ್‌ಗಳಲ್ಲಿ ಉದ್ಯಾನವನ

ರಾಜ್ಯದಲ್ಲಿ ಮುಖ್ಯ ಮಂತ್ರಿ ಎಸ್. ಎಂ. ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿರುವುದರಿಂದ ಅಭಿವೃದ್ಧಿಗೆ ಪೂರಕವಾಗಲಿದೆ. ಮಡಿಕೇರಿ ನಗರದ ಒಳಚರಂಡಿ ಹಾಗೂ ಬೀದಿ ದೀಪದ ವ್ಯವಸ್ಥೆಗೆ ಮೊದಲ ಆದ್ಯತೆ ನೀಡಲಾಗುವದು. ಬೀದಿ ದೀಪ ನಿರ್ವಹಣೆಗೆಂದೇ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸುವ ಆಲೋಚನೆಯಿದೆ. ಇದನ್ನು ಸಮಿತಿಯೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು. ಅಲ್ಲದೆ, ಮಡಿಕೇರಿಯ 23 ವಾರ್ಡ್‌ಗಳ ಪೈಕಿ ಯಾವುದೇ ವಾರ್ಡ್‌ನಲ್ಲಿ ಸೂಕ್ತ ಖಾಲಿ ಜಾಗ ದೊರೆತಲ್ಲಿ ಸಣ್ಣ ಪ್ರಮಾಣದ ಉದ್ಯಾನವನ ನಿರ್ಮಿಸುವ ಮೂಲಕ ಪ್ರಕೃತಿ ಸೌಂದರ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದರು.

ಸ್ವಚ್ಛ ಮಡಿಕೇರಿ ಯೋಜನೆ ಕರ್ನಾಟಕದ ಕಾಶ್ಮೀರ ಎಂದು ಕರೆಯಲ್ಪಡುವ ಮಡಿಕೇರಿಯ ಶುಚಿತ್ವಕ್ಕೆ ಮೊದಲ ಆದ್ಯತೆ ನೀಡಬೇಕಿದೆ. ಈ ಬಗ್ಗೆ ಪುರಸಭಾ ಆಡಳಿತ ಮಂಡಳಿ ಕೆಲವು ಕಠಿಣ ಕ್ರಮಗಳನ್ನು ಕೈಗೊಳ್ಳಲೇಬೇಕಿದೆ. ರಸ್ತೆಗಳಲ್ಲಿ ಅಲೆಮಾರಿ ದನಗಳು, ನಾಯಿ ಹಂದಿಗಳ ಕಾಟವನ್ನು ತಪ್ಪಿಸಲು ಅವುಗಳ ಮಾಲೀಕರಿಗೆ ದಂಡ ವಿಧಿಸುವ ಪದ್ಧತಿಯನ್ನು ಜಾರಿಗೊಳಿಸುವ ಚಿಂತನೆಯಿದೆ. ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳುವರೊಂದಿಗೆಸಾರ್ವಜನಿಕರ ಸಹಕಾರದೊಂದಿಗೆ ಮಡಿಕೇರಿ ನಗರದ ಕಸ ನಿರ್ವಹಣೆಗೆ ಸ್ವಚ್ಛ ಮಡಿಕೇರಿ ಎಂಬ ಮಹತ್ವದ ಯೋಜನೆಯೊಂದನ್ನು ರೂಪಿಸುವ ಆಲೋಚನೆಯಿದೆ ಎಂದು ಕಾವೇರಮ್ಮ ಸೋಮಣ್ಣ ಅವರು ತಿಳಿಸಿದರು.

ಮಡಿಕೇರಿ ಕಾಲೇಜು ರಸ್ತೆ ವಿಸ್ತರಣೆ, ಖಾಸಗಿ ಬಸ್ ನಿಲ್ದಾಣ ಸ್ಥಳಾಂತರದ ಬಗ್ಗೆ ಉತ್ತರ ನೀಡಿದ ನೂತನ ಪುರಸಭಾ ಅಧ್ಯಕ್ಷರು ಈ ಬಗ್ಗೆ ಜಿಲ್ಲೆಯ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿರುವ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಇತರ ಸಚಿವರುಗಳು ಮತ್ತು ಪ್ರಮುಖರೊಂದಿಗೆ ಹಾಗೂ ಪುರಸಭೆಯ ಸರ್ವ ಸದಸ್ಯರ ನಿರ್ಧಾರದಂತೆ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ, ಜನತೆಯ ಭಾವನೆಗಳನ್ನು ನಾವು ಪರಿಗಣಿಸಬೇಕಾಗುತ್ತದೆ ಎಂಬ ಗಂಭೀರ ನುಡಿಯನ್ನು ಕಾವೇರಮ್ಮ ವ್ಯಕ್ತ ಪಡಿಸಿದರು.

ಕಾವೇರಿ ಕಲಾಕ್ಷೇತ್ರ ಅಭಿವೃದ್ಧಿ, ಪುರಸಭಾ ಅಧ್ಯಕ್ಷ ಉಪಾಧ್ಯಕ್ಷರ ಕಛೇರಿಯ ನೂತನ ನಿರ್ಮಾಣ, ಮಡಿಕೇರಿಗೆ ಪ್ರವೇಶ ಕಲ್ಪಿಸುವ ಮಂಗಳೂರು ರಸ್ತೆ ಹಾಗೂ ಮೈಸೂರು ರಸ್ತೆಗಳ ಆರಂಭದಲ್ಲಿ ಸ್ವಾಗತ ಕಮಾನು ನಿರ್ಮಾಣ ಮೊದಲಾದ ಯೋಜನೆಗಳ ಬಗ್ಗೆ ಪುರಸಭೆಯ ನೂತನ ಉಪಾಧ್ಯಕ್ಷರಾದ ಟಿ. ಎಂ. ಅಯ್ಯಪ್ಪ ಹಾಗೂ ವಿಪಕ್ಷ ಸದಸ್ಯರು ಸೇರಿದಂತೆ ಎಲ್ಲ ಸದಸ್ಯರ ವಿಶ್ವಾಸ ಗಳಿಸಿ ಪ್ರತ್ಯೇಕ ಯೋಜನೆಯನ್ನು ರೂಪಿಸಲಾಗುವುದೆಂದು ಅವರು ತಿಳಿಸಿದರು.

ಕಳೆದ ಬಾರಿ ಪುರಸಭೆಗೆ ಸ್ಪರ್ಧಿಸಿ ಬಿಜೆಪಿಯ ಅಭ್ಯರ್ಥಿ ಕಮಲಾ ಮುರುಗೇಶ್ ಅವರ ವಿರುದ್ಧ ಸೋಲು ಕಂಡಿದ್ದ ಕಾವೇರಮ್ಮ ಅವರು, ಈ ಬಾರಿ ಜಯ ಸಾಧಿಸುವದರೊಂದಿಗೆ ಪುರಸಭೆಯ ಅಧ್ಯಕ್ಷರಾಗಿಯೂ ಆಯ್ಕೆಯಾಗುವ ಮೂಲಕ ಪ್ರಥಮ ಮಹಿಳಾ ಅಧ್ಯಕ್ಷೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ತಾನು ಪುರಸಭೆಯ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿರುವ ಹಿನ್ನಲೆಯಲ್ಲಿ ಈ ಸ್ಥಾನ ಮತ್ತೊಬ್ಬರಿಗೆ ಮಾದರಿಯಾಗುವಂತೆ ಹಾಗೂ ಮುಂದೆಯೂ ಅಧ್ಯಕ್ಷ ಸ್ಥಾನವನ್ನು ಮಹಿಳೆಯರಿಗೆ ಮೀಸಲಿಡುವಂತೆ ಸರ್ವ ಸಮ್ಮತ ಅಭಿಪ್ರಾಯ ವ್ಯಕ್ತಗೊಳ್ಳುವಂತೆ ಕಾರ್ಯ ನಿರ್ವಹಿಸಿ

ಕೊಡಗು ಸಂಗಾತಿ ನಿಯೋಗದಿಂದ ಹರಿಶ್ಚಂದ್ರ ದೇವಾಲಯಕ್ಕೆ ಭೇಟಿ

ಇತ್ತೀಚೆಗೆ ದುಷ್ಕರ್ಮಿಗಳಿಂದ ಹಾನಿಗೀಡಾಗಿ ಕೊಡಗಿನಲ್ಲಿ ಗಲಭೆಗೆ ಕಾರಣವಾಗಿದ್ದ ಕೊಡಗಿನ ಇತಿಹಾಸ ಪ್ರಸಿದ್ಧ, ಪುಣ್ಯ ಕ್ಷೇತ್ರವೆನಿಸಿಕೊಂಡು ನಿರ್ಲಕ್ಷ್ಯಕ್ಕೊಳಗಾಗಿ, ಈಗ ತನ್ನಿಂದ ತಾನೇ ಪ್ರಸಿದ್ಧಿಗೊಂಡು, ಹಲವು ಗಣ್ಯರನ್ನು ತನ್ನ ಬಳಿಗೆ ಸೆಳೆದು ಕೊಂಡ ಕೊಟ್ಟಮುಡಿಯ ಹರಿಶ್ಚಂದ್ರ ದೇವಾಲಯಕ್ಕೆ 'ಕೊಡಗು ಸಂಗಾತಿ' ಪತ್ರಿಕಾ ತಂಡ ಜನವರಿ 13 ರಂದು ಭೇಟಿ ನೀಡಿ ವಸ್ತು ಸ್ಥಿತಿಯನ್ನು ಪರಿಶೀಲಿಸಿತು.

ಪುಣ್ಯನದಿ ಕಾವೇರಿಯ ಸುಂದರ ತಟದ ಮೇಲೆ, ಪಾಳು ಭೂಮಿಯಂಚಿನಲ್ಲಿ ಸೊರಗಿ ನಿಂತಿರುವ ಶಿವಶಿವೆಯರ ಗುಪ್ತ ಸಂಗಮ ಪುರಾಣೇತಿಹಾಸಕ್ಕೆ ಮೂಕ ಸಾಕ್ಷಿಯಾಗಿ ನಿಂತಿರುವುದು ಸಂಗಾತಿಯನ್ನು ಮೂಕ ವಿಸ್ಮಿತರನ್ನಾಗಿಸಿತು. ಒಂದು ಕಾಲದಲ್ಲಿ ಭಕ್ತರನ್ನು ಸೂಜಿಗಲ್ಲಿನಂತೆ ತನ್ನೆಡೆಗೆ ಆಕರ್ಷಿಸುತ್ತಿದ್ದ, ಕೊಡಗಿನ ಲಿಂಗರಾಜ ಅರಸನಿಂದ, ತನ್ನನ್ನು ತಾನು ಶೃಂಗರಿಸಿಕೊಂಡು ಭಕ್ತರಿಗೆ ಭಕ್ತಿಯ ಸಿಂಚನ ಗೈಯ್ಯುತ್ತಿದ್ದ ಕುರುಹಾಗಿ 'ಲಿ' ಎಂಬ ಅಕ್ಷರ ಗಳನ್ನೊಳಗೊಂಡ ಹಾಸುಗಲ್ಲುಗಳು ಹತ್ತೆಂಟು ನದಿಯಲ್ಲಿ ಮುಳುಗಿದ್ದದು ಸಂಗಾತಿಯ ಕಣ್ಣಿಗೆ ಬಿದ್ದಿತು. ಉಳಿದುದೆಲ್ಲವು ಅನ್ಯರ ಪಾಲಾಗಿ ಬಿಟ್ಟಿದೆಯೆಂಬುದು ಸ್ಥಳೀಯರ ಅಳಲಾಗಿತ್ತು. ದೇವಸ್ಥಾನದ ಅಂಗಳದ ತನಕ ಸ್ಥಳ ಅತಿ ಕ್ರಮಿಸಲಾಗಿದೆ. ನಾಗ ದೇವತೆಗಳ ವಿಗ್ರಹಗಳು ರಾಶಿಯಾಗಿ ಬಿದ್ದಿದೆ. ದೇವಾಲಯದ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕಾಗಿ ಅರಸರಿಂದ ಬಳುವಳಿ ಯಾಗಿ ಬಂದಿದ್ದ ಸುಮಾರು 79 ಎಕರೆಗಳಷ್ಟು ಭೂಮಿಯನ್ನು ಸಂಬಂಧ ಪಟ್ಟ ಅರ್ಚಕರೂ ಅನ್ಯರಿಗೆ ಮಾರಾಟ ಮಾಡಿ ಕೈ ತೊಳೆದುಕೊಂಡಿದ್ದೇ ಅಲ್ಲದೆ ದೇವರಾಜ ಅರಸರ ಕಾಲದ "ಉಳುವವನಿಗೆ ಭೂಮಿ" ಅನುಸಾರ ಪರಾಂಬರೆಯಾಗಿದ್ದು ಕೊಡಗಿನಲ್ಲಿ ನಡೆದ ಎಲ್ಲಾ ಪ್ರಮಾದಗಳಿಗೆ ಮೂಲ ಕಾರಣವೆಂಬುದು ನಂಬಲೇ ಬೇಕಾದ ಕಟುಸತ್ಯ. ಈ ಜಾಗವನ್ನು ಪಡೆದುಕೊಂಡ ವ್ಯಕ್ತಿಗಳು ಇನ್ನು ಹೆಚ್ಚು ಹೆಚ್ಚು ಜಾಗವನ್ನು ಒತ್ತುವರಿ ಮಾಡುತ್ತಾ ಅಂತಹ ಒಂದು ಸುಂದರ ಪುಣ್ಯ ಕ್ಷೇತ್ರವನ್ನು ಇನ್ನಿಲ್ಲವಾಗಿಸಲು ಹೊರಟ್ಟಿದ್ದನ್ನು ದುರಂತವೆನ್ನದೆ ಮತ್ತಿನ್ನೇನನ್ನಲು ಸಾಧ್ಯ? ಸರಕಾರ ಈಗ ಕೇವಲ ಎಂಟು ಲಕ್ಷ ರೂಪಾಯಿಗಳ ಘೋಷಣೆ ಮಾಡಿದರು ಇನ್ನು ಪರಿಹಾರ ಸಿಕ್ಕಿಲ್ಲ. ಆದರೆ ಸರಕಾರ ಬಿಡುಗಡೆ ಮಾಡುವ ಎಂಟು ಲಕ್ಷ ರೂಪಾಯಿಗಳಾದರೂ ಸದ್ವಿನಿಯೋಗವಾಗ ಬಹುದೆಂಬುದೇ ಸಂಶಯಕರ ಎಂದು ಸ್ಥಳೀಯರೊಬ್ಬರು ಪತ್ರಿಕೆಯೊಂದಿಗೆ ನೋವು ತೋಡಿಕೊಂಡರು. ಆದರೆ ಹಿಂದೂ ಜನಾಂಗಕ್ಕೆ ಆದ ಘಾಸಿ ಮಾಯಲು ಕೋಟಿ ಕೊಟ್ಟರು ತಿರುಗಿ ಬಂದಿತೆ ಎನ್ನುವುದು ತಂಡದ ಖೇದವಾಗಿದೆ.

ನಂತರ ಪಾಲೂರು ಮಹಾಲಿಂಗೇಶ್ವರ ದೇವಾಲಯದಲ್ಲಿ ಭಕ್ತ ಜನ ಸಂಘದ ಮತ್ತು ಮುಜರಾಯಿ ಇಲಾಖೆನ್ನುದ್ದೇಶಿಸಿ ಮಾತನಾಡಿದ ಪತ್ರಿಕೆಯ ಗೌರವ ಸಂಪಾದಕ ಪಟ್ಟಡ ಪ್ರಭಾಕರರವರು ಕೊಡಗಿನಲ್ಲಿ ನಾವಿಂದು ಕೊಡಗರು ಗೌಡರು ಎಂಬ ಬೇಧ ಭಾವದಿಂದ ಪರಸ್ಪರ ಎಳೆದಾಡಿಕೊಂಡಿದ್ದರೆ ನಮ್ಮ ಧರ್ಮ, ಸಂಸ್ಕೃತಿ, ನಾಡಿನ ಅಭಿವೃದ್ಧಿಗೆ ಮಾರಕವಾಗಬಹುದೆಂದು ಅಭಿಪ್ರಾಯ ವ್ಯಕ್ತ ಪಡಿಸಿದರು. ಇನ್ನೊಬ್ಬರ ಮೇಲೆ ಧಾಳಿ ಮಾಡುವ ಉದ್ದೇಶವನ್ನಿಟ್ಟುಕೊಳ್ಳದೆ, ನಮ್ಮ ರಕ್ಷಣೆಗಾಗಿ, ನಾಡಿನ ರಕ್ಷಣೆಗಾಗಿ, ಧರ್ಮದ ರಕ್ಷಣೆಗಾಗಿ, ಕೊಡಗಿನ ಜನರೆಲ್ಲ ಒಂದುಗೂಡಿ, ತಲೆಗೆ ಐದು ರೂಪಾಯಿಯಂತೆ ತಲೆಗಂದಾಯ ಎತ್ತಿ, ಹೊರಗಿನ ಜನರ ಟಿ. ವಿ., ಪತ್ರಿಕೆಗಳ ಸಹಕಾರ ಕೋರಿ ಕೋಟಿ ರೂಪಾಯಿಗಳ ನಕ್ಷೆ ಮಾಡಿ, ಅದಕ್ಕೆ ಪರಿಶ್ರಮಿಸಿದಲ್ಲಿ ಖಂಡಿತ ನಾಡಿಗೆ ಶ್ರೇಯಸ್ಕರ ಅನ್ನುವ ಅಭಿಪ್ರಾಯವಿತ್ತರಲ್ಲದೆ, ಸದ್ಯಕ್ಕೆ ಭಕ್ತಜನ ಸಂಘದ ವತಿಯಿಂದ ದೇವಸ್ಥಾನಕ್ಕೆ ಹೋಗಲು ಮಾರ್ಗವನ್ನು ನಿರ್ಮಿಸಿ ಕ್ಷೇತ್ರವಾಗಿಸುವ ಕನಸು ನಾಡಿನ ಜನತೆಯದಾಗಿದೆ. ಅಲ್ಲದೆ ಕೊಡಗಿನ ಶ್ರೇಷ್ಠ ಪರಂಪರೆಯನ್ನು ಎತ್ತಿ ಹಿಡಿಯಬೇಕೆಂದು ಸಲಹೆ ನೀಡಿದರು.

ನಿಯೋಗದಲ್ಲಿ ಕೊಡಗು ಸಂಗಾತಿಯ ಬರಹಗಾರರಾದ ಬೈತಡ್ಕ ಬೆಳ್ಯಪ್ಪ, ಪಟ್ಟಡ ಶಿವಕುಮಾರ, ಸೂದನ ಪೊನ್ನಪ್ಪ, ಸೂದನ ರಮಾನಂದ ಬೈತಡ್ಕ ಮೊಣಪ್ಪ ಹಾಗೂ ಇನ್ನು ಮೊದಲಾದವರು ಹಾಜರಿದ್ದರು.

ವರದಿ : **ಕೊಡಗು ಸಂಗಾತಿ**

ತೋರಿಸುವದಾಗಿ ಕಾವೇರಮ್ಮ ಆಶಾ ಭಾವನೆ ವ್ಯಕ್ತ ಪಡಿಸಿದರು.

ಪರಿಚಯ

ಮೂಲತಃ ಕಾಲಗುಂದ ನಿವಾಸಿಯಾದ ಕೊಡಪಾಲು ಸುಬ್ರಾಯನವರ ಪ್ರಥಮ ಪುತ್ರಿಯಾದ ಕಾವೇರಮ್ಮ ಅವರು ಬೇಂಗೂರು ಗ್ರಾಮದ ಕೂಡಕಂಡಿ ಸೋಮಣ್ಣ ಅವರನ್ನು ವಿವಾಹವಾಗಿದ್ದು, ಪ್ರಸ್ತುತ ಮಡಿಕೇರಿಯಲ್ಲಿ ನೆಲೆಸಿದ್ದಾರೆ. ಮೂವರು ಪುತ್ರರನ್ನು ಹೊಂದಿರುವ ಕಾವೇರಮ್ಮ ಅವರು ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತೆಯಾಗಿ, ವಿವಿಧ ಘಟಕಗಳ ಪದಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ಕೊಡಗು ಬೆಳೆಗಾರರ ಸಹಕಾರ ಸಂಘದ ನಾಮ ನಿರ್ದೇಶಿತ ಸದಸ್ಯೆಯಾಗಿ, ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಉಪಾಧ್ಯಕ್ಷೆಯಾಗಿ, ಭಾರತ ಸೇವಾದಳದ ಮಹಿಳಾ ಸಂಚಾಲಕಿಯಾಗಿ, ಗೌಡ ಸಮಾಜದ ನಿರ್ದೇಶಕಿಯಾಗಿ, ಗೌಡ ಮಹಿಳಾ ಒಕ್ಕೂಟದ ಕಾರ್ಯದರ್ಶಿ ಯಾಗಿ, ಸೇವೆ ಸಲ್ಲಿಸಿದ ಪೂರ್ಣ ಅನುಭವವಿದೆ.

ಇನ್ನು ಚಿಕ್ಕ ಪ್ರಾಯದವರಾದ ಶ್ರೀಮತಿ ಕೂಡಕಂಡಿರ ಕಾವೇರಮ್ಮ ಸೋಮಣ್ಣನವರು ತಮಗೆ ಸಿಕ್ಕಿದ ಈ ಸುವರ್ಣಾವಕಾಶವನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಸಾಧನೆಗೈದಲ್ಲಿ ಖಂಡಿತವಾಗಿಯೂ ಮುಂದೆ ಭವಿಷ್ಯದಲ್ಲಿ ಜನಾಂಗದ ಪ್ರಥಮ ವಿಧಾನ ಸಭಾ ಸದಸ್ಯೆ ಅಥವಾ ರಾಜ್ಯ ಮಂತ್ರಿಯವರಾಗುವುದರಲ್ಲಿ ಯಾವ ಸಂಶಯವೇ ಇರುವುದಿಲ್ಲ. ಎಂಬ ಅಂಶವನ್ನು ಸಂಗಾತಿ ಈ ಸಂದರ್ಭದಲ್ಲಿ ಆಶೀಸುತ್ತದೆ.

- ಸಂಗಾತಿ

ಕುರುಡ ಬಲ್ಲನೇ ಹಗಲು - ಇರುಳ

ಪಾಲೂರು ಕಾಳಿಕಾಂಬ ಯುವತಿ ಮಂಡಳಿಯ ಪ್ರಥಮ ವಾರ್ಷಿಕೋತ್ಸವ

ಸಂಸ್ಕೃತಿಯ ಬೆಳಗಿಸಬೇಕೆಂದು ಗಣ್ಯರ ಆಶಯ

ವರದಿ : ಕೊಡಗು ಸಂಗಾತಿ

ಹಸಿರು ಬೆಟ್ಟಗಳ ನಡುವಿನ, ಹೃನ್ಮನ ಸೆಳೆಯುವ ಸುಂದರ ಪರಿಸರದ ಮಡಿಲಲ್ಲಿ, ಹಾಲಿನಷ್ಟು ಪವಿತ್ರವಾದ ಪಾಲೂರು ಗ್ರಾಮದಲ್ಲಿ, ಗೌಡ ಜನಾಂಗದ ಸಂಸ್ಕೃತಿಯನ್ನು ಬೆಳೆಸಿ ಬೆಳಗಿಸುವ, ಕೀಳರಿಮೆಯನ್ನು ದೂರ ಮಾಡಿ ಯುವತಿಯರನ್ನು ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿ, ಅವರಲ್ಲಿರುವ ಪ್ರತಿಭೆಗೆ ಪ್ರೋತ್ಸಾಹ ನೀಡಿ, ಪ್ರಜ್ವಲಿಸುವಂತೆ ಮಾಡುವ ಪಣ ತೊಟ್ಟು, ಅಸ್ತಿತ್ವಕ್ಕೆ ಬಂದಿರುವ ಪಾಲೂರು ಕಾಳಿಕಾಂಬ ಯುವತಿ ಮಂಡಳಿಯು ಜನವರಿ 13 ರಂದು ತನ್ನ ಪ್ರಥಮ ವಾರ್ಷಿಕೋತ್ಸವನ್ನು, ಪುದಿಯನೆರವನ ಕುಟುಂಬಸ್ಥರ ಕೊಲ್ಲ ಭಾಣೆಯಲ್ಲಿ ಸಂಭ್ರಮ, ಸಡಗರ ಶಿಸ್ತು ಗಳೊಂದಿಗೆ ಆಚರಿಸಿ ಕೊಂಡಿತು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ನಿವೃತ್ತ ಮಡಿಕೇರಿ ಕ್ಷೇತ್ರಾಧಿಕಾರಿ ಸೂದನ ಪೊನ್ನಪ್ಪನವರು ನಮ್ಮ ಜನಾಂಗ ಬಂಧುಗಳು ಕೀಳರಿಮೆ, ಅಂಜುಬುರುಕುತನ ಬಿಡಬೇಕು. ನಮ್ಮ ಯುವ ಜನತೆಯ ಅಭಿವೃದ್ಧಿಗಾಗಿ ಅವರ ವಿದ್ಯಾಭ್ಯಾಸಕ್ಕಾಗಿ, ಆರ್ಥಿಕ ಸುಧಾರಣೆಗಾಗಿ ಹಾಗೂ ಉದ್ಯೋಗಕ್ಕಾಗಿ ಪ್ರತಿಯೊಬ್ಬರೂ ಸಹಕಾರ ನೀಡಬೇಕೆಂದು ಆಶಿಸಿದರು. ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಮಡಿಕೇರಿ ಪುರಸಭೆಯ ಪ್ರಥಮ ಮಹಿಳಾ ಅಧ್ಯಕ್ಷೆ ಕೂಡಕಂಡಿ ಕಾವೇರಮ್ಮ ಸೋಮಣ್ಣನವರು ಮಾತನಾಡಿ ಇಂತಹ ಕಾರ್ಯಕ್ರಮಗಳಿಂದ ಮಾತ್ರ ಪ್ರತಿಭೆಗಳು ಬೆಳಗಲು ಸಾಧ್ಯ. ಗ್ರಾಮ ಮಟ್ಟದಿಂದಲೇ ಪ್ರತಿಭೆಗಳು ಬೆಳಗುವಂತಾಗಬೇಕು. ಯುವತಿಯರ ಮುನ್ನಡೆಗೆ ಮಹನೀಯರೂ ಸಹಕರಿಸಬೇಕೆಂದು ಸಲಹೆ ನೀಡಿದರು.

ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷ ತುಂತ ಜಗದೀಶ್ ವೆಂಕಟೇಶ್‌ರವರು ಮಾತನಾಡಿ, ಯಾವುದೇ ಕಾರ್ಯಕ್ರಮಗಳು ಕೇವಲ ಆರಂಭ ಶೂರತನವನ್ನು ಪ್ರದರ್ಶಿಸಲು ಸೀಮಿತವಾಗಿರದೆ ಅವುಗಳು ನಿರಂತರವಾಗಿ ಸಾಗಿ ಜನಾಂಗದ ಏಳಿಗೆಗೆ, ಪೀಳಿಗೆಗೆ ದಾರಿ ದೀಪವಾಗಬೇಕೆಂದು ಹಾರೈಸಿದರು. ಶತ ಶತಮಾನಗಳ ಇತಿಹಾಸದಿಂದಿರುವ ನಾವಿಂದು ಯಾರಿಗೇನೂ ಕಮ್ಮಿಯಿಲ್ಲ. ನಮ್ಮ ಸಂಸ್ಕೃತಿಯನ್ನು ಕೀಳರಿಮೆ ಬಿಟ್ಟು ಎತ್ತಿ ಹಿಡಿಯಬೇಕೆಂದು ಕರೆ ನೀಡಿದರು. ಇನ್ನೊಬ್ಬ ಮುಖ್ಯ ಅತಿಥಿ ಮೈಸೂರಿನಿಂದ ಆಗಮಿಸಿದ ಕೊಡಗು ಸಂಗಾತಿ ಗೌರವ ಸಂಪಾದಕ ಪಟ್ಟಡ ಪ್ರಭಾಕರರವರು ಮಾತನಾಡಿ, ಇಂತಹ ಕಾರ್ಯಕ್ರಮಗಳು ಸಂಸ್ಕೃತಿಯ ಏಳಿಗೆಗೆ ಶುಭಕರವಾದುದು, ಮಹಿಳೆಯರಿಂದ ಮಾತ್ರ ನಮ್ಮ ಸಂಸ್ಕೃತಿಯ ಉಳಿವು ಸಾಧ್ಯ. 'ಕೊಡಗು ಸಂಗಾತಿ' ಪತ್ರಿಕೆಯ ಏಳಿಗೆಗೂ ಮಹಿಳೆಯರ ಸಹಕಾರವೇ ಮುಖ್ಯವಾದದಲ್ಲದೆ, ಈ ಕಾರ್ಯಕ್ರಮ ಸಂಘಟಿಸಲು ನೆರವಾದ ಕೊಡಗು ಗೌಡ ಮಹಿಳಾ ಒಕ್ಕೂಟದ ಸದಸ್ಯರಾದ ಬೈತಂಡ ಜಾನಕಿ, ಬೈತಡ್ಕ ದೇವಮ್ಮ, ಸೂದನ ಕಮಲಾ ರಾಘವಯ್ಯ ನವರನ್ನು ಶ್ಲಾಘಿಸಿದರು. ನಮ್ಮ ಮಾತೃಭಾಷೆಯನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ನಮ್ಮ ಇತಿಹಾಸವನ್ನು ತಿಳಿಯ ಪಡಿಸಿ ರವಾನಿಸಲು ಗ್ರಾಮ ಮಟ್ಟದಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಸಾಂಸ್ಕೃತಿಕ ಅಕಾಡೆಮಿಗೆ ಕಿವಿಮಾತು ಹೇಳಿದರು.


ಮಡಿಕೇರಿ ಹಾಗೂ ನಾಪೋಕ್ಲು ಕಾಲೇಜುಗಳ ಉಪನ್ಯಾಸಕ ಪಟ್ಟಡ ಶಿವಕುಮಾರ್‌ರವರು ಮಾತನಾಡಿ ಈಗಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ನಮ್ಮ ಜನಾಂಗ ಮುಂದೆ ಬರ ಬೇಕಾದರೆ ಸೂಕ್ತ ಮೀಸಲಾತಿ ನಮ್ಮ ಜನಾಂಗಕ್ಕೆ ದೊರೆಯಬೇಕು. ಮೀಸಲಾತಿಯ ಸೌಲಭ್ಯವನ್ನು ದಕ್ಕಿಸಿಕೊಳ್ಳಲು ಯುವ ಜನತೆಗೆ ಇಂದು ಹೋರಾಟ ಅನಿವಾರ್ಯವಾಗಿದೆ ಎಂದು ಸಾರಿದರು. ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಕಾರ್ಯದರ್ಶಿ ಕೋಡಿ ಚಂದ್ರಶೇಖರರವರು ಮಾತನಾಡಿ ಹಲವರ ತ್ಯಾಗದ ಫಲವಾಗಿ ಹಲವರ ಹೋರಾಟದ ಛಲದಿಂದಾಗಿ ಇಂದು ನಾವು ಒಗ್ಗಟ್ಟಿನಿಂದ ಮುಂದೆ ಸಾಗುತ್ತಿದ್ದೇವೆ. ಜನಾಂಗದಲ್ಲಿರುವ ಶ್ರೀಮಂತರು ತಮ್ಮ ಆದಾಯದಲ್ಲಿ, ಸ್ವಲ್ಪ ಭಾಗವನ್ನಾದರೂ ಜನಾಂಗದ ಏಳಿಗೆಗೆ ಮೀಸಲಾಗಿಸಬೇಕೆಂದು ಮನವಿ ಮಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಕೊಡಗು ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಚೀಯಂಡಿ ರಾಧ ಯಾದವರವರು ಮಾತನಾಡಿ ಮಹಿಳೆ ಪುರಾಣಗಳಲ್ಲಿ ಲಕ್ಷ್ಮಿಯಾಗಿಯೂ, ಸರಸ್ವತಿಯಾಗಿಯೂ, ದುರ್ಗೆಯಾಗಿಯೂ ಪ್ರಮುಖ ಪಾತ್ರ ನಿರ್ವಹಿಸಿದ್ದಾಳೆ. ಆದುದರಿಂದ ನಾವಿಂದು ಹೆಂಗಸರು ಕೀಳರಿಮೆ ಹೊಂದಬೇಕಿಲ್ಲ. ಆದರೂ ತಮ್ಮ ಸ್ವಂತ ಜವಾಬ್ದಾರಿಗಳನ್ನೂ ನಿರ್ವಹಿಸಿಕೊಂಡು ಅನಂತರ ಸಮಾಜ ಸೇವೆಯಲ್ಲಿ ಸಕ್ರಿಯರಾಗಬೇಕೆಂದು ಬಯಕೆ ವ್ಯಕ್ತ ಪಡಿಸಿದರು.

ಕಾರ್ಯಕ್ರಮಕ್ಕೆ ಮೊದಲು ಪುಟಾಣಿಗಳಿಗೆ ಕಾಳು ಹೆಕ್ಕುವುದು, ಓಟದ ಸ್ಪರ್ಧೆಗಳು ನಿಂಬೆ ಹಣ್ಣು ಚಮಚ, ಚೆಂಡು ದಾಟಿಸುವುದು, ಭಾರದ ಗುಂಡು ಎಸೆತ, ವಾಲಿಬಾಲ್ ಹಗ್ಗ ಜಗ್ಗಾಟ, ಥ್ರೋಬಾಲ್ ಮೊದಲಾದ ಪಂದ್ಯಗಳು ನಡೆದು ಕೊಲ್ಲ ಬಾಣೆಗೆ ಮೆರುಗು ನೀಡಿದವು. ಇದೇ ಸಂದರ್ಭದಲ್ಲಿ ವಿಜ್ಞಾನ ಸ್ಪರ್ಧೆಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಪಡೆದಿರುವ ನಾಪೋಕ್ಲು ಪ್ರಾಥಮಿಕ ಶಾಲೆಯ ಶಿಕ್ಷಕಿ ಪುದಿನೆರವನ ರೇವತಿ ರಮೇಶ್‌ರವರನ್ನು ಸನ್ಮಾನಿಸಲಾಯಿತು. ನಾಟೋಳನ ಶೀಲಾ ಉತ್ತಯ್ಯನವರು ಮೊದಲಿಗೆ ಪ್ರಾರ್ಥಿಸಿದರು. ಪಾಲೂರು ಪಂಚಾಯಿತಿ ಸದಸ್ಯೆ ಪುದಿಯನೆರವನ ಆಶಾರವರು ಸ್ವಾಗತಿಸಿದರೆ, ರೇವತಿ ರಮೇಶ್ ರವರು ವೀಕ್ಷಕ ವಿವರಣೆ ನೀಡಿದ್ದಲ್ಲದೆ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಬೈತಡ್ಕ ಸುಶೀಲಾ ವೆಂಕಟೇಶ್‌ರವರು ವರದಿ ವಾಚಿಸಿದರು. ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಅಕಾಡೆಮಿಯ ಕಾರ್ಯದರ್ಶಿಗಳಾದ ನೆಯ್ಯಣ್ಣೀರ ಹೇಮಲತಾ, ಬೈತಡ್ಕ ಅರುಣ್ ಕುಮಾರ್, ಮಹಿಳಾ ಒಕ್ಕೂಟದ ಬೈತಡ ಜಾನಕಿ, ಬೈತಡ್ಕ ದೇವಮ್ಮ, ಸೂದನ ಕಮಲಾ, ಪಾಲೂರು ಕಾಳಿಕಾಂಬ ಮಹಿಳಾ ಸಂಘದ ಅಧ್ಯಕ್ಷೆ ಪುದಿಯನೆರವನ ಅಮ್ಮವ್ವ, ಅಲ್ಲದೆ ಬೈತಡ್ಕ ಸೂದನ, ಪುದಿಯನೆರವನ ಕುಟುಂಬಗಳ ಪಟ್ಟೇದಾರರು ಅಲ್ಲದೆ ಅಚ್ಚಡ ಎಡಿಕೇರಿ ಕುಟುಂಬಸ್ತರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಯುವತಿಯರು, ಮುದುಕಿಯರೆನ್ನುವ ಭೇದ ಭಾವ ವಿಲ್ಲದೆ ಎಲ್ಲರೂ ಒಟ್ಟಿಗೆ ಹೆಜ್ಜೆ ಹಾಕಿ ಹಲವು ಮನೋರಂಜನೆ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಚಿಕ್ಕ ಮೀನನ್ನು ದೊಡ್ಡ ಮೀನು ನುಂಗುತ್ತದೆ (ದುರ್ಬಲರನ್ನು ಬಲಿಷ್ಠರು ನಾಶ ಪಡಿಸುತ್ತಾರೆ)

ಪಟ್ಟಡ ದೇವಯ್ಯ ಶಿವಕುಮಾರ್ ಇವರಿಗೆ ಡಾಕ್ಟರೇಟ್ ಪದವಿ




ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ 22 ನೇ ಡಿಸಂಬರ್ 2001 ರಂದು ನಡೆದ 82 ನೇ ಘಟಿಕೋತ್ಸವದಲ್ಲಿ ಶ್ರೀ ಪಿ. ಡಿ. ಶಿವಕುಮಾರ್‌ರವರಿಗೆ ಬಯೋ ಟೆಕ್ನಾಲಜಿ ಕ್ಷೇತ್ರದಲ್ಲಿ ಮಾಡಿದ ಅತ್ಯುನ್ನತ ಅಧ್ಯಯನ ಸಾಧನಕ್ಕಾಗಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಯಿತು. ಸದುಕುಲಾಧಿಪತಿ ಮಾನ್ಯ ಡಾ|| ಪರಮೇಶ್ವರ ರವರು ಶಿವಕುಮಾರ್‌ಗೆ ಪದವಿ ಪ್ರಧಾನ ಮಾಡಿದರು. ಶಿವ ಕುಮಾರ್‌ರವರು ಮೂಲತಃ ಅವಂದೂರು ಗ್ರಾಮ ಪಟ್ಟಡ ಮನೆಯವರಾಗಿದ್ದು ಪ್ರಸ್ತುತ ಮಡಿಕೇರಿ ನಿವಾಸಿ ಶ್ರೀ ಪಿ. ಸಿ. ದೇವಯ್ಯ ಸೀತಮ್ಮ ದಂಪತಿಗಳ ಪುತ್ರರಾಗಿರುತ್ತಾರೆ.

ಇವರು ಪ್ರಾಥಮಿಕ ಶಿಕ್ಷಣವನ್ನು ದಂತ ಮೈಕಲರ ಶಾಲೆಯಲ್ಲಿಯೂ, ಪ್ರೌಢ ಮತ್ತು ಕಾಲೇಜು ಶಿಕ್ಷಣವನ್ನು ಸಂತ ಫಿಲೋಮಿನಾ ಹೈಸ್ಕೂಲ್‌ನಲ್ಲಿಯೂ ಮತ್ತು ಕಾಲೇಜನ್ನು ಪುತ್ತೂರುನಲ್ಲಿಯೂ ಯಂ ಯಸ್ಸ್ (ಬಾಟನಿ)ಯನ್ನು ಮಂಗಳೂರು ವಿಶ್ವ ವಿದ್ಯಾನಿಲಯ ಕೊಣಾಜೆಯಲ್ಲಿ ಮುಗಿಸಿರುತ್ತಾರೆ. ಇವರು ಸಂತ ಫಿಲೋಮಿನಾ ಕಾಲೇಜುನಲ್ಲಿ ವ್ಯಾಸಂಗ ಮಾಡುತ್ತಿರುವಾಗ ಅಂತರ ವಿಶ್ವವಿದ್ಯಾನಿಲಯದಲ್ಲಿನ ಹಾಕಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಇವರು ಹಿರಿಯರ ವಿಭಾಗದ ಯನ್. ಸಿ. ಸಿ. ಯಲ್ಲಿ ಸಾರ್ಜೆಂಟ್ ಆಗಿ ಕೆಲಸ ನಿರ್ವಹಿಸಿದ್ದು ಡೆಲ್ಲಿಯಲ್ಲಿ ಗಣ ರಾಜ್ಯೋತ್ಸವದಲ್ಲಿ ಭಾಗವಹಿಸಿದ್ದರು. ಇವರು ಮೈಸೂರಿನ CFTRI ನಲ್ಲಿ ಸಂಶೋಧನೆ ನಡೆಸುತ್ತಿದ್ದ ಅವಧಿಯಲ್ಲಿ C.S.T.R. ನ PhD ಪ್ರೊಗ್ರಾಂನಲ್ಲಿ ಆಯ್ಕೆ ಆಗಿ ಜೈವಿಕ ತಂತ್ರಜ್ಞಾನ ವಿಭಾಗದಲ್ಲಿ ಸಂಶೋಧನೆ ನಡೆಸಿ ಅತ್ಯುನ್ನತ ಸಾಧನೆಗೆ ಡಾಕ್ಟರೇಟ್ ಪದವಿ ಗಳಿಸಿದ್ದಾರೆ .

ಇವರು ತನ್ನ ಯಶಸ್ಸಿಗೆ ಹಗಲು ಇರುಳೆನ್ನದೆ ನಿರಂತರ ಪರಿಶ್ರಮ ಗುರುಗಳ ಮಾರ್ಗದರ್ಶನ, ಹಿರಿಯರ ಆಶೀರ್ವಾದ ದೇವರ ಕೃಪೆಯೇ ಕಾರಣ ಎನ್ನುವ ಇವರು ಜೈವಿಕ ತಂತ್ರಜ್ಞಾನದಲ್ಲಿಯೇ ಮುಂದುವರಿಯಬೇಕೆಂದು ಕೊಂಡಿರುವ ಇವರಿಗೆ ಕುಲಗುರು ಶ್ರೀ ವೆಂಕಟರಮಣಸ್ವಾಮಿಯು ಶೃಂಗೇರಿ ಶಾರದಾಂಬೆಯು ಇನ್ನು ಹೆಚ್ಚಿನ ಯಶಸ್ಸನ್ನು ಗಳಿಸಲು ಶಕ್ತಿ ನೀಡಲಿ ಮತ್ತು ಗೌಡ ಜನಾಂಗಕ್ಕೆ ಹೆಚ್ಚು ಕೀರ್ತಿಯನ್ನು ತಂದು ಕೊಡಲಿ ಎಂದು ಕೊಡಗು ಸಂಗಾತಿ ಈ ಸಂದರ್ಭದಲ್ಲಿ ಶುಭವನ್ನು ಹಾರೈಸುತ್ತದೆ.

– ನಿಶಾ ಪಟ್ಟಡ

ಹಿರಿಯರ ರಾಷ್ಟ್ರೀಯ ಕ್ರೀಡಾ ಕೂಟಲಿ ಪೂಜಾರಿರ ಆನಂದ ಅವರ ಸಾಧನೆ



ಪೂಜಾರಿರ ಆನಂದ

1-10-2000 ರಿಂದ 3-10-2000ದ ವರೆಗೆ ಭೂಪಾಲೆಲಿ ನಡ್ದ ಇಪ್ಪತ್ತೆರಡರ ರಾಷ್ಟ್ರೀಯ ಕ್ರೀಡಾ ಕೂಟಲಿ ಗಾಳಿಬೀಡು ಗ್ರಾಮದ ಪೂಜಾರಿರ ಸೀತಮ್ಮ, ದಿವಂಗತ ಮೊಣ್ಣಪ್ಪನವರ ನಾಲ್ಕನೇ ಮಗ ಪಿ. ಎಂ. ಆನಂದ ಇವು 800 ಮೀಟರ್ ಓಟನ 2.07 ಸೆಕೆಂಡಲಿ ಮತ್ತೆ 1500 ಮೀಟರ್ ಓಟನ 4.24 ಸೆಕೆಂಡೆಲಿ ಗುರಿ ಮುಟ್ಟಿ ಎರಡು ವಿಭಾಗಲಿ ಮೂರನೇ ಸ್ಥಾನ ಪಡ್ದು ಕೊಡಗಿಗೆ ಮತ್ತೆ ಗೌಡ ಜನಾಂಗಕ್ಕೆ ಕೀರ್ತಿ ತೊಂದೊಳೋ. ಅಲ್ಲದೆ ಇವು ಹದಿನೇಳು ವರ್ಷ (ಸಿಗ್ನಲ್ ರಿಜಿಮೆಂಟ್) ಸೈನ್ಯಲಿ ಸೇವೆ ಮಾಡಿ ಈಗ ಇವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮಂಗಳೂರು ಶಾಖೆಲಿ ಸೇವೆ ಸಲ್ಲಿಸ್ತವಳೋ. ಈ ಸಾಧನೆಂದ ಇವುಕೆ ಮುಂದೆ ಏಷ್ಯಾಡೆಲಿಲಿ ಭಾಗವಹಿಸಿಕೆ ಅವಕಾಶ ಸಿಕ್ಕಿತ್. ಇದೇ ಕ್ರೀಡೆಲಿ ಆಚ್ ವರ್ಷ ಡೆಲ್ಲಿಲೀ 1500 ಮೀಟರ್ ಓಟಲಿ ಚಿನ್ನ ಮತ್ತೆ 800 ಮೀಟರ್ ಓಟಲಿ ಬೆಳ್ಳಿ ಪದಕ ಪಡ್ದ್ ಕಂಡೊಳೊ.

ಇವುಕೆ ನಮ್ಮ ಕುಲದೇವರು ವೆಂಕಟರಮಣ ಆರೋಗ್ಯ ಭಾಗ್ಯ ಕೊಟ್ಟು ಮುಂದೆ ಸಹ ಇದೆ ತರ ಕೀರ್ತಿ ತರಲಿತ ಬೇಡೋಣಾ.

ಬರಹ : ಮಳಂದೀರ ಕಲಾ ವಾಸುದೇವ,
ಹೊಸ್ಕೇರಿ ಗ್ರಾಮ.

ಚಿನ್ನದ ಚೂರಿ ಅಂತ ಕುತ್ತಿಗೆ ಕುಯ್ದುಕೊಳ್ಳಬಹುದೆ

ಮನಶಾಂತಿ

ಇಬ್ಬರು ಗೆಳೆಯರು ಅಪರೂಪಕ್ಕೆ ಭೇಟಿಯಾದರು. ಒಬ್ಬ ಸಪ್ಪೆ ಮುಖ ಹಾಕಿಕೊಂಡಿದ್ದ, ತುಂಬಾ ಚಿಂತಾಕ್ರಾಂತನಾಗಿದ್ದ. ಅವನನ್ನು ನೋಡಿದ ಗೆಳೆಯ 'ಏನು ಸಮಾಚಾರ, ಯಾಕೆ ಚಿಂತೆ ಮಾಡುತ್ತಿರುವೆ?" ಎಂದು ವಿಚಾರಿಸಿದ. ಆಗ ಆತ ತನ್ನ ಜೀವನದಲ್ಲಿ ತಾನು ಎದುರಿಸುತ್ತಿರುವ ಅನೇಕ ದುಃಖದ ಸಂಗತಿಗಳ ಬಗ್ಗೆ ವಿವರಿಸುತ್ತಾ "ಇಷ್ಟೆಲಾ ಚಿಂತೆಗಳಿಂದ ಬಳಲುತ್ತಿರುವ ನನಗೆ ಜೀವನವೇ ಬೇಸರವೆನಿಸಿ ಜಿಗುಪ್ಸೆ ಉಂಟಾಗಿದೆ. ಎಲ್ಲಿಗಾದರೂ ದೂರ ಹೋಗಿಬಿಡಬೇಕೆಂದಿದ್ದೇನೆ" ಎಂದು ನುಡಿದ. ಅದಕ್ಕೆ ಆತನ ಗೆಳೆಯ ನಗುತ್ತಾ "ಇಷ್ಟೇ ಏನು? ನೀನು ಚಿಂತೆಗಳಿಂದ ದೂರ ಹೋಗಬೇಕೆಂದರೆ ನನಗೊಂದು ಉಪಾಯ ಗೊತ್ತಿದೆ ಹಾಗೆ ಮಾಡು" ಎಂದ "ಏನು ಮಾಡಲಿ" ಎಂದು ಗೆಳೆಯ ವಿಚಾರಿಸಿದ. "ನನಗೆ ಒಂದು ಜಾಗ ಗೊತ್ತು. ಆ ಜಾಗದಲ್ಲಿ ವಾಸ ಮಾಡುವ ಯಾರಿಗೂ ಎಳ್ಳಷ್ಟು ಚಿಂತೆಯಿಲ್ಲದೆ ಹಾಯಾಗಿದ್ದಾರೆ, ನೀನೂ ಅಲ್ಲಿಗೆ ಹೋಗಿ ಬಿಟ್ಟರೆ ಮಾತ್ರ ನೀನು ನಿಶ್ಚಿಂತೆಯಿಂದಿರಲು ಸಾಧ್ಯ" ಎಂದು ನುಡಿದ.

ಅದನ್ನು ಕೇಳಿದ ಆತನ ಗೆಳೆಯ ತನ್ನನ್ನು ಅಲ್ಲಿಗೆ ಕರೆದು ಕೊಂಡು ಹೋಗುವಂತೆ ಒತ್ತಾಯಿಸಿದ. 'ಸರಿ' ಎಂದವನೇ ಆತನ ಸ್ನೇಹಿತ ಆತನನ್ನು ಕರೆದುಕೊಂಡು ಊರಿನಾಚೆ ಇದ್ದ ಸ್ಮಶಾನಕ್ಕೆ ಕರೆದೊಯ್ದು, "ಇದೇನು? ಇಲ್ಲಿಗ್ಯಾಕೆ ಕರೆದುಕೊಂಡು ಬಂದೆ?" ಎಂದು ಗೆಳೆಯ ಆಶ್ಚರ್ಯದಿಂದ ಪ್ರಶ್ನಿಸಿದ. ಅದಕ್ಕೆ ಆತನ ಸ್ನೇಹಿತ ವಿವರಿಸಿದ. "ನೋಡು ಇಲ್ಲಿ ಮಲಗಿರುವ ಪ್ರತಿಯೊಬ್ಬರಿಗೂ ಏನೊಂದು ಚಿಂತೆ ಕಾಡುವುದಿಲ್ಲ. ಅವರೆಲ್ಲಾ ಸತ್ತು ನಿಶ್ಚಿಂತೆಯಿಂದ ಮಲಗಿದ್ದಾರೆ. ಮನುಷ್ಯ ಬದುಕಿರುವವರೆಗೂ ಚಿಂತೆಗಳು ಅವನನ್ನು ಸುತ್ತುವರಿದಿರುತ್ತವೆ. ಈ ಲೋಕದಲ್ಲಿ ಪ್ರತಿಯೊಬ್ಬ ಜೀವಿಸುವ ಪ್ರಾಣಿಗೂ ಒಂದಲ್ಲ ಒಂದು ಚಿಂತೆ ಕಾಡುತ್ತಿರುತ್ತದೆ. ತೊಂದರೆಗಳಿಗೆ ತಲೆ ಕೆಡಿಸಿಕೊಳ್ಳದೆ, ಆಗುವುದೆಲ್ಲಾ ಒಳ್ಳೆಯದಕ್ಕೆ ಎಂದು ದೇವರ ಮೇಲೆ ಭಾರ ಹಾಕಿ ಮುನ್ನಡೆದರೆ ಜೀವನ ಸುಗಮವಾಗುತ್ತದೆ" ಎಂದ. ಇದನ್ನು ಕೇಳಿ ಆತನ ಗೆಳೆಯನ ಕಣ್ತೆರೆದಂತೆ ಆಯಿತು. ಆತನ ಮನಸ್ಸಿಗೆ ನೆಮ್ಮದಿ ದೊರಕಿದಂತಾಗಿ ತಮ್ಮ ಗೆಳೆಯನಿಗೆ ಧನ್ಯವಾದಗಳನ್ನು ಹೇಳಿ ಮನೆಗೆ ನಡೆದ.

ಈ ಲೋಕದಲ್ಲಿ ಬದುಕುತ್ತಿರುವ ಪ್ರತಿಯೊಬ್ಬರಿಗೂ, ಆತ ಬಡವನಾಗಿರಲಿ, ಸಾಹುಕಾರನಾಗಿರಲಿ, ಚಿಕ್ಕವನಾಗಿರಲಿ ದೊಡ್ಡವನಾಗಿರಲಿ ಕಷ್ಟ, ಕಾರ್ಪಣ್ಯಗಳು ತಪ್ಪಿದ್ದಲ್ಲ. ಎಲ್ಲರಿಗೂ ಒಂದಲ್ಲ ಒಂದು ವೇದನೆ, ಅಸಂತೋಷ ದುಃಖ ಇರುವುದು ಸರ್ವೇ ಸಾಮಾನ್ಯ. ಕಷ್ಟಗಳು ಬಂದಾಗ ಒಂದರ ಮೇಲೊಂದರಂತೆ ಬಂದು ಬಿಡುತ್ತವೆ. ನಮ್ಮ ಕೈ ಗೆಟುಕಲಾರದ ಘಟನೆಗಳು ದಿನ ನಿತ್ಯ ನಡೆದುಹೋಗುತ್ತವೆ. ಇವುಗಳಿಂದ ಮನೆಯವರೊಂದಿಗೆ ವಿರಸ, ಜಗಳ, ಪ್ರೇಮಿಯೊಂದಿಗೆ ಕದನ, ಗೆಳೆಯರೊಂದಿಗೆ ಅಸಮಾಧಾನ ಗಂಡ ಹೆಂಡತಿಯರಲ್ಲಿ ಅಸಂತೋಷಗಳುಂಟಾಗಿ 'ಸಾಕಪ್ಪ ಈ ಬಾಳು' ಎಂದು ಕೊರಗುವಂತಾಗುತ್ತದೆ.

ಜೀವನ ಹಲವಾರು ಬಾರಿ ತ್ರಾಸವೆನಿಸಿ ನಮ್ಮೊಂದಿಗೆ ಕ್ರೂರಿಯಾಗಿ ವರ್ತಿಸುತ್ತದೆ ನಿಜ, ಹಾಗಾದಾಗ ನಾವು ನಿರಾಸೆ ಗೊಳ್ಳಬಾರದು. ಯಾಕೆಂದರೆ ನಮ್ಮ ಬಾಳಿನಲ್ಲಿ ನಡೆಯುವ 90% ಒಳ್ಳೆಯ ಘಟನೆಗಳು ನಮ್ಮ ಹಿಡಿತದಲ್ಲಿರುತ್ತವೆ. ಬರೀ 10% ಅಹಿತಕರ ಘಟನೆಗಳ ಮೇಲೆ ನಮ್ಮ ಹಿಡಿತ ಇರುವುದಿಲ್ಲ.

ನಾವು ಯಾವಾಗಲೂ ಎದುರಾಗುವ ಕಷ್ಟಗಳನ್ನು ಪಟ್ಟಿ ಮಾಡುತ್ತೇವೆಯೇ ಹೊರತು ದೇವರು ನಮಗೊದಗಿಸಿರುವ 90% ಸುಖಗಳ ಬಗ್ಗೆ ತೃಪ್ತಿ ಪಡುವುದಿಲ್ಲ. ದೇವರು ನಮಗೆ ಕೊಟ್ಟಿರುವ ಅಮೂಲ್ಯವಾದ ಕಣ್ಣುಗಳನ್ನು ಕೋಟಿ ರೂಪಾಯಿಗೆ ಮಾರುತ್ತವೆಯೇ? ನಮ್ಮ ಕೈ ಕಾಲುಗಳನ್ನು ದುಡ್ಡಿಗಾಗಿ ಪಣ ತೊಡುತ್ತೇವೆಯೆ? ಇರಲು ಮನೆ, ಮನಸ್ಸನ್ನರಿತು ನಡೆಯುವ ತಂದೆ ತಾಯಿ, ಅಣ್ಣ ತಂಗಿಯರ ಪ್ರೀತಿ ಇವೆಲ್ಲ ಇದ್ದರೆ ನಾವು ಭಾಗ್ಯಶಾಲಿಗಳೇ ಸರಿ. ಬೀದಿ ಬದಿಯಲ್ಲಿ ಎಷ್ಟು ಜನ ಕುರುಡರು, ಕುಂಟರು, ಒಂದು ಹೊತ್ತಿನ ಅನ್ನಕ್ಕಾಗಿ ಬೇಡುವ ಕುರೂಪಿಗಳು ಸಹಸ್ರಾರು ಮಂದಿ, ಅವರುಗಳಿಗಿಂತ ಚೆನ್ನಾಗಿ ಬಾಳುವ ಶಕ್ತಿ ನಮಗೆ ದೇವರು ದಯಪಾಲಿಸಿಲ್ಲವೆ? ಆದರೂ ನಾವು ಚಿಕ್ಕ ಪುಟ್ಟ ಅನುಕೂಲಗಳಿಗಾಗಿ ಕೊರಗುತ್ತಾ, ದೂಷಿಸುತ್ತಾ, ಹೊಟ್ಟೆ ಕಿಚ್ಚು ಪಡುತ್ತಾ ಸಾಯುತ್ತೇವೆ. ನಮ್ಮ ಬಾಳಿನಲ್ಲಿ ನೆಮ್ಮದಿ ಇಲ್ಲದಂತೆ ಮಾಡಿಕೊಳ್ಳುತ್ತೇವೆ. ಯಾಕೆ ಹೀಗೆ?

"ಈಸಬೇಕು ಇದ್ದು ಜಯಿಸಬೇಕು ಎನ್ನುವ ಹಾಗೆ, ಕಷ್ಟ ಬಂದಾಗ ದೂರ ಓಡುವುದಲ್ಲ. ಕೂಲಂಕುಷವಾಗಿ ಆಲೋಚಿಸಿ ಕಷ್ಟಗಳಿಗೆ ಸಮಾಧಾನದಿಂದ ಪರಿಹಾರ ಹುಡುಕುವುದು ಜಾಣತನ.

ನಮ್ಮ ಜೀವನದಲ್ಲಿ ನಡೆಯುತ್ತಿರುವುದೆಲ್ಲಾ ಒಳ್ಳೆಯದಕ್ಕೆ. ನಾಳೆ ನಡೆಯುವ ಸಂಗತಿಗಳೂ ಒಳ್ಳೆಯದಕ್ಕೆ ನಡೆಯುತ್ತವೆ. ಬಾಳಿನಲ್ಲಿ ವ್ಯಥೆ ಪಡಲು ನಾವು ಕಳೆದು ಕೊಂಡಿರುವುದಾದರೂ ಏನು?

ನಾವು ಇಲ್ಲಿಗೆ ಬರುವಾಗ ನಮ್ಮೊಂದಿಗೆ ಏನಾದರೂ ತಂದಿದ್ದೇವೆಯೇ? ನಾವು ಏನನ್ನೇ ಗಳಿಸಿದ್ದರೂ, ಅದು ಇಲ್ಲಿಗೆ ಬಂದ ಮೇಲೆ ತಾನೆ? ಇಲ್ಲಿ ಪಡೆದುಕೊಂಡಿದ್ದನ್ನು ಇಲ್ಲಿಯೇ ಕಳೆದುಕೊಂಡೆವು. ನಾವು ಇಲ್ಲಿಂದ ಹೋಗುವಾಗ ಏನನ್ನೂ ತೆಗೆದುಕೊಂಡು ಹೋಗಲೂ ಆಗದು. ಈ ದಿನ ನಿಮ್ಮದಾಗಿರುವ ವಸ್ತು ನಾಳೆ ಬೇರೆಯವರದ್ದಾಗುತ್ತದೆ ಇದೇ ಜಗತ್ತಿನ ನಿಯಮ ಅಲ್ಲವೇ?

– ಎಡಿಕೇರಿ ಸುದರ್ಶನ್
ಬೆಂಗಳೂರು

ಕಾಲ ಕಾಲದ ನಿಮ್ಮ ಚಂದ ನವೀಕರಣೆ ಸಂಗಾತಿಗೆ ಅಂಬೆಗಾಲಿಕ್ಕಲು ಸಾಧ್ಯ

ಗುಡಿಯೊಳಗಿನ ದೇವರೇ ಗೊಬ್ಬರ ತಿನ್ನುತ್ತಿರುವಾಗ ಪೂಜಾರಿ ಶಾವಿಗೆ ಪಾಯಸ ಬೇಡಿದನಂತೆ

ಕಣ್ಣಿಗೆ ಹಾನಿಕರ ಮಧುಮೇಹ

ಮಧುಮೇಹ ಅಥವಾ ಡಯಾಬಿಟಿಸ್ 21 ನೇ ಶತಮಾನದ ದೊಡ್ಡ ಆರೋಗ್ಯ ಸಮಸ್ಯೆ. ಭಾರತದಲ್ಲಿ ಇದರ ಪ್ರಮಾಣ ಏರುತ್ತಲಿದೆ. ಇದು ದುಡಿಯುವ ವಯಸ್ಸಿನಲ್ಲಿ ಕಂಡು ಬರುವುದರಿಂದ ದುಡಿತಕ್ಕೆ ಧಕ್ಕೆ ಆಗುತ್ತಿದ್ದು, ಯುವಜನರ ಬದಲಾದ ಜೀವನಶೈಲಿ, ಬದಲಾದ ಉಟೋಪಚಾರ ಮತ್ತು ದೈಹಿಕ ಪರಿಶ್ರಮ ಇದಕ್ಕೆ ಮುಖ್ಯ ಕಾರಣ.

ಡಯಾಬಿಟಿಸ್‌ನಿಂದ ಕಣ್ಣಿಗೆ ಆಗುವ ಮುಖ್ಯ ಹಾನಿಗಳೆಂದರೆ,

ಕಣ್ಣಿನ ರೆಟಿನಾ (ಪರದೆ ಹಿಂದ ಪಾರದರ್ಶಕ) ದೋಷ. ರೆಟಿನೊವದಿ.

* ಕಣ್ಣಿನ ಮೋತಿಬಿಂದು ಹತ್ತು ವರ್ಷ ಬೇಗ ಆಗಬಹುದು.
* ಕಣ್ಣಿನ ಚಲನೆ ಮತ್ತು ನರಗಳ ದುರ್ಬಲತೆ.
* ಗ್ಲಾಕೋಮಾ

ಡಯಾಬಿಟಿಸ್ ರೆಟಿನೋಪಥಿ : ಕಣ್ಣಿನ ರೆಟಿನಾಕ್ಕೆ ಮುಟ್ಟುವ ಆಮ್ಲಜನಕದ ಪ್ರಮಾಣ ಕಡಿಮೆಯಾಗುವುದರಿಂದ ಆಗುವ ಬದಲಾವಣೆಗಳಿಗೆ ರೆಟಿನೋಪಥಿ ಎಂದು ಕರೆಯುತ್ತಾರೆ. ಇದರ ಹಂತಗಳೆಂದರೆ.

1. **ಪ್ರಾರಂಭಿಕ ಹಂತ :** ನಾನ್ ಪ್ರಾಲಿಫರೇಟಿವ್ ರೆಟಿನೋ ಪಥಿ
2. **ಮ್ಯಾಕ್ಯುಲೋಪಥಿ :** ದೃಷ್ಟಿಯ ಕೇಂದ್ರೀಕೃತ ಭಾಗದ ಬಾವು.
3. **ಮಧ್ಯಂತರ ಹಂತ :** ಪ್ರೀ ಪ್ರಾಲಿಫರೇಟಿವ್ ರೆಟಿನೋಪಥಿ.
4. **ಹಾನಿಯ ಹಂತ :** ಪ್ರಾಲಿಫರೇಟಿವ್ ರೆಟಿನೋಪಥಿ.
5. ಅತ್ಯಧಿಕ ಹಾನಿಯ ಹಂತ.

ಪ್ರಾರಂಭಿಕ ಹಂತದಲ್ಲಿ ಚಿಕ್ಕ ರಕ್ತನಾಳಗಳು ಬಹಳ ಕಾಲದಿಂದ ಇರುವ ಮಧುಮೇಹದಿಂದಾಗಿ ಆಮ್ಲಜನಕದ ಕೊರತೆಯಿಂದ ಬಳಲಿ, ಬಲೂನಿನಂತೆ ಅಲ್ಲಲ್ಲಿ ಉಬ್ಬಿಕೊಳ್ಳುತ್ತವೆ. ಸಣ್ಣ ಸಣ್ಣ ಕೆಂಪು ಚುಕ್ಕೆಗಳಂತೆ ಕಾಣುವ ಇವುಗಳಿಗೆ ಮೈಕ್ರೋ ಅನ್ಯೂರಿಸಮ್ ಎಂದು ಕರೆಯುತ್ತಾರೆ. ಇವು ಸತ್ತಾಗ ಅವುಗಳನ್ನು ಹಮೋರೇಜಸ್ ಎಂದು ಕರೆಯುತ್ತಾರೆ. ಇದರ ಜೊತೆ ಬಾವು, ಕೊಬ್ಬಿನಂಶ ಕ್ರಮೇಣ ಶೇಖರಗೊಂಡು ಹಳದಿ ಬಣ್ಣದ ಬೊಕ್ಕಿಯಂತೆ ಕಾಣುತ್ತದೆ. ಇವು ಮ್ಯಾಕ್ಯುಲಾದಲ್ಲಿ ಪಸರಿಸಿದಾಗ ಮಾತ್ರ ದೃಷ್ಟಿ ಮಾಂದ್ಯತೆ ಇರುತ್ತದೆ.

ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶ.

ದೃಷ್ಟಿ ಸರಿಯಾಗಿರುವ ದಯಾಬಿಟಿಸ್ ಉಳ್ಳವರು ಈ ಹಂತ ತಲುಪಿಲ್ಲವೆಂದು ಭಾವಿಸಬಾರದು. ಇದನ್ನು ಕಣ್ಣಿನ ಪರೀಕ್ಷೆಯಿಂದ ಗುರುತಿಸಲು ಸಾಧ್ಯವಿದೆ.

ಮ್ಯಾಕ್ಯುಲೋಪಥಿ : ಮೇಲೆ ಕಾಣಿಸಿದ ಬದಲಾವಣೆಗಳು ಮ್ಯಾಕ್ಯುಲಾದಲ್ಲಿ ಕಂಡು ಬಂದಾಗ ಬಾವು ಬಂದು ದೃಷ್ಟಿ ಮಾಂದ್ಯತೆ ಕಂಡು ಬರುತ್ತದೆ. ಇದಕ್ಕೆ ಕನ್ನಡಕದ ನಂಬರ್ ಬದಲಾಗಿದೆ ಎಂದು ತಿಳಿದು ಕನ್ನಡಕದ ಅಂಗಡಿಯಲ್ಲಿ ಚಾಳೀಸ್ ಬದಲಾಯಿಸಿ ಪ್ರಯೋಜನವಿಲ್ಲ. ಸೂಕ್ತ ಪರೀಕ್ಷೆ ಅಗತ್ಯ. ಹಾಗೇ ಬಿಟ್ಟಲ್ಲಿ ಊತ ಹೆಚ್ಚಿ ಕ್ರಮೇಣ ದೃಷ್ಟಿ ಮಾಂಧ್ಯತೆಯಿಂದ ಕೇವಲ ಸಾಧಾರಣ ಚಲನವಲನಕ್ಕೆ ಬೇಕಾಗುವಷ್ಟು ದೃಷ್ಟಿ ಉಳಿದುಕೊಳ್ಳುತ್ತದೆ.

ಗಮನಿಸಬೇಕಾದ ಅಂಶ :

ಈ ಹಂತ ತಲುಪಿದವರ ಬಣ್ಣದ ದೃಷ್ಟಿ ಮಂದವಾಗಿರುವುದರಿಂದ ಸ್ವಂತ ಮೂತ್ರ ಪರೀಕ್ಷೆ ಮಾಡಿದಾಗ ತಪ್ಪು ಬಣ್ಣದ ರಿಪೋರ್ಟ್ ಕಾಣಬಹುದು. ಇವರು ವಾಹನ ಚಲಿಸುವದು ಅಪಾಯಕಾರಿ.

ಮಧ್ಯಂತರ ಹಂತ : ಇದನ್ನು ಮುಂದಿನ ಹಂತ ಮುಟ್ಟುವ ಮುಂಚೆ ಕಂಡುಹಿಡಿದಲ್ಲಿ ಲೇಸರ್ ಕಿರಣಗಳಿಂದ ಚಿಕಿತ್ಸೆ ಮಾಡಿ ದೃಷ್ಟಿ ಮಾಂದ್ಯತೆ ತಪ್ಪಿಸಬಹುದು.

ಪ್ರೋಲಿಫರೇಟಿವ್ ರೆಟಿನೋಪಥಿ : ಈ ಹಂತದಲ್ಲಿ ರೆಟಿನಾದ ಕಿರು ರಕ್ತನಾಳಗಳು ಊದಿಕೊಂಡು ಕ್ರಮೇಣ ರಕ್ತ ಚಲನೆ ಸ್ತಬ್ಧವಾಗುತ್ತದೆ. ಆಗ ದೇಹದ ಪುನಶ್ಚೇತನ ಶಕ್ತಿಯಿಂದ ಹೊಸ ಕಿರುನಾಳಗಳು ಹುಟ್ಟಿಕೊಂಡು ಅನುಕೂಲಕ್ಕಿಂತ ಹಾನಿಕಾರಕ ಕೆಲಸ ಮಾಡುತ್ತದೆ. ಇದರಿಂದ ಕಣ್ಣಿನ ಒಳಭಾಗದಲ್ಲಿ ರಕ್ತ ಸ್ರಾವ ಆಗುತ್ತದೆ. ರಕ್ತ ಸ್ರಾವ ಕಡಿಮೆ ಇದ್ದಾಗ ವಸ್ತು ಕಣ್ಣಿನ ಮುಂದೆ ತೇಲುವ ಪದಾರ್ಥಗಳಂತೆ, ಮಂಜಿನಂತೆ ಭಾಸವಾಗುತ್ತದೆ. ಹೆಚ್ಚಾದಲ್ಲಿ ದೃಷ್ಟಿ ಶೂನ್ಯವಾಗುತ್ತದೆ.

ಮೇಲ್ಕಾಣಿಸಿದ ಹಂತಗಳನ್ನು ಗುರುತಿಸಲು ಕಣ್ಣಿನ ತಜ್ಞರಿಂದ ಸೂಕ್ತ ಪರೀಕ್ಷೆ ಮುಖ್ಯ.

ಪ್ಲೂರೆಸೀನ್ ಅಂಜಿಯೋಗ್ರಫಿ : ರೆಟಿನಾದ ರಕ್ತ ಚಲನೆಯ ಸುದೀರ್ಘ ಪರೀಕ್ಷೆಗೆ ಈ ಹೆಸರು. ಪ್ಲೂರೇಸಿನ್ ಎಂಬ ಹಸಿರು ಬಣ್ಣದ ದ್ರವವನ್ನು ತೋಳಿನ ರಕ್ತನಾಳಗಳ ಮೂಲಕ ಪೂರೈಸಿ ಫೆಂಡಸ್ ಕ್ಯಾಮರಾದ ಮೂಲಕ ಚಿತ್ರಿಸಿ, ಚಿತ್ರ ಬಳಸಿ ಲೇಸರ್ ಚಿಕಿತ್ಸೆ ಕೊಡಬಹುದು.

ಡಯಾಬಿಟಿಸ್ ರೆಟಿನೋಪಥಿ ತಡೆಗಟ್ಟುವುದು ಹೇಗೆ?

1. ರಕ್ತದಲ್ಲಿ ಸಕ್ಕರೆ ಅಂಶವನ್ನು ಕಟ್ಟು ನಿಟ್ಟಾಗಿ ನಿಯಂತ್ರಣದಲ್ಲಿ ಇರಿಸಬೇಕು.
2. ಡಯಾಬಿಟಿಸ್ ಇದ್ದವರು ನೇತ್ರ ತಜ್ಞರಿಂದ ಪ್ರತಿ ವರ್ಷ ಕಣ್ಣು ಪರೀಕ್ಷೆ ಮಾಡಿಸಿಕೊಳ್ಳಬೇಕು.
3. ಮ್ಯಾಕ್ಯುಲೋಪಥಿ ಮತ್ತು ದೃಷ್ಟಿ ಹಾನಿ ಹಂತ ತಲುಪಿದವರು ಪ್ರತಿ 3 ತಿಂಗಳಿಗೊಮ್ಮೆ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳತಕ್ಕದ್ದು.

ರೆಟಿನೋಪಥಿಗೆ ಲೇಸರ್ ಕಿರಣ ಚಿಕಿತ್ಸೆ ಮಾಡಲಾಗುತ್ತದೆ. ಲೇಸರ್ ಒಂದು ವಿಶೇಷ ಬೆಳಕಿನ ಕಿರಣ. ಇದು ಎಲ್ಲ ಪಸರಿಸದೆ ರೆಟಿನಾ ಮೇಲೆ ಪಸರಿಸಿ ಸುಟುತ್ತದೆ. ಇದರ ಮೂಲಕ ರಕ್ತ ಸ್ರಾವವಾಗುತ್ತಿರುವ ರಕ್ತನಾಳದ ಭಾಗವನ್ನು ಹಿಗ್ಗಿಸಿ, ಆಮ್ಲಜನಕ ರೆಟಿನಾಗೆ ಮುಟ್ಟುವ ಹಾಗೆ ಮಾಡುತ್ತಾರೆ. 20ನೇ ಪುಟಕ್ಕೆ

ಕೊಡಗ್ ಅಧ್ಯಯನ ಕೇಂದ್ರ

ಕೊಡಗಿನ ಅಂದಿನ ಹಿರಿಯರಲ್ಲಿ ಬರಹವಿರಲಿಲ್ಲ. ವಿದ್ಯೆ ಕಲಿಯಲು ಲಿಪಿ ಇರಲಿಲ್ಲ. ಇದ್ದಿದ್ದರೂ ಕಲಿಸುವವರಿರಲಿಲ್ಲ. ಶಾಲೆ ಎಂಬುದು ಗೊತ್ತೇ ಇರಲಿಲ್ಲ. ಆದರೂ ಹಿರಿಯರು ತಮ್ಮ ಅನುಭವಗಳನ್ನು ಬಾಯಿಂದ ಬಾಯಿಗೆ, ತಂದೆಯಿಂದ ಮಕ್ಕಳಿಗೆ ಹೀಗೆ ಹೇಳುತ್ತಾ ಬಾಯಿಪಾಠ ಮಾಡಿಸಿದರು. ಅದು ಜನರ ಪದಗಳ ಹಾರವಾಗಿತ್ತು. ಅದೇ ಜನಪದ ಅಥವಾ ಜ್ಞಾನಪದ ವಾಯಿತು. ಕ್ರಮೇಣ ಅದೊಂದು ಜ್ಞಾನ ಭಂಡಾರವಾಯಿತು. ಶಾಲಾ ವಿದ್ಯೆ ಇಲ್ಲದಿದ್ದರೂ ಹಿರಿಯರಲ್ಲಿ ಜ್ಞಾನವಿತ್ತು. ಅನುಭವ ಗಳಿಕೆ ಇತ್ತು. ಭಕ್ತಿ, ಶ್ರದ್ಧೆ, ಪ್ರೀತಿಯ ಭಂಡಾರವಿತ್ತು. ಇದಕ್ಕೆ ಸಾಕ್ಷಿ ಅಂದಿನ ಜನಪದ ಗೀತೆ, ಹಾಡು ಮತ್ತು ಕುಣಿತ.

ಕಾಲ ಉರುಳುತ್ತದೆ, ಜನರಲ್ಲಿ ಭಾವನೆ ಬದಲಾಗುತ್ತದೆ. ಮಾರ್ಪಾಟಾಗುತ್ತದೆ. ಹಂಬಲಿಕೆ ಹೆಚ್ಚಾಗುತ್ತದೆ. ತಿಳಿವಳಿಕೆಗೆ ಹಾತೊರೆಯುತ್ತದೆ. ಬಾಯಿಯಲ್ಲಿ ಮಾತಾಡುವುದನ್ನು, ಕೈಯಲ್ಲಿ ಸಂಜ್ಞೆ ಮೂಲಕ ತಿಳಿಸಲು ಪ್ರಯತ್ನ ಪಟ್ಟರೂಅದನ್ನುಬರೆಯಲು ಗೆರೆಗಳನ್ನು ಎಳೆದರು. ಅದು ಕ್ರಮೇಣ ಅಕ್ಷರಾಭ್ಯಾಸವಾಯಿತು. ಅಕ್ಷರ ಕಲಿಕೆ ಶುರುವಾಯಿತು. ಕಲಿಯುವ ಹುಚ್ಚು ಆರಂಭ ವಾಯಿತು. ಇಂದು ಎಲ್.ಕೆ.ಜಿ.ಯಿಂದ ಪಿಹೆಚ್.ಡಿಯವರೆಗೆ ವಿದ್ಯೆ ಇದೆ.

ಕೊಡಗು ಎಂದೊಡನೆ ಏನೋ ಒಂದು ಸ್ವರ್ಗ ಎನ್ನುತ್ತೇವೆ. ಸ್ವರ್ಗ ನರಕ ಲೋಕ ಕಂಡವರಿಲ್ಲ. ಆದರೆ ನಾವು ಸ್ವರ್ಗ, ನರಕವನ್ನು ನಿತ್ಯ ಅನುಭವಿಸುತ್ತೇವೆ. ಪ್ರೀತಿ, ಪ್ರೇಮ ಸ್ವರ್ಗವೆನ್ನುತ್ತೇವೆ. ಕಾಮ, ಮೋಹ ನರಕವೆನ್ನುತ್ತೇವೆ. ಒಟ್ಟಿನಲ್ಲಿ ಎರಡು ನರಕಗಳ ಮಧ್ಯೆ ಮಿಂಚಿ ಹೋಗುವುದನ್ನು ಸ್ವರ್ಗ ಎನ್ನುತ್ತೇವೆ. ಅದೇ ಜಾನಪದದಲ್ಲಿ ಕ್ಷಣಿಕ ಸುಖ, ಅನಂತ ದುಃಖ ಎನ್ನುತ್ತೇವೆ. ಅದೆಲ್ಲಾ ಅನುಭವಿಸಿದವರಿಗೆ, ಅನುಭವಿಸುವವರಿಗೆ ಗೊತ್ತಾಗುತ್ತದೆ. ಅನುಭವಕ್ಕೆ ಆಧಾರ ಅಧ್ಯಯನ. ಇದು ತೀರದ ಪ್ರಯಾಣ. ಪ್ರಯಾಣ ಮಾಡಿದ್ದಷ್ಟೂ ಅನುಭವ. ಅನುಭವ ಇದ್ದಷ್ಟೂವಿಜ್ಞಾನ. ವಿಜ್ಞಾನವೆಂದರೆ ಅಜ್ಞಾನವನ್ನು ಕಳೆದು ಸುಜ್ಞಾನಕ್ಕೆ ಪ್ರಯಾಣಿಸುವುದು.

ಕೊಡಗಿನ ಜನರು ಹುಟ್ಟಿನಿಂದಲೇ ವಿದ್ಯಾಸಕ್ತರು. ಸಿರಿತನವೇ ಇರಲಿ, ಬಡತನವೇ ಇರಲಿ, ವಿದ್ಯೆ ಕಲಿಯುವುದನ್ನು ಬಿಡಲೊಲ್ಲರು. ಇಂಗ್ಲೀಷ್ ಕಲಿಯುವ ತವಕದಲ್ಲಿ ಕೊಡಗಿಗೆ ಇಂಗ್ಲೀಷ್ ಭಾಷೆಯ ವಿದ್ಯೆ ಬೇಕೇ ಬೇಕೆಂದು ಪಟ್ಟುಹಿಡಿದುದರ ಪರಿಣಾಮ ಬ್ರಿಟಿಷ್ ಸರಕಾರದಿಂದ ಸ್ಥಳೀಯರ ಬೇಡಿಕೆಯಂತೆ ತೆರೆಯಲ್ಪಟ್ಟ ಮೊಟ್ಟ ಮೊದಲ ಶಾಲೆ ಮಡಿಕೇರಿ ಮಹಾದೇವ ಪೇಟೆಯ ಎ. ವಿ. ಸ್ಕೂಲ್ (Anglo Vernaculair School) ಅದಕ್ಕಿಂತ ಮುಂಚೆ ಬ್ರಿಟಿಷರೇ ತೆರೆಯಿಸಿದ ಶಾಲೆ ಕುಶಾಲನಗರದ ಪ್ರೈಮರಿ ಶಾಲೆ. ಇದರ ಸ್ಥಾಪಕ ಪ್ರೇಸರ್ ಎಂಬ ಆಂಗ್ಲಿಗ. ಹೀಗೆ ಕೊಡಗಿನಲ್ಲಿದ್ದ ಕೊಡವ ಭಾಷೆ, ಗೌಡ ಭಾಷೆ ರಾಜರ ಕಾಲದಲ್ಲಿ ಕನ್ನಡವಾಯಿತು. ಬ್ರಿಟಿಷರ ಕಾಲದಲ್ಲಿ ಒಂದೆರಡು ಕಡೆ ಇಂಗ್ಲೀಷ್ ಶಾಲೆಯಾಯಿತು. ಈಗಿನ ಸ್ವಾತಂತ್ರ್ಯದ ನಂತರ ವಿದ್ಯಾಭ್ಯಾಸ ಪೂರ್ತಿ ಇಂಗ್ಲೀಷ್ ಮೀಡಿಯಂ ಆಯಿತು. ಆಗುತ್ತಲೇ ಇದೆ. ಕನ್ನಡ ಎಂಬುದು ಅಡಿಗಿಳಿಯುತ್ತದೆ. ಕರ್ನಾಟಕದಲ್ಲಿ ಕನ್ನಡ ಭಾಷೆ, ಕರ್ + ನಾಟವಾಡುತ್ತಿದೆ.

ಕೊಡಗಿನ ಚರಿತ್ರೆಯನ್ನು ದೇಶಿಯರೂ, ವಿದೇಶೀಯರೂ ಬರೆದಿರುವರು. ಕೊಡಗಿನ ಪ್ರಾಕೃತಿಕ ವಿಷಯ ಎಲ್ಲರಲ್ಲಿಯೂ ಸಾಮಾನ್ಯ. ಆದರೆ ಚಾರಿತ್ರಿಕ ವಿಚಾರ ಎಲ್ಲವೂ ಸತ್ಯವೆಂದು ಹೇಳಲಾಗದು. ಇದಕ್ಕೆ ಕಾರಣ ಬರೆದವರ, ಬರೆಯುವಾಗ ಇದ್ದ ಅವರ ಮನಸ್ಸು,ವಾತಾವರಣ ಇತ್ಯಾದಿಗಳು. ಹೀಗಾಗಿ ನಮಗೆ ಒಂದು ಅಧ್ಯಯನ ಕೇಂದ್ರದ ಅರಿವಾಗಿದೆ. ಅದಕ್ಕಾಗಿ ಹೆಚ್ಚಿಗೆ ಶ್ರಮಿಸುತ್ತಿರುವ ವ್ಯಕ್ತಿ ಶ್ರೀಮಾನ್ ಬಾಚರಣಿಯಂಡ ಪಿ. ಅಪ್ಪಣ್ಣನವರು. ಕುಶಾಲನಗರ ಕೊಡವ ಸಮಾಜದಲ್ಲಿ ಸ್ಥಾಪಿತವಾದ "ಕೊಡಗ್ ಅಧ್ಯಯನ ಕೇಂದ್ರ"ವು ಶ್ರೀ ಬಾಚರಣೆಯಂಡ ಪಿ. ಅಪ್ಪಣ್ಣನವರ ಕನಸಿನ ಕೂಸು. ಅಧ್ಯಕ್ಷರಾದ ಬಡ್ಡೀರ ಎ. ಸುಬ್ಬಯ್ಯನವರು ಹಾರೈಸಿದರು.

ಅಧ್ಯಯನ ಕೇಂದ್ರವೆಂದರೇನು? ಇದೊಂದು ಕಲಿಯುವ, ಕಲಿಸುವ ಕೇಂದ್ರ. ಏಕೆ? ನಾವು ಈಗ ಕಲಿತಿರುವ ಅರ್ಧಂಬರ್ಧ ತಿಳಿವಳಿಕೆಯನ್ನು, ನಮ್ಮ ತಿಳಿವಳಿಕೆಯನ್ನು ಮೊದಲು ಸರಿಪಡಿಸಿಕೊಂಡು, ಇತರರಿಗೆ ಹಂಚುವುದು. ಪ್ರೋತ್ಸಾಹಿಸುವುದು. ಜನಜಾಗೃತಿ ಮಾಡುವುದು. ಇದಕ್ಕೆ ಬೇಕಾದ ಸಲಕರಣೆಗಳೇನು? ಸಂಗ್ರಹವಾದ ಸಾಮಾನು ಸರಂಜಾಮು ಪುಸ್ತಕಗಳನ್ನಿಡಲು ಸ್ಥಳಾವಕಾಶ; ತಿದ್ದಿ, ಮುದ್ರಿಸಿ, ಪ್ರಸಾರ ಮಾಡಲು ಆರ್ಥಿಕ ನೆರವು, ಅದಕ್ಕಾಗಿ ಶ್ರಮಿಸುವ ನಿಸ್ವಾರ್ಥ ಸೇವಕರು. ಇದೇ ಮೊದಲ ಬೇಡಿಕೆ ಮತ್ತು ಕೂಡಿಕೆ. ಇದೇ ಸಮಾಜದ ಶ್ರೇಯಸ್ಸಿಗೆ ಮೊಟ್ಟ ಮೊದಲ ಹೆಜ್ಜೆ.

ಕುಶಾಲನಗರ ಅಧ್ಯಯನ ಕೇಂದ್ರದಲ್ಲಿ ಏನಿದೆ? ಕೊಡಗಿನ ಸಂಬಂಧಿಸಿದ ಯಾವುದೇ ಬಾಷೆಯ ಪುಸ್ತಕ, ಪ್ರಾಕ್ಷಿಕ ಪತ್ರಿಕೆ, ಕೈಬರಹ ಮತ್ತು ಇತರ ಯಾವುದೇ ಜ್ಞಾನ ಭಂಡಾರ ಇದೆಲ್ಲಾ ಏಕೆ? ಸೈನಿಕನಿಗೆ ಬಂದೂಕು ಬೇಕು. ಮಳೆ ಬಿಸಿಲಿಗೆ ಕೊಡೆ ಬೇಕು. ಜ್ಞಾನಕ್ಕೆ ಪುಸ್ತಕ ಬೇಕು, ಓದುವ ಮನಸ್ಸು ಬೇಕು. ಓದಿದ್ದನ್ನು ಅರ್ಥ ಮಾಡಿಕೊಳ್ಳುವ ಜ್ಞಾನ ಬೇಕು. ಅರ್ಥಮಾಡಿದ್ದನ್ನು ಅರ್ಥೈಸಿ ಹೇಳಿಕೊಡುವ ಜ್ಞಾನಿ, ತಾಳ್ಮೆ ಬೇಕು. ಹೆಚ್ಚಾಗಿ ನವ ತರುಣ,ತರುಣಿಯರು ಎಂದರೆ ಯುವ ಜನಾಂಗ ಮುಂದೆ ಸ್ವತಃ ಮುಂದಾಗಬೇಕು. ಸ್ವಪ್ರೇರಣೆ ಬೇಕು.

ಕೊಡಗಿನಲ್ಲಿ ಹಿರಿಯರ ಪುರಾತನ ಕಾಲದ ಮನೆಗಳ ವೈಭವ ಇಂದು ಇಲ್ಲ. ನಾಗರೀಕತೆ ಬೆಳೆದ ಹಾಗೆ ನಾಗರೀಕತೆ ಹೆಚ್ಚಾಯಿತು. ಆದ್ದರಿಂದ ವಿಶೇಷ ದಾಖಲಾತಿಗಳು, ಪುಸ್ತಕಗಳು ನಾಶವಾದವು. ಅದಕ್ಕಾಗಿ ಮೂಲೆ ಮೂಲೆಗಳಲ್ಲಿ ಸಿಕ್ಕಿದ, ಸಿಕ್ಕುವ ದಾಖಲಾತಿಗಳನ್ನು ಸಂಗ್ರಹಿಸಿ ಕೂಡಿಡುವ ಕೆಲಸ ಈ ಕೇಂದ್ರಕ್ಕಿದೆ. ಕೊಡವ ಜನಾಂಗವೇ ಆಗಲಿ, ಇತರ ಜನಾಂಗದವರೇ ಆಗಲಿ, ಕೊಡಗಿನವರೇ ಆಗಲಿ, ಹೊರಗಿನವರೇ ಆಗಲಿ, ಕೊಡವ ಭಾಷೆಯಾಗಲಿ, ಬೇರೆ ಯಾವುದೇ ಭಾಷೆಯಾಗಲೀ ಅಚ್ಚಾಗಿದೇ

ಆಗಲಿ, ಕೈ ಬರಹವೇ ಆಗಲಿ, ತಾಳೆ ಬರಹವೇ ಆಗಲಿ ಪ್ರತಿಯೊಂದನ್ನೂ ಅಮೂಲ್ಯ ವಸ್ತುವಾಗಿ ಸಂಗ್ರಹಿಸಿ ಕೊಡಗಿನ ವಿಚಾರ ತಿಳಿದು ಕೊಳ್ಳಲಿಕ್ಕಾಗಿ ಇರುವ ಕೇಂದ್ರ ಈ ಅಧ್ಯಯನ ಕೇಂದ್ರ.

ಈ ಕೇಂದ್ರದ ಮುಖ್ಯವಾದ ಇನ್ನೊಂದು ವಿಶೇಷತೆ, ಯುವ ಪೀಳಿಗೆಗೆ ಸಂಶೋಧನೆಗೆ ಅನುಕೂಲ ಮಾಡಿಕೊಡಲು ಆಗಿದೆ. ಎಲ್ಲಾ ದಾಖಲೆಗಳಿರುವ ಒಂದು ಕೇಂದ್ರವಾಗಿ ಪರಿವರ್ತಿಸುವುದು. ಯಾವುದೇ ಜನಾಂಗವಾಗಲೀ ಅವರವರ ಸಮಾಜದಲ್ಲಿ ಅವರವರ ಆಸಕ್ತಿಗನುಗುಣವಾಗಿ ಪ್ರತೀಯೊಂದು ಸಮಾಜದಲ್ಲಿ, ಅವರವರ ಹಾಸ್ಟೆಲ್‌ನಲ್ಲಾಗಲೀ ಅಧ್ಯಯನ ಕೇಂದ್ರ ತೆರೆಯುವುದು ಸೂಕ್ತ. ಸಣ್ಣದೇ ಇರಲಿ, ದೊಡ್ಡದೇ ಇರಲಿ, ಜ್ಞಾನದ ಮಾಹಿತಿ ಕೇಂದ್ರ ಇರಲೇಬೇಕು. ಯಾವುದಾದರೂ ಒಮ್ಮೆಲೇ ದೊಡ್ಡದಾಗುವುದಿಲ್ಲ. ಸಣ್ಣದಾಗಿರುವಾಗ ನಕ್ಕು ನಲಿದು, ಅನುಭವ ಪಡೆದು, ಅನುಭವಿಸಿದರೆ ಜ್ಞಾನದ ದೊಡ್ಡಸ್ತಿಕೆ ಬರುತ್ತದೆ. ಒಂದು ಸಮಾಜದ ಅಧ್ಯಯನ ಕೇಂದ್ರವು ಇನ್ನೊಂದು ಸಮಾಜದ ಬೆಳವಣಿಗೆಗೆ ಏಣಿಯಾಗಬೇಕು. ಅದೇ ಅಧ್ಯಯನ ಕೇಂದ್ರದ ವಿಶಿಷ್ಟತೆ.

ಸಧ್ಯಕ್ಕೆ ಕುಶಾಲನಗರ ಕೊಡವ ಸಮಾಜದಲ್ಲಿ ಸ್ಥಾಪಿತವಾದ ಅಧ್ಯಯನ ಕೇಂದ್ರದಲ್ಲಿ ಹೆಸರಾಂತ ಸಾಹಿತಿಗಳ, ಸಾಹಿತ್ಯ ಗ್ರಂಥಗಳು, ಕೊಡಗಿನ ಇತಿಹಾಸ ಪುಸ್ತಕಗಳು, ಪುರಾತನ ಕಾಲದ ಬರಹ ಮತ್ತು ಮಾಹಿತಿ ಕೊಡಗು ಗಜೇಟರುಗಳು, ವಿದೇಶಿಯರು ಕೊಡಗನ್ನು ವಿವರಿಸಿದ ಪುಸ್ತಕಗಳು, ಈಗಿನ ಚರಿತ್ರಾಕಾರರ ಬರಹ, ಕಥೆ, ಕವನ, ಆಧ್ಯಾತ್ಮಿಕ ತುಣುಕುಗಳು, ಸಂಶೋಧನೆಗೆ ಉಪಯುಕ್ತವಾದ ಕೃತಿಗಳು, ಮುಖ್ಯ ಪತ್ರಿಕೆಗಳಲ್ಲಿ ಬರೆದ ಸಾಹಿತ್ಯಗಳು, ವಿವಿಧ ಭಾಷೆಯ ಸಾಪ್ತಾಹಿಕಗಳು ಈ ಅಧ್ಯಯನ ಕೇಂದ್ರದಲ್ಲಿದೆ. ಸಂಗ್ರಹದಲ್ಲಿ ಬಹಳ ಉಪಯುಕ್ತವಾದ ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆಗಳೂ ಸೇರಿವೆ.

ಇದು ಜ್ಞಾನ ಜಿಜ್ಞಾಸೆಗಳ ತಂಗುದಾಣ. ಒಂದು ಸಾರ್ವಜನಿಕ ಕೊರತೆ ಎಂದರೆ ಇಲ್ಲಿಂದ ಹೊರಗೆ ಯಾವ ಪುಸ್ತಕಗಳನ್ನು ಕೊಡುವುದಿಲ್ಲ. ಆದರೆ ಆಸಕ್ತರು ತಮಗೆ ಬೇಕಾದ ಮಾಹಿತಿಗಳನ್ನು ಜೆರಾಕ್ಸ್ ಮಾಡಿಕೊಂಡು ಹೋಗಬಹುದು. ಇದರ ಮಾರ್ಗದರ್ಶನದಲ್ಲಿ ಹಲವಾರು ಅಧ್ಯಯನ ಕೇಂದ್ರಗಳು ಸ್ಥಾಪಿತವಾಗಿ ಯುವ ಜನಾಂಗಕ್ಕೆ ಬೆಳಕು ನೀಡುತ್ತಾರೆಂಬ ಭರವಸೆ ಇದೆ. ಭರವಸೆಗಳೆ ನಮ್ಮ ಪ್ರಯತ್ನದ ಮೂಲ.

ಈ ಅಧ್ಯಯನ ಕೇಂದ್ರವು ಸಾರ್ವಜನಿಕರಿಂದ ಉದಾರವಾಗಿ ಮಹತ್ವದ ಪುಸ್ತಕಗಳನ್ನು ಮತ್ತು ಧನಸಹಾಯವನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತದೆ. ಎಲ್ಲಾ ಕಾಗದ ಪತ್ರಗಳನ್ನು ಅಧ್ಯಕ್ಷರು, ಕೊಡವ ಸಮಾಜ, ಕುಶಾಲನಗರ - 571 234 ಇವರಲ್ಲಿ ವ್ಯವಹರಿಸಬಹುದು. ದೂರವಾಣಿ : ಕುಶಾಲನಗರ : 74083

ಚೇಂದ್ರಿಮಾಡ ಗ.ಮುತ್ತಪ್ಪ
ಅಧ್ಯಯನ ಕೇಂದ್ರ, ಕುಶಾಲನಗರ

ನಿನ್ನ ನೆನಪ್ ಕಾಡ್‌ತಾ ಉಟ್ಟು ಅಣ್ಣ

ತಂಗೆ : ನಿನ್ನ ನೆನಪ್ ಕಾಡಾತಾ ಉಟ್ಟು ಅಣ್ಣ ನೀ ಮರೆತ್ ನೋಡದೆ ಇರ್ ಬಡ ನನ್ನ. ವರ್ಷನೆ ಕಳ್‌ದ್ ಹೋತ್ ಪ್ರೀತಿ ಕರುಣೆ ಇಲ್ಲದ ಕಲ್ಲ್ ಹೃದಯನ ನಿಂದ್?

ಅಣ್ಣ : ನಿನ್ನನ್ನ ಹೆಂಗೆ ಮರಿಯದು ತಂಗೆ. ನನ್ನ ನೋವುನ ನುಂಗಿ ಬದುಕುತಾ ಒಳೆ. ನಿನ್ನ ಅಣ್ಣ ಅಂತ ಕಟುಕ ಅಲ್ಲಪ್ಪ. ತಪ್ಪು ತಿಳಿಬಡ ನೀನೆ ನನ್ನ ಜೀವ.

ತಂಗೆ : ನೀನ್ ಅಪ್ಪ ಅಮ್ಮನ ರೂಪಲಿ ನನ್ನ ಸಾಕಿದ. ನನ್ನ ಮದುವೆ ಮಾಡಿಕೆ ಆಸ್ತಿ ಮಾರ್‌ದ್ ದೊಡ್ಡ ಅಮ್ಮಂಗೆ ಮಾತ್ ಕೊಟ್ಟಂಗೆ ಮದ್ವೆ ಮಾಡ್ದ.

ಅಣ್ಣ : ಕಣ್ಣ್‌ಲಿ ಕಣ್ಣ್ ಇದ್ದಂಗೆ ನಿನ್ನ ಸಾಕಿದೆ. ಮನ್ಸ್‌ಗೆ ಎಳ್ಳಷ್ಟ್ ಬ್ಯಾನೆಕೊಡದೆ, ಸುಖವಾಗಿ ಬಾಳ್ ತೇಳಿ ನಿನ್ನ ಮುಖ ನೋಡಿಕ್ಕಾಗದೆ ಒಳೆ ವಿಧಿ ಹಿಂಗಾತ್.

ತಂಗೆ : ಗಂಡನ ದೇವ್ರುನಂಗೆ ಕಾಂಬಕೆ ಹೇಳಿದ ಅತ್ತೆ ಮನೆ ಜಿಳ್‌ಗಪ್ಪ ತೇಳ್‌ದ ಅಂತ ಅಣ್ಣ ನನ್ನಿಂದ ಯಾಕೆ ದೂರಾದ ಮನೆಗೆ ಬಾ. ನೀನಿಲ್ಲದ ತಬ್ಬಲಿ ಆದೆ.

ಅಣ್ಣ : ಹೇಳ್‌ನೆ ಕೇಳ್? ಪಾಪಿ ನಾನಾದೆ. ಬದ್‌ಕ್ ತುಂಬಾ ನೋವು ಕಷ್ಟ ಕಾಡ್‌ತಾ ಉಟ್ಟು. ಹೆಣ್ಣ್ ಮಕ್ಕಸ ನನ್ನ ಬುಟ್ಟ್ ಹೋದೊ.

ತಂಗೆ : ಶ್ರೀರಾಮನಂತವು ನನ್ನ ಗಂಡ. ಲವ ಕುಶನಂತ ನನ್ನ ಮಕ್ಕ. ಪೊಪ್ಪ, ಅಮ್ಮ ಮುಂದೆ ನೋಡುವ ಅತ್ತೆ ಮಾವ ನಾನ್ ಪುಣ್ಯವಂತೆ.

ಅಣ್ಣ : ಇಂತ ಸಮಯಲಿ ನಿನ್ನ ನೋಡಿಕೆ ನಾನ್ ಬಂದರೆ ನಿಂಗೆ ಅವಮಾನ ಕ್ಷಮಿಸ್ಸ್ ಅವ್ವ ನಿನ್ನ ಅಣ್ಣ ನೀನ್ ಸುಖವಾಗಿ ಬಾಳಕು ಅದೇ ನಿನ್ನ ಅಣ್ಣನ ಆಸೆ.

ಎಳೆನೀರ್

ಎಳೆನೀರ್‌ಕ್ಕಿಂತ
ಪೊರ್‌ಲಾಗಿತ್ತ್
ಅದರ್‌ನ ಕೊಟ್ಟ
ಎಳೆಗೂಡೆನ ಮಾತ್

ರಾಜ ಸೀಟ್

ಮನ್ಸ್‌ಗೆ ನೆಮ್ಮದಿ ಸಿಕ್ಕಲಿ ತೇಳಿ
ರಾಜ ಸೀಟ್‌ಗೆ ಹೋಕನ
ಅಲ್ಲಿಗೆ ಬರೋಕಾ ನನ್ನ
ಆಗಾಗ ಪೀಡ್‌ಸುವ ಸೊಳ್ಳೆ

ಬರಹ : **ಕುಂಜಿನ ಆರ್. ರಾಜ, ಕುಂಬಳದಾಳ್**

ಕಾಶ್ಮೀರ ಮೂರು ಡಾಕ್ಯು ಕವಿತೆಗಳು ತಿಮ್ಮಯ್ಯ, ರಾಣಿ ಮತ್ತು ಕೆಂಪು ಮಲ್ಲಿಗೆ

ಕಾಶ್ಮೀರ್ ಯುದ್ಧಲ್ಲಿ ಕಳೆದ ಜೂನ್ ಏಳ್‌ರಂದ್ ಮಡಿದು ಕಣ್ಮರೆಯಾದ ಡಿಲ್ಲಿಯ ಹನೀಫುದ್ದೀನನ ಸ್ಮೃತಿಗೆ ಜಿಗುರು ಮೀಸೆಯ ಸದಾ ನಕ್ಕು ನಗಿಸುವ ನಮ್ಮ ನೆಗೆ ಮೊಗದ ತಿಮ್ಮಯ್ಯ. ಇದೇ ಈಗ ಇಪ್ಪತ್ತಮೂರು ದಾಟಿದವನು. ಸೈನಿಕ ಶಿಕ್ಷಣ ಮುಗಿಸಿ ಊರಿಗೆ ಬಂದಿದ್ದಾನೆ. ಸಧ್ಯದಲ್ಲೇ ಮೊದಲ ನೇಮಕ ಕರೆ ಬರಲಿದೆ. ಎಲ್ಲಿಗೋ ಏನೋ? ಎಲ್ಲಾದರೇನಂತೆ. ಈ ನಡುವೆ ಅವನೊಳಗೆ ಖುಷಿ ಎದ್ದು ಕುಣಿಯುತ್ತಿದೆ. ಏಕೆಂದರೆ ಈ ರಜೆಯಲ್ಲಿ ಅವನ ಮೆಚ್ಚಿನ ರಾಣಿ ಅವಳೊಡನೆ ಲಗ್ನ ನಿಶ್ಚಯ ವಾಗಲಿದೆ. ರಾಣಿ ನೆರೆ ಮನೆಯ ಹುಡುಗಿ. ಚಿಕ್ಕಂದಿನಿಂದಲೂ ಜೊತೆಗಾರ್ತಿ. ಬಣ್ಣ ಕೊಂಚ ಕಪ್ಪು. ಎತ್ತರ ಐದಡಿಗೆ ಮೀರದು. ಅವಳು ಚೆಲುವೆಯೋ ಅಲ್ಲವೋ ಅವನು ಸ್ಪಷ್ಟವಾಗಿ ಹೇಳಲಾರ. ಆದರೆ ಒಂದಂತೂ ನಿಜ. ಅವನ ಬದುಕ್ಕಿಗೆ ಅವಳೆ ಆಗಬೇಕು. ಅವಳು ದಿನ ನಿತ್ಯವು ಕಣ್ಣಿಗೆ ಕಾಡಿಗೆ ಹಚ್ಚಿ, ಕಪ್ಪು ತುರುಬಿನ, ತುಂಬು ಬಿಳಿಯ ಮಲ್ಲಿಗೆ ಮುಡಿದು, ಕಣ್ಣು ಕುಣಿಸುತ್ತಾ ಅವನ ತಂಗಿಯರನ್ನು ನೋಡುವ ನೆಪದಲ್ಲಿ ಮನೆಗೆ ಬರುತ್ತಾಳೆ. ಅವಳು ಬರದ ದಿನ ಅವನೊಳಗಿನ ಹುಮ್ಮಸ್ಸು ಕ್ಷುಬ್ಧವಾಗುತ್ತದೆ.

ಲಗ್ನ ನಿಷ್ಕರ್ಷೆಯಾದ ಸಂಜೆ ಮೇಲಿನ ವರಾಂಡದಲ್ಲಿ ತಿಮ್ಮಯ್ಯ ಮತ್ತು ರಾಣಿ ಇಬ್ಬರೇ ಕೈಯಲ್ಲಿ ಕೈಯಿಟ್ಟು ಕೂತು ಕಳ್ಳ ಚೇಷ್ಟೆಗಳ ನಡುವೆ ನಾಳಿನ ಕನಸನ್ನು ನೇಯುತ್ತಿರುವಾಗ ದಿಢೀರನೆ ಬರುತ್ತದೆ ಆ ತಂತಿ. ಏನದು? ಯಾರಿಂದ? ರಾಣಿ ಕೇಳುತ್ತಾಳೆ? ಅವಳ ಧ್ವನಿ ನಡುಗುತ್ತಿದೆ. ನೀನು ನೋಡೋದೆಲ್ಲಾ ಅದೊಂದು ಪ್ರೇಮ ಸಂದೇಶ. ನಿನ್ನಾ ಸವತಿಯಿಂದ ನಗುತ್ತಾ ಹೇಳುತ್ತಾನೆ ತಿಮ್ಮಯ್ಯ. ಅವನ ಸ್ವಭಾವವೇ ಹಾಗೆ. ಯಾವಾಗಲೂ ತಮಾಷೆ ಆಣೆ ಕಲ್ಲುಗಳಂತೆ ಉದುರುತ್ತಿರಬೇಕು ಜೋಕುಗಳು. ಆಗಲೇ ರಾಣಿ ಅವನ ಕೈಯಿಂದ ಥಟ್ಟನೆ ತಂತಿಯನ್ನು ಕಿತ್ತುಕೊಂಡು ಓದುತ್ತಾಳೆ. ಅಳು ಒತ್ತಿ ಬರುತ್ತದೆ. ತನ್ನೊಳಗಿನ ಭಯ ಇಷ್ಟು ಬೇಗನೆ ಮೊಟ್ಟೆ ಇಡಬೇಕೆ? ತಿಮ್ಮಯ್ಯ ಅವಳ ಕೈ ಬಿಗಿ ಹಿಡಿದು ಹೇಳುತ್ತಾನೆ. ಛೆ ಹುಚ್ಚು ಹುಡುಗಿ ! ನಾನೊಬ್ಬ ಸೈನಿಕ ಯುದ್ಧಕ್ಕಲ್ಲದೆ ನನ್ನನ್ನೇನು ಕ್ರಿಕೆಟ್ ಆಟ ಆಡಲು ಕರಿತಾರೆಯೆ? ಹೆದರಬೇಡಾ ಬೇಗನೆ ಬಂದುಬಿಡ್ತೀನಿ. ಹೇಗೆ ಗೆದ್ದು ಬರ್ತೀನಿ ನೋಡುತ್ತಿರು. ಟಿಕ್.... ಟಿಕ್.... ಟಪ್.... ಟಪ್.... ಎಂದು ತಿಮ್ಮಯ್ಯ ಬಾಯಿಗಳಿಂದ ಬಂದೂಕದ ಶಬ್ದದ ಚಲನೆಗಳನ್ನು ಅನುಸರಿಸುತ್ತಾ ಶತ್ರುಗಳು ಸತ್ತು ಕೆಳಗುರುಳುವುದನ್ನು ನಟಿಸಿ ತೋರಿಸುತ್ತಾನೆ.

ರಾಣಿ ಅಳುವಿನ ನಡುವೆಯೂ ನಗುತ್ತಾಳೆ. ಆದಿರಲಿ ಹೇಳು ಕಾಶ್ಮೀರದಿಂದ ನಿನಗೇನು ತರಲಿ. ರಾಣಿ ಉತ್ತರಿಸುವುದಿಲ್ಲಾ. ಬೇಗನೆ ಹೇಳು ನೀನು ಹೇಳದಿದ್ದರೆ ನಾನು ಹೋಗೋದೇ ಇಲ್ಲಾ. ನನ್ನ ಬದಲು ನೀನೇ ಹೋಗಬೇಕಾಗುತ್ತದೆ ಎಂದು ಹೇಳಿದ ತಿಮ್ಮಯ್ಯ.

ರಾಣಿ ಕಣ್ಣೀರು ಒರೆಸಿಕೊಳ್ಳುತ್ತಾ ನೀನೇ ಹೋಗು ಎನ್ನುತ್ತಾನೆ. ಆವಾಗ ತಿಮ್ಮಯ್ಯ ಹೇಳುತ್ತಾನೆ. ಜತೆಗೆ ನಿನಗೆ ಮಲ್ಲಿಗೆ ಹೂ ಇಷ್ಟ, ತಾನೆ? ಕಾಶ್ಮೀರದ ತೋಟದಲ್ಲಿ ನಿನ್ನ ಬಣ್ಣದ.... ಸ್ಸಾರಿ...., ನಿನ್ನ ಕಣ್ಣಿನ ಬಣ್ಣದ ಕೆಂಪು ಮಲ್ಲಿಗೆ ಹೂಗಳು ತುಂಬಾ... ತುಂಬಾ... ಬಿಡುತ್ತದೆಯಂತೆ. ತಿಮ್ಮಯ್ಯ ಕೇಳುತ್ತಾನೆ ರಾಣಿಯನ್ನು ಎಷ್ಟು ತರಲಿ ಏನೇಲ್ಲಾ ತರಲಿ? ಒಂದು ಬುಟ್ಟಿ ಸಾಕೆ?

ಬೀಳ್ಕೊಡುಗೆಯ ದಿನ ಗಾಡಿ ಹತ್ತುತ್ತಾ ತಿಮ್ಮಯ್ಯ ಹೇಳುತ್ತಾನೆ. ಮಾವಿನ ಹಣ್ಣಿನ ಕಾಲ ಮುಗಿಯುವ ಮೊದಲೆ ಬಂದು ಬಿಡ್ತೀನಿ. ನನಗೂ ಒಂದೆರಡು ಓಟೆ ಇಟ್ಟಿರು, ಎಲ್ಲಾವನ್ನು ನೀನೇ ತಿಂದು ಮುಗಿಸಿ ಬಿಡ ಬೇಡ, ಇಬ್ಬರು ನಗುತ್ತಾರೆ ರಾಣಿ ಹಾಗೂ ತಿಮ್ಮಯ್ಯ.

ಹೊತ್ತಿಗೆ ಸರಿಯಾಗಿ ಮದುವೆಯ ಕಾರ್ಡನ್ನು ಅಚ್ಚಿಗೆ ಕಳಿಸೋದು ಮರೆಯಬೇಡ ಬೈ.... ಬೈ.... ಈಗ ಯುದ್ಧ ಮುಗಿದಿದೆ. ತೋಪು, ಬಂದೂಕುಗಳು ಸ್ತಬ್ಧವಾಗಿವೆ. ಕಾಶ್ಮೀರದ ಬೆಟ್ಟಗಳು ಹಿಮ ಹೊದ್ದು ನಾಳಿನ ಶರತ್ತಿನ ನಿದ್ದೆಗೆ ಸಿದ್ಧವಾಗುತ್ತಿದೆ. ಸುಸ್ತಾದ ಸೈನಿಕರು ಜಯಿಕಾರ ಕೂಗುತ್ತಾ ತಂಡ ತಂಡವಾಗಿ ಶಿಬಿರಗಳಿಗೆ ಹಿಂದಿರುಗುತ್ತಿದ್ದಾರೆ. ಅವರಿಗೆ ಮುಂದಾಗಿ ಸತ್ತವರ ಹೆಣಗಳು ಈಗಾಗಲೇ ಸಾಲು ಸಾಲಾಗಿ ಪೆಟ್ಟಿಗೆಗಳಲ್ಲಿ ತುಂಬಾ ಬಂದಿವೆ.

ಗಾಯ ಗೊಂಡವರು ಆಸ್ಪತ್ರೆಗಳಲ್ಲಿ ಚೇತರಿಸಿ ಕೊಳ್ಳುತ್ತಿದ್ದಾರೆ. ಬುದಕ್ಕಿರುವುವವರು ಸತ್ತವರನು ಮರೆಯುತ್ತಿದ್ದಾರೆ. ಆದರೆ ! ತಿಮ್ಮಯ್ಯ ನಮ್ಮ.... ತಿಮ್ಮಯ್ಯ ಎಲ್ಲೀ ಅವನ ಸುದ್ದಿಯೇ ಇಲ್ಲವಲ್ಲಾ? ಅವನ ಹೆಸರು ಸತ್ತವರ ದಾಖಲೆಯಲ್ಲಿ ಇಲ್ಲಾ? ಗಾಯಗೊಂಡವರ ಪಟ್ಟಿಯಲ್ಲಿಯೂ ಇಲ್ಲವಲ್ಲಾ. ಮತ್ತೇ ಅವನ ಗಾಳಿ ಕೆಂಪು ಮಲ್ಲಿಗೆ ಅರಸುತ್ತಾ ಕಾಶ್ಮೀರದ ಬೆಟ್ಟಗಳ ಮೇಲೆಲ್ಲೋ ಸುಳಿದಾಡುತ್ತಿದೆಯೆ? ರಾಣಿ ಮನೆಯ ವರಾಂಡದಲ್ಲಿ ಒಬ್ಬಳೆ ಉತ್ತರ ಮುಖಿಯಾಗಿ ಕೂತು ದೂರದ ಶೂನ್ಯವನ್ನೇ ದಿಟ್ಟಿಸಿ ನೋಡುತ್ತಾ ಕಾಯುತ್ತಿದ್ದಾಳೆ ತಿಮ್ಮಯ್ಯನಿಗಾಗಿ.

ಅವರು ತರುತ್ತೇನೆಂದು ಹೇಳಿದ ಕಾಶ್ಮೀರದ ಕೆಂಪು ಮಲ್ಲಿಗೆಗಾಗಿ ಹಾಗೆನೆ ರಾಣಿಯ ತಲೆಯಗೂದಲೂ ಮೆಲ್ಲ... ಮೆಲ್ಲಾಗೆ ಹಿಮಾಲಯದ ಹಿಮದಂತೆ ಬೆಳ್ಳಗಾಗುತ್ತಾ ಬಂದಿದೆ.

ಕೊಂಬನ ಎಂ. ಬಿದ್ದಪ್ಪ

ಜನಾಂಗದ ಅರಿಯುವಿಗೆ ಸಂಗಾತಿ ಓದು ಅವಶ್ಯಕ.

ಗಾಳಿಯಿಲ್ಲದೆ ಎಲೆ ಅಲ್ಲಾಡದು

ಅಂತರ್ಜಲ ವಿಜ್ಞಾನ ನಡೆದು ಬಂದ ದಾರಿ

ಅಂತರ್ಜಲ ಅತೀ ಅಮೂಲ್ಯ ನೈಸರ್ಗಿಕ ಸಂಪತ್ತು. ಇದು ಜಲ ಚಕ್ರದ ಅಂಗವಾಗಿದ್ದು, ಸಿಹಿ ನೀರಿನ ಭಂಡಾರವಾಗಿದೆ. ಅಂತರ್ಜಲ ಕುಡಿಯುವ ನೀರು, ಕೃಷಿ ಮತ್ತು ಕೈಗಾರಿಕೆಗೆ ನೀರನ್ನು ಒದಗಿಸುವ ಪ್ರಮುಖ ಮೂಲ. ನಗರೀಕರಣ, ಹೆಚ್ಚುತ್ತಿರುವ ಜನಸಂಖ್ಯೆ, ಕೃಷಿಯ ಆಧುನೀಕರಣದಿಂದ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಿಹಿ ನೀರಿನ ಬೇಡಿಕೆ ಹೆಚ್ಚಿದೆ. ಇದರಿಂದ ಅಂತರ್ಜಲದ ಬಳಕೆಯೂ ಹೆಚ್ಚಿದೆ.

ಚರಿತ್ರೆಯ ಪುಟ ತಿರುವಿ ಹಾಕಿದರೆ ಗ್ರೀಕ್ ಮತ್ತು ರೋಮನ್ ತತ್ವಜ್ಞಾನಿಗಳ ಟಿಪ್ಪಣಿಗಳಲ್ಲಿ ಅಂತರ್ಜಲದ ಹುಟ್ಟು ಮತ್ತು ಚಲನೆ ಬಗ್ಗೆ ಉಲ್ಲೇಖವಿದೆ. ಇವರಲ್ಲಿ ಮಾರಸ್ ವಿಟ್ರೂವಿಯಸ್‌ನ ನೀರಿನ ಸೋಸುವಿಕೆ ಸಿದ್ಧಾಂತ ಬಿಟ್ಟರೆ, ಉಳಿದ ಅಭಿಪ್ರಾಯಗಳಿಗೆ ವೈಜ್ಞಾನಿಕ ಸಮರ್ಥನೆಗಳಿಲ್ಲ.

ಭಾರತದ ಪ್ರಾಚೀನ ಗ್ರಂಥಗಳಾದ ಋಗ್ವೇದ ಮತ್ತು ಅಥರ್ವಣ ವೇದಗಳಲ್ಲಿ ನೀರಿನ ವರ್ಣನೆ ಇದೆ. ವರಾಹ ಮಿಹಿರನ 'ಬೃಹತ್ ಸಂಹಿತೆ'ಯಲ್ಲಿ ಜೈವಿಕ ಸೂಚಕಗಳನ್ನು ಆಧಾರವಾಗಿ ಇಟ್ಟುಕೊಂಡು, ಅಂತರ್ಜಲದ ಇರುವಿಕೆಯನ್ನು ಪತ್ತೆ ಹಚ್ಚುವ ವಿಧಾನಗಳನ್ನು ವಿವರಿಸಲಾಗಿದೆ. ಚರಕ ಸಂಹಿತೆ, ಶಶ್ರುತ ಸಂಹಿತೆ, ಅಷ್ಟಾಂಗ ಹೃದಯ ಸಂಹಿತೆ ಮುಂತಾದ ಗ್ರಂಥಗಳಲ್ಲೂ ನೀರಿನ ಗುಣಗಳ ಬಗ್ಗೆ ಸಾಕಷ್ಟು ಮಾಹಿತಿಗಳಿವೆ.

ಅಂತರ್ಜಲ ಪತ್ತೆ ಹಚ್ಚಿ ಸಮರ್ಪಕವಾಗಿ ಬಳಸುವ ವಿಧಾನ ಶುಷ್ಕ ಮತ್ತು ಅರೆ ಶುಷ್ಕ ಪ್ರದೇಶಗಳಲ್ಲಿ ಮೊದಲ ಬಾರಿಗೆ ಬಳಕೆಗೆ ಬಂತು. ಈ ಪ್ರದೇಶಗಳಲ್ಲಿ ಅಂತರ್ಜಲದ ಉಗಮ, ಇರುವಿಕೆ ಮತ್ತು ಚಲನೆಗಳ ಬಗ್ಗೆ ತಿಳಿದುಕೊಳ್ಳಲು ಮನುಷ್ಯ ಸಾಕಷ್ಟು ಪ್ರಯತ್ನ ಮಾಡಿದ. ತೆರೆದ ಬಾವಿಗಳಲ್ಲದೆ, ಸುರಂಗ ಮಾದರಿಯ ಕ್ಷಿತಿಜೀಯ ಬಾವಿಗಳು ಪ್ರಾಚೀನ ಈಜಿಪ್ಟ್‌ನಲ್ಲಿ ಕ್ರಿ. ಪೂ. 500 ರ ಸುಮಾರಿಗೆ ಬಳಕೆಯಲ್ಲಿದ್ದವು. ಎತ್ತರದ ಪ್ರದೇಶದಿಂದ ಅಂತರ್ಜಲವನ್ನು ಕಾನಾಟ್ಸ್‌ಗಳ ಮೂಲಕ ತಗ್ಗಿನ ಪ್ರದೇಶಗಳಿಗೆ ಹರಿಸಿ ಕೃಷಿಗೆ ಮತ್ತು ಕುಡಿಯಲು ಬಳಸುತ್ತಿದ್ದರು. ಕಾನಾಟ್ಸ್ ಬಾವಿ ಬಳಕೆ ಪ್ರಾಚೀನ ಇರಾನ್, ಅಫಘಾನಿಸ್ತಾನ್ ಮತ್ತು ಆಫ್ರಿಕಾ ಖಂಡದ ಉತ್ತರ ಪ್ರಾಂತ್ಯಗಳಲ್ಲಿತ್ತು. ನಾಗರೀಕತೆ ವಿಕಾಸ ಹೊಂದಿದಂತೆ ಅಂತರ್ಜಲವನ್ನು ಭೂಮಿಯಿಂದ ಮೇಲೆತ್ತಲು ಹೊಸ ಹೊಸ ತಂತ್ರಜ್ಞಾನ ಬಳಸಲಾಯಿತು. ಚೀನಾ ದೇಶದಲ್ಲಿ ಬಿದಿರಿನ ತುದಿಗೆ ಕಬ್ಬಿಣದ ಮೊನೆ ಮತ್ತು ಸ್ಪ್ರಿಂಗ್ ಸೇರಿಸಿ ಕೊಳವೆ ಬಾವಿ ಕೊರೆಯುವ ಕಲೆ ಬಳಕೆಯಲ್ಲಿತ್ತು. ಶಿಲಾ ಪದರಗಳನ್ನು ಕೊರೆದು ಅಂತರ್ಜಲ ಮೇಲೆತ್ತುವ ತಾಂತ್ರಿಕತೆಯಲ್ಲಿ ಈಜಿಪ್ಟ್ ಮತ್ತು ಯುರೋಪಿಯನ್ ರಾಷ್ಟ್ರಗಳು ಮುಂದಿದ್ದವು. ಕ್ರಿ. ಶ. 1126 ರಲ್ಲಿ ಫ್ರಾನ್ಸ್ ದೇಶದ ಅರ್ಟೋಯಿಯಸ್ ಎಂಬಲ್ಲಿ ಕೊರೆದ ಕೊಳವೆ ಬಾವಿಯಿಂದ (ಚಿಲುಮೆ ಬಾವಿ) ನೀರು ನಿರಾತಂಕವಾಗಿ ಹರಿದು ಬಂತು. ಇದು ಯುರೋಪಿಯನ್ ರಾಷ್ಟ್ರಗಳಲ್ಲಿ ಕೊಳವೆ ಬಾವಿಗಳ ವ್ಯಾಪಕ ಬಳಕೆಗೆ ನಾಂದಿ ಹಾಡಿತು.

ಹದಿನಾರನೆಯ ಶತಮಾನದಲ್ಲಿ ಬರ್ನಾರ್ಡ್ ಪಾಲಿಸಿ ಎಂಬ ಫ್ರೆಂಚ್ ತತ್ವಜ್ಞಾನಿ ನೆಲದಲ್ಲಿ ನೀರಿನ ಸೋಸುವಿಕೆ ಸಿದ್ಧಾಂತ ಪ್ರತಿಪಾದಿಸಿದ. ಆದರೆ ಈ ಸಿದ್ಧಾಂತ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿತು. ಜರ್ಮನ್ ಖಗೋಲ ಶಾಸ್ತ್ರಜ್ಞ ಜಾನ್ ಕೆಪ್ಲರ್ ಹಾಗೂ ಫ್ರೆಂಚ್ ತತ್ವಜ್ಞಾನಿ ರೆನೆ ಡೆಸ್ಕಾರ್ಟ್ಸ್ ಪ್ರತಿಪಾದಿಸಿದ ಅಂತರ್ಜಲ ಸಿದ್ಧಾಂತ ವೈಜ್ಞಾನಿಕ ಆಧಾರಗಳಿಲ್ಲದೆ ಬಿದ್ದು ಹೋದವು. ಆದರೆ ಪಿಯರೆ ಪೆರಾಲ್ಟ್, ಎಡ್ಮ್ ಮೋರಿಟ್ಟೆ ಮತ್ತು ಎಡ್ಮಂಡ್ ಹ್ಯಾಲೆ ಮಳೆ ಪ್ರಮಾಣ ಅಳೆಯುವ ರೀತಿ, ಮಳೆ ಬಿದ್ದಾಗ ಭೂಮಿ ಮೇಲೆ ಹರಿವ ನೀರಿನ ಪ್ರವಾಹ, ಆವಿಯಾಗುವ ನೀರಿನ ಪ್ರಮಾಣ ಈ ಕುರಿತು ನಡೆಸಿದ ಸಂಶೋಧನೆಗಳು ವೈಜ್ಞಾನಿಕ ವಲಯದಲ್ಲಿ ಸಾಕಷ್ಟು ಕುತೂಹಲ ಕೆರಳಿಸಿದವು. ಇದರಿಂದಾಗಿ 'ಜಲ ಚಕ್ರದ' ಸ್ಪಷ್ಟ ಪರಿಕಲ್ಪನೆ ಮೂಡಿ ಬಂತು.

ಹದಿನೆಂಟು ಮತ್ತು ಹತ್ತೊಂಬತ್ತನೇ ಶತಮಾನದಲ್ಲಿ ಸಂಶೋಧನೆ ಮೂಲಕ ಸಾದರ ಪಡಿಸಲಾದ ಭೂ ವಿಜ್ಞಾನದ ಮೂಲ ತತ್ವಗಳನ್ನು ಆಧಾರವಾಗಿಟ್ಟು ಕೊಂಡು ಅಂತರ್ಜಲದ ಇರುವಿಕೆ, ಸಂಗ್ರಹ ಮತ್ತು ಚಲನೆಯ ಅಧ್ಯಯನ ನಡೆಯಿತು. ಹತ್ತೊಂಬತ್ತನೇ ಶತಮಾನದಲ್ಲಿ ಅಂತರ್ಜಲ ವಿಜ್ಞಾನಕ್ಕೆ ಸಂಬಂಧಿಸಿದ ಹೇಗನ್- ಪಾಯಿಸೆಲ್ಲಿಯ ಲೋಮನಾಳ ಹರಿವು ಸೂತ್ರ, ಡಾರ್ಸಿಯ ಅಂತರ್ಜಲ ಚಲನೆಯ ಸಿದ್ಧಾಂತ, ಡ್ಯೂಪ್ಯೆಟ್- ಥೀಯಂ ಸೂತ್ರಗಳು ಆಧುನಿಕ ಜಲ ವಿಜ್ಞಾನ ಶಾಸ್ತ್ರಕ್ಕೆ ತಳಪಾಯ ಹಾಕಿದವು.

ಇಪ್ಪತ್ತನೇ ಶತಮಾನದಲ್ಲಿ ಭೂಜಲ ವಿಜ್ಞಾನದ ವಿವಿಧ ಪರಶಾಖೆಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲಾಯಿತು. ಅಂತರ್ಜಲ ವಿಜ್ಞಾನದ ಸಮಸ್ಯೆಗಳನ್ನು, ಜಟಿಲ ಗಣಿತ ಸೂತ್ರಗಳನ್ನು ಬಿಡಿಸಲು ಅತ್ಯಾಧುನಿಕ ಉಪಕರಣಗಳ ಜತೆ ಕಂಪ್ಯೂಟರ್ ಬಳಸಲಾಯಿತು. ಅಂತರ್ಜಲದ ರಾಸಾಯನಿಕ ಗುಣಗಳ ಅಧ್ಯಯನ ಮುನ್ನಡೆ ಸಾಧಿಸಿತು.

1903ರಿಂದ ಕೃಷಿಯಲ್ಲಿ ಅಂತರ್ಜಲದ ಬಳಕೆಗೆ ಒತ್ತು ನೀಡಲಾಯಿತು. 1935 ರಲ್ಲಿ ಮೊದಲ ಕೊಳವೆ ಬಾವಿಗಳ ಸರಣಿಯನ್ನು ಉತ್ತರ ಪ್ರದೇಶದ ವಿವಿಧ ಗ್ರಾಮಗಳಲ್ಲಿ ಕೊರೆಯಲಾಯಿತು. ಅಲ್ಲಿಂದ ಅಂತರ್ಜಲದ ಬಳಕೆ ಅವ್ಯಾಹತವಾಗಿ ಸಾಗಿತು. 1945 ರಲ್ಲಿ ಭಾರತೀಯ ಭೂವೈಜ್ಞಾನಿತ ಸರ್ವೇಕ್ಷಣಾ ಇಲಾಖೆ ಅಂತರ್ಜಲ ವಿಭಾಗವನ್ನು ತೆರೆಯಿತು.

1954 ರಲ್ಲಿ ವೈಜ್ಞಾನಿಕ ತಳಹದಿ ಮೇಲೆ ಅಂತರ್ಜಲ ಶೋಧಿಸುವ ಕಾರ್ಯಕ್ಕೆ ಅಮೆರಿಕದ ಸಹಭಾಗಿತ್ವ ದೊರೆಯಿತು. 1972 ರಲ್ಲಿ ಅಂತರ್ಜಲದ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರಿಯ ಅಂತರ್ಜಲ ಮಂಡಳಿ ಪ್ರಾರಂಭವಾಯಿತು. ನಮಗಿಂದು ಅಂತರ್ಜಲ ಶೋಧನೆ ಮತ್ತು ಅಭಿವೃದ್ಧಿಗೆ ಆಧುನಿಕ ಭೂ ಭೌತ ಶಾಸ್ತ್ರೀಯ ವಿಧಾನಗಳು, ಉಪಕರಣಗಳು ಹಾಗೂ ಉಪಗ್ರಹಗಳು ಲಭ್ಯವಿದೆ.

- ಡಾ. ನಾರಾಯಣ ಶೆಣೈ, ಮಣಿಪಾಲ

ಆರ್ಮಿ ರಜ

ಚಾಮಿ ಆರ್ಮಿಗೆ ಸೇರಿ ಒಂದು ತಿಂಗ ಆಗಿತ್ತ್. ಕಷ್ಟದ ತರಭೇತಿ ಮುಗಿಸಿ ಒಂದು ತಿಂಗ ಕಳೆಯುದರ ಒಳಗೆ, ಅವಂಗೆ ಬಹಳ ಬೇಜಾರ್ ಆಗಿ ಹೋಗಿತ್ತ್. ಅದ್ ಅಲ್ಲದೆ, ಭಾರತ-ಪಾಕಿಸ್ತಾನದ ಗಡಿ ಪ್ರದೇಶಲಿ ಹವಾಮಾನ ಅವಂಗೆ ಸ್ವಲ್ಪನು ಹಿಡಿಸಿತೆಲೆ. ಅಂವ ಒಂದು ದಿನ ಧೈರ್ಯ ಮಾಡಿ ಆಫೀಸರ್ ಹತ್ತಿರ ಹೋಗಿ ನಂಗೆ ಹದಿನೈದು ದಿನ ರಜ ಬೇಕುತ ಕೇಳ್ತತ್. ಅದಿಕ್ಕೆ ಆಫೀಸರು ಇವಂಗೆ ಸ್ವಲ್ಪ ತಮಾಷೆ ಮಾಡುಕುತ ನಿಂಗೆ ಹದಿನೈದು ದಿನ ಅಲ್ಲ ಒಂದು ತಿಂಗ ರಜ ಕೊಟ್ಟನೆ. ನೀನು ಒಂದು ಕೆಲ್ಸ ಮಾಡಕುತ ಹೇಳ್ತ್. ಚಾಮಿ ನೀನು ಪಾಕಿಸ್ತಾನದ ಒಂದು ಟ್ಯಾಂಕರ್‌ನ ತಕಂಡು ಬರಕುತ ಹೇಳ್ತ್. ಅಷ್ಟ್ ಹೇಳ್ದೆ ಸರಿ ಚಾಮಿ ಟ್ಯಾಂಕರ್ ಹತ್ತಿ ಹೊರಟ್ ಬುಟ್ಟತ್. ಒಂದು ಗಂಟೆ ಕಳ್ದಿರುದು. ಅಷ್ಟೊತ್ತಿಗೆ ಚಾಮಿ ಪಾಕಿಸ್ತಾನದ ಟ್ಯಾಂಕರ್ ತಕಂಡು ಬಾತ್. ಇದನ್ನು ನೋಡಿದ ಆಫೀಸರಿಗೆ ನಂಬಿಕೆ ಸಾಧ್ಯಾ ಆತ್‌ಲೆ. ತಲೆ ಬಿಸಿ ಆಗಿ ಬುಟ್ಟತ್ ಚಾಮಿನ ಆಫೀಸರ್ ಕೇಳ್ತ್ ಹೆಂಗೆ ತಂದತ. ಅದಿಕ್ಕೆ ಚಾಮಿ ಹೇಳ್ತ್. ನಾನ್ ಏನ್ ಕಷ್ಟ ಪಟ್ಟತ್ತಿಲೆ ಪಾಕಿಸ್ತಾನ ಗಡಿಲೇ ಹೋಕನ ಪಾಕಿಸ್ತಾನ ಸೈನಿಕನೊಬ್ಬ ಟ್ಯಾಂಕರ್‌ಲಿ ಬರುತಿತ್ತ್. ನಿಂಗೆ ರಜ ಬೇಕಾಂತ ಕೇಳ್ದೆ ಹುಂ! ತ ಹೇಳ್ತ್, ಇಬ್ಬರು ಟ್ಯಾಂಕರ್‌ನ ಬದಲಾಯಿಸಿಕೊಂಡೊ ಅಷ್ಟೆ!

– **ಮುಕ್ಕಾಟೀರ ಶಿವಾನಂದ**, ಮರಗೋಡು

ಒಗಟುಗಳು

1. ಆಕಾಶದಲ್ಲಿ ಹಾರಾ ಡುವ ಗಿಡುಗ ಅದರ ಕಾಲಿಗೆ ಪಟ್ಟೆಯ ಕಡಗ ಅದನ್ನು ಮಾಡಿದ ಬಡಗಿ ಹುಡುಗ
2. ಎಳೆದಷ್ಟು ಕುಗ್ಗುತ್ತದೆ.
3. ನಾಲ್ಕು ಜನರಿಗೆ ಕಷ್ಟ ಒಬ್ಬರಿಗೆ ಸುಖ
4. ಅವ್ವ ತಟರಿ ಮಗಳು ಬೋಳಿ

1. ಒನಕೆ 2. ಸಿಗರೇಟು 3. ಹೆಣ 4. ಬೇಲದ ಹಣ್ಣು

– **ಹುಲಿಮನೆ ರಮೇಶ**, ಮೈಸೂರು

ಕವನ

ಕವಿಯು
ಮನದೊಳಗೆ
ಕುಳಿತು ರಚಿಸಿದ
ಪದ್ಯ ಕವನವೇನು?
ಆಗಿರಬಹುದು,
ಕವನದ ಅರ್ಥ
ತಿಳಿಯಲೋದಾಗ
ಆಗುವುದನುಭವ
ವನವನ್ನೇ ಹೊಕ್ಕಂತೆ..!!

ಸ್ವರಚಿತ : **ಕಾನಡ್ಕ ಹನೀಶ್ ಅಪ್ಪಾಜಿ**, ಮರಗೋಡು.

"ನಗೆ ಮಲ್ಲಿಗೆ"

ಶಂಕರ : ರೇಡಿಯೋ ಅಂಗಡಿಯ ಮುಂದೆ ತೂಗು ಹಾಕಿರುವ ಫಲಕದ ಮೇಲೆ ಈ ರೀತಿ ಬರೆಯಲಾಗಿದೆ. 'ಒಮ್ಮೆ ಭೇಟಿಯಾದರೆ ಮತ್ತೆ ಮತ್ತೆ ಭೇಟಿಯಾಗುವಿರಿ'ಇದರ ಅರ್ಥವೇನು?

ಗುರು : ಒಮ್ಮೆ ಭೇಟಿಯಾಗುವುದು ರೇಡಿಯೋ ಕೊಳ್ಳಲಿಕ್ಕೆ. ಮತ್ತೆ ಮತ್ತೆ ಭೇಟಿಯಾಗುವುದು ಕೊಂಡ ರೇಡಿಯೋವನ್ನು ರಿಪೇರಿ ಮಾಡಿಸುವುದಕ್ಕೆ ಅಷ್ಟು ತಿಳಿಯಲಿಲ್ಲವೇ ಶಿಷ್ಯೋತ್ತಮ'

ಅವಳು : ಗಂಡಸರಿಗೆ ಯಾವ ವಿಚಾರವನ್ನಾದರೂ ಹೇಳಿದರೆ ಅದನ್ನು ಒಂದು ಕಿವಿಯಿಂದ ಕೇಳಿ ಮತ್ತೊಂದು ಕಿವಿಯಿಂದ ಬಿಟ್ಟು ಬಿಡುತ್ತಾರೆ.

ಅವನು : ಅದು ನಿಜ. ಆದರೆ ಹೆಂಗಸರಿಗೆ ಯಾವುದೆ ಒಂದು ವಿಚಾರವನ್ನು ಹೇಳಿದರು ಅದನ್ನು ಎರಡು ಕಿವಿಯಿಂದಲೂ ಕೇಳಿ ಬಾಯಿಂದ ಹೊರ ಬಿಡುತ್ತಾರೆ.

– **ಐಯ್ಯಂಡ ರಘು**, ಮಲ್ದಾರೆ

ನಗೆ ಸಂಗಾತಿ

ಹಳೇ ದೋಸ್ತಿಗ ಇಬ್ಬರ್ಲಿ ಒಬ್ಬ ಮಂಗ್ಳೂರ್ಲಿ ಸೆಟ್ಲ್ ಆದೆ. ಇನ್ನೊಬ್ಬ ಮಡಿಕೇರ್ಲಿ ಸೆಟ್ಲ್ ಆದೆ. ಇವಿಬ್ಬರು ಸುಮಾರು ವರ್ಷ ಕಳ್ದ ಮೇಲೆ ಒಟ್ಟಿಗೆ ಸೇರುವೆ. ಆಗ ಮಂಗ್ಳೂರಂವ ಹೇಳ್ದೆ ನಮ್ಮಲ್ಲಿ ಬೇಸಿಗೆ ಕಾಲಲ್ಲಿ ಎಷ್ಟು ಸೆಖೆ ತ್ತೆಳಿರೆ ಕೋಳಿ ಮೊಟ್ಟೆನ ಒಡ್ದ್ ತಲೆಗೆ ಹಾಕಿದಂಗೆ ಅದ್ ಆಮ್ಲೇಟ್ ಆದೆತಾ. ಅವನ ತಲೆ ಬಾಣೆ ಆಗಿದ್ದದೆ.

ಆಗ ಮಡಿಕೇರಿಯಂವ ಹೇಳ್ದೆ. ನಮ್ಮಲ್ಲಿ ಚಳಿಗಾಲ ಎಷ್ಟ್ ಚಳಿತ್ತೇಳ್ರೆ ಹಸುಂದ ಹಾಲು ಕರುಬಿಟ್ಟಂಗೆ ಹಾಲ್ ಐಸ್ ಗಟ್ಟಿದ್ದೆಂತ ಅದ್ಕೆ ಸಕ್ಕರೆ ಹಾಕಿರೆ ಐಸ್‌ಮಿಲ್ಕ್ ಕ್ಯಾಂಡಿ ಆಗಿದ್ದದೆತ.

– **ಹುಲಿಮನೆ ಕೆ. ಸಹದೇವ**, ಮದೆ ಗ್ರಾಮ

ಕವನ

ನುಡಿದಂತೆ ನಡೆವವ

ನುಡಿದಂತೆ ನಡೆವವ
ನಾನು
ನುಡಿವವಳು
ಅವಳು
ನಡೆವವನು
ನಾನು

ಸ್ವರಚಿತ ಕವನ : **ಸುನಿತ ಚಂದ್ರ ಶೇಖರ್**

ಕೋಪಿ ಬಲ್ಲನೇ ದಯಾ – ದಾಕ್ಷಿಣ್ಯವ

ವ್ಯಕ್ತಿ ಪರಿಚಯ : ನೂಜಿ ದಿನಕರಗೌಡ



ಶ್ರೀಮಾನ್ ನೂಜಿ ದಿನಕರ ಗೌಡರು ಪುತ್ತೂರು ತಾಲ್ಲೂರು ಕೊಳ್ತಿಗೆ ಗ್ರಾಮದ ಬಾಲಣ್ಣಗೌಡರ ಇಬ್ಬರ್ ಪುತ್ರರಲ್ಲಿ ಎರಡನೆಯವರು. ಮಧ್ಯಮ ವರ್ಗ ಕುಟುಂಬದಲ್ಲಿ ಹುಟ್ಟಿ ಕಷ್ಟ ಕಾರ್ಪಣ್ಯಗಳಲ್ಲಿ ಬೆಳೆದು ಬಂದ ಇವರು ತನ್ನ ಎಳೆ ವಯಸ್ಸಿನಲ್ಲಿಯೇ ಅಂದರೆ, ಕಾಲೇಜು ಮೆಟ್ಟಿಲು ಹತ್ತುವಷ್ಟರಲ್ಲಿಯೇ ತನ್ನ ತಂದೆಯನ್ನು ಕಳೆದುಕೊಂಡು ಆಗ ತಾನೇ ಅಧ್ಯಾಪಕ ವೃತ್ತಿಯನ್ನು ಹಿಡಿದಿದ್ದ ಅಣ್ಣನ ಸಹಾಯ ಹಾಗೂ ಪ್ರೋತ್ಸಾಹದಿಂದ ಓದು ಮುಂದುವರೆಸಿ ಪದವೀಧರರಾದರು. ಬಳಿಕ 1969ರಲ್ಲಿ ಕೊಡಗಿನ ಶ್ರೀಮಂಗಲದಲ್ಲಿ ಟ್ಯುಟೋರಿಯಲ್ ಒಂದನ್ನು ಪ್ರಾರಂಭಿಸಿ ಅದರಲ್ಲಿ ಸಾಧನೆಯ ಮೂಲಕ ಸಫಲತೆಯನ್ನು ಕಂಡು ಕೊಂಡರು. 1971 ರಲ್ಲಿ ಭಾರತ ಆಹಾರ ನಿಗಮದಲ್ಲಿ ಉದ್ಯೋಗಿಯಾಗಿ ಸೇರ್ಪಡೆಗೊಂಡು ಅದರಲ್ಲಿ ವಿವಿಧ ಹಂತಗಳಲ್ಲಿ ಮೇಲೇರಿ ಈಗ ಮಂಗಳೂರಿನ ಜಿಲ್ಲಾ ಕಛೇರಿಯಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಮಾತ್ರವಲ್ಲ ದಕ್ಷತೆ ಹಾಗೂ ಪ್ರಾಮಾಣಿಕತೆಗೆ ಹೆಸರುವಾಸಿಯಾಗಿರುತ್ತಾರೆ.

ಶ್ರೀಯುತ ಗೌಡರು ಮಂಗಳೂರಿನಲ್ಲಿ 1979 ರಿಂದ 89 ರವರೆಗೆ ಉದ್ಯೋಗದಲ್ಲಿದ್ದಾಗ, ವೃತ್ತಿ ವಿಕಸನ ಹಾಗೂ ಸಮಾಜ ಸೇವೆಗೆ ಹೆಸರಾದ ಜೇಸೀ ಸಂಸ್ಥೆಯನ್ನು ಸೇರಿಕೊಂಡು ಅದರಲ್ಲಿ ಹಂತ ಹಂತವಾಗಿ ಬೆಳೆದು 1988 ರಲ್ಲಿ ಸುರತ್ಕಲ್ ಶಾಖೆಯ ಅಧ್ಯಕ್ಷರಾದರು. ಅವರ ಅಧ್ಯಕ್ಷತೆಯಲ್ಲಿ ಸುರತ್ಕಲ್‌ನಲ್ಲಿ ನಡೆದ ಪ್ರಾಂತೀಯ ಸಮಾವೇಶ ಒಂದು ದಾಖಲೆಯ ಅವಿಸ್ಮರಣೀಯ ಸಮಾವೇಶವೆಂದು ಇಂದೂ ಪ್ರತೀತಿ ಇದೆ. ಮುಂದೆ ಅವರು 1989 ರಲ್ಲಿ ಕರ್ನಾಟಕ ರಾಜ್ಯ ಜೇಸೀಯ ಉಪಾಧ್ಯಕ್ಷರಾಗಿ ಮಾಡಿದ ಸಾಧನೆ ಅಪಾರ ಹಾಗೂ ಅಮೋಘ. ಅವರ ಸಾಧನೆಗೆ ಮೆಚ್ಚಿ ಅವರನ್ನು 1989 ರ ಭಾರತೀಯ ಜೂನಿಯರ್ ಚೇಂಬರಿನ ಅತ್ಯುತ್ತಮ ರಾಜ್ಯ ಉಪಾಧ್ಯಕ್ಷರೆಂದು ಪರಿಗಣಿಸಿ ಕ್ಯಾಲಿಕಟ್‌ನಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ರಾಷ್ಟ್ರಾಧ್ಯಕ್ಷರು ರಾಷ್ಟ್ರ ಪ್ರಶಸ್ತಿಯನ್ನಿತ್ತು ಗೌರವಿಸಿದರು. ಇದು ಅವರ ಸಾಧನೆ ಕಾರ್ಯದಕ್ಷತೆಗೆ ಸಂದ ಪ್ರತಿಫಲ. ಇದರೊಂದಿಗೆ ಸಂಸ್ಥೆಯ ಪ್ರತಿಷ್ಠಿತ "ಹೆನ್ರಿ ಗಿಸೆಂಬಿರ್ ಫೆಲೋಶಿಪ್" ಪ್ರಶಸ್ತಿಯನ್ನಿತ್ತು, ಗೌರವಿಸಲಾಯಿತು.

ಮುಂದೆ ಶ್ರೀಯುತ ಗೌಡರು ಬೆಂಗಳೂರಿಗೆ ವರ್ಗಾವಣೆಯಾಗಿ ನೆಲೆಸಿದಾಗ 1991 ರಲ್ಲಿ "ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ" ಗೌರವ ಕಾರ್ಯದರ್ಶಿಯಾಗಿ ಆಯ್ಕೆಯಾದರು. ವ್ಯವಸ್ಥಿತವಾಗಿ ಲೆಕ್ಕ ಪತ್ರವನ್ನಿಡುವುದರ ಮೂಲಕ ಸಮಾಜದ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ತಂದು ಕೊಟ್ಟ ಕೀರ್ತಿ ಇವರದ್ದು. ಮಿತಭಾಷಿಯಾದ ಇವರು ಕರಾರುವಕ್ಕಾದ ಮಾತು ಮತ್ತು ಸರಳ ಸಜ್ಜನಿಯ ನಡೆ ನುಡಿಗಳಿಂದ ಸಮಾಜದ ಎಲ್ಲಾ ವರ್ಗದ ಜನರ ಪ್ರೀತಿಗೆ ಪಾತ್ರರಾಗಿರುತ್ತಾರೆ. ಬೆಂಗಳೂರಿನ ಕೊಡಗು ಮತ್ತು ದ. ಕ. ಗೌಡ ಸಮಾಜದ ಇಂದಿನ ಸರ್ವತೋಮುಖ ಬೆಳವಣಿಗೆಗೆ ಶ್ರೀಯುತರ ಕೊಡುಗೆ ಅಪಾರ ಹಾಗೂ ಅವಿಸ್ಮರಣೀಯ. ಸುಮಾರು ಹತ್ತು ವರ್ಷಗಳ ಕಾಲ ಇವರು ಕೊಡಗು ಮತ್ತು ದ. ಕ ಗೌಡ ಸಮಾಜದ ಏಳಿಗೆಗಾಗಿ ಅವಿರತವಾಗಿ ದುಡಿದವರು. ಶ್ರೀಯುತರು ಎಷ್ಟೋ ಸಲ ಈ ಕಾರ್ಯದರ್ಶಿಯ ಜವಾಬ್ದಾರಿಯಿಂದ ವಿರಮಿಸಲು ಪ್ರಯತ್ನಿಸಿದರೂ, ಕಾರ್ಯಕಾರಿ ಮಂಡಳಿಯ ಸದಸ್ಯರು ಹಾಗೂ ಸಮಾಜದ ಬಂಧುಗಳು ಬಿಟ್ಟುಕೊಟ್ಟಿರಲಿಲ್ಲ. ಕಡೇಗೆ ಇವರ ವರ್ಗಾವಣೆಯಿಂದಾಗಿ ಅನ್ಯಮಾರ್ಗವಿಲ್ಲದೇ ಒಪ್ಪಲೇ ಬೇಕಾದ ಪ್ರಸಂಗ ಬಂದೊದಗಿತು. ಶ್ರೀಯುತರು ಡಾ ಕಾಯರ್‌ಮಾರ್ ವೀರಪ್ಪಗೌಡರು ಈ ಮೇಲಿನ ಸಮಾಜದ ಅಧ್ಯಕ್ಷರಾಗಿದ್ದ ಕಾಲದಿಂದ ಹಿಡಿದು ಆಮೇಲೆ ಅಧ್ಯಕ್ಷರುಗಳಾದ ಶ್ರೀಮಾನ್ ಪೂಜಾರಿರ ಮೊಣ್ಣಪ್ಪ ಹಾಗೂ ಶ್ರೀಮಾನ್ ದಂಬೆಕೊಡಿ ಆನಂದನವರ ಕಾಲದವರೆಗೆ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಕ್ರಿಯಾಶೀಲರು.

ಯಾವ ಕೌಟುಂಬಿಕ ಹಿನ್ನಲೆಯೂ ಇಲ್ಲದೆ ತನ್ನ ಸ್ವಶಕ್ತಿ ಹಾಗೂ ಪರಿಶ್ರಮದಿಂದ ಜೀವನದಲ್ಲಿ ಹಂತ ಹಂತವಾಗಿ ಮೇಲೇರಿ ಬಂದು ಎಲ್ಲರ ಪ್ರೀತಿಗೆ ಪಾತ್ರರಾಗಿ ಜೇಸೀ ಸಂಸ್ಥೆಯಲ್ಲಿ ಪಳಗಿದ ಇವರು ವ್ಯವಸ್ಥಿತವಾಗಿ ಸಭಾ ಕಾರ್ಯಕ್ರಮ ಹಾಗೂ ಸಮಾವೇಶಗಳನ್ನು ನಡೆಸುವುದರ ಜೊತೆಗೆ ಸಮಯ ಪ್ರಜ್ಞೆಯ ಬಗ್ಗೆ ತುಂಬಾ ಕಾಳಜಿ ವಹಿಸುವ ಶ್ರೀಯುತರು, ಸಮಾಜದ ಬಂಧುಗಳ ಕಷ್ಟ, ಸುಖಗಳಿಗೆ ಸ್ಪಂದಿಸುವ ಮಾನವೀಯ ಮೌಲ್ಯಗಳನ್ನು ಕ್ರೋಢೀಕರಿಸಿಕೊಂಡು ಎಲ್ಲರ ಪ್ರೀತಿ ಹಾಗೂ ಕೃಪೆಗೆ ಪಾತ್ರರಾಗಿರುತ್ತಾರೆ. ಪತ್ನಿ ಪದ್ಮಾವತಿ ಹಾಗೂ ಇಬ್ಬರು ಗಂಡು ಮಕ್ಕಳು ಇವರ ಪುಟ್ಟ ಸಂಸಾರಕ್ಕೆ ಆ ಭಗವಂತನು ಶಾಂತಿ ನೆಮ್ಮದಿಯನ್ನು ಕರುಣಿಸಲೆಂದು ಹಾರೈಸೋಣ.

ಬರಹ : ಪಟ್ಟಡ ಪ್ರಭಾಕರ.

ಕೊಡಗು ಸಂಗಾತಿ, ಪಾಕ್ಷಿಕನ್ನ ತಕ್ಕಂಡೊದಕು

ಕೊಡಗು ಗೌಡ ಬಂಧುಗಳ ನಡುವೆ ಕ್ರೀಡೋತ್ಸವ ನಡೆಯಲಿ

ಕೊಡಗು ಕರ್ನಾಟಕದಲ್ಲಿಯೇ ಒಂದು ಸುಂದರ ಹಾಗೂ ವೈವಿಧ್ಯಮಯ ಜಿಲ್ಲೆಯಾಗಿ ವಿಜೃಂಭಿಸಿದೆ. ಕೊಡಗನ್ನ ಕರ್ನಾಟಕದ ಕಾಶ್ಮೀರ ಎಂದೂ, ಮೂಡಲ ಸೀಮೆಯ ಜನರು ಕೊಡಗನ್ನು ಮಿನಿದುಬೈ ಎಂದು ವ್ಯಾಖ್ಯಾನಿಸುತ್ತಾರೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಹೊಂದಿರುವುದಲ್ಲೇ ಕ್ರೀಡಾ ಕ್ಷೇತ್ರದಲ್ಲಿ ಕೂಡ ಮಹತ್ವದ ಸಾಧನೆಯನ್ನು ಮಾಡಿದೆ.

ಕೊಡಗು ವೈವಿಧ್ಯಮಯ ಕ್ರೀಡೆಗಳಿಗೆ ಹೆಸರುವಾಸಿಯಾದ ಜಿಲ್ಲೆ. ಇಲ್ಲಿನ ಕ್ರೀಡಾ ಪಟುಗಳು ಒಂದಲ್ಲಾ ಒಂದು ರೀತಿಯ ಕ್ರೀಡೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ಸಾಧನೆಯನ್ನು ಮಾಡಿ ತೋರಿಸಿದ್ದಾರೆ.

ಇತ್ತೀಚಿನ 4-5 ವರ್ಷಗಳಲ್ಲಿ ಸ್ಥಾಪಿಸಲಾದ 'ಕೊಡವ ಹಾಕಿ ಉತ್ಸವ'ದಲ್ಲಿ ಕೊಡವ ಕುಟುಂಬಗಳ ನಡುವೆ 'ಹಾಕಿ' ಕ್ರೀಡೆ ಪ್ರಾರಂಭವಾಗಿ ಸುಮಾರು 700 ಕ್ಕೂ ಮಿಕ್ಕಿ ಕುಟುಂಬಗಳು ಈ ಪಂದ್ಯಾಟ ದಲ್ಲಿ ಪಾಲ್ಗೊಂಡಿವೆ. ಇದು ರಾಷ್ಟ್ರದಲ್ಲೆ ಮಾತ್ರವಲ್ಲದೇ ಇಡೀ ವಿಶ್ವದಲ್ಲೇ ದಾಖಲೆಯನ್ನು ಸೃಷ್ಟಿಸಿವೆ. ಸುಮಾರು ಒಂದುವರೆ ತಿಂಗಳು ನಡೆಯುವ ಈ ಕ್ರೀಡೆಯು ಕೇವಲ ಕೊಡವ ಜನಾಂಗಕ್ಕೆ ಮಾತ್ರ ಸೀಮಿತವಾಗಿರುವುದು ವ್ಯಸನದ ಸಂಗತಿ. ಕೊಡವ ಜನಾಂಗದ ಯುವ ಪ್ರತಿಭೆಗಳು ರಾಷ್ಟ್ರ ಮಟ್ಟದಲ್ಲಿ ದಾಖಲೆಯನ್ನು ನಿರ್ಮಿಸುವುದಾಗಿದೆ. ಬೇಸಿಗೆಯ ರಜೆಯಲ್ಲಿ ಸಂಜೆಯ ಸಮಯ ಪ್ರತಿ ಮೈದಾನದಲ್ಲಿಯು ಪಂದ್ಯಾ ಗೆಲ್ಲುವ ಉದ್ದೇಶವನ್ನಿಟ್ಟು ಅಭ್ಯಾಸಿಸುತ್ತಿರುತ್ತಾರೆ.

ಕೊಡಗಿನಲ್ಲಿ ಕೊಡುಗೈ ದಾನಿಗಳು, ಉದಾರಿಗಳು, ಶ್ರೀಮಂತರು, ಕಾಫಿ ಬೆಳೆಗಾರರು, ಶುಂಠಿ ಬೆಳೆಗಾರರು, ಮುಂತಾದ ಹಲವು ರೀತಿಯಲ್ಲಿ ಸಂಪತ್ತನ್ನು ಹೊಂದಿರುವ ಅನೇಕ ಪ್ರತಿಷ್ಠಿತ ಗೌಡ ಕುಟುಂಬಗಳು ಇರುವುದರಿಂದ, ಅಂತಹ ಪ್ರತಿಷ್ಠಿತ ಕುಟುಂಬಗಳು ಯುವ ಜನತೆಗೆ ಯುವ ಪ್ರತಿಭೆಗಳಿಗೆ ಅನುಕೂಲವಾಗುವ ಪ್ರತಿಭೆಗಳನ್ನು ಕತ್ತಲಿನಿಂದ ಬೆಳಕಿನೆಡೆಗೆ ಚೆಲ್ಲುವ ಉದ್ದೇಶವನ್ನಿಟ್ಟುಕೊಂಡು ಯುವ ಕ್ರೀಡಾ ಪ್ರತಿಭೆಗಳ ಭವಿಷ್ಯದ ದೃಷ್ಟಿಯಿಂದ ಹಾಕಿ ಪಂದ್ಯಾಟದ ಬದಲಾಗಿ ಎಲ್ಲ ಯುವ ಜನತೆ ಆಟದ ನಿಯಮವನ್ನು ತಿಳಿದಿರುವ ಕಾಲ್ಚೆಂಡು (Football) ಪಂದ್ಯಾಟವನ್ನು ಏರ್ಪಡಿಸಿದರೆ ಅದು ಗೌಡ ಯುವ ಪೀಳಿಗೆಗೆ ಒಂದು 'ಗೌಡ ಕ್ರೀಡೋತ್ಸವ'ವಾಗಿ ಪರಿವರ್ತನೆಯಾಗುತ್ತದೆ. ಕೇವಲ ಒಂದು ಪ್ರತಿಷ್ಠಿತ ಕುಟುಂಬ ಮೊದಲು ಉತ್ಸವ ಪ್ರಾರಂಭಿಸಲು ಮುಂದಾದರೇ ಅಥವಾ ಸಂಸ್ಥಾಪಿಸಿದರೆ, ನಂತರ ಉಳಿದ ವರ್ಷಗಳಲ್ಲಿ ಪೈಪೋಟಿಯಿಂದ ಪ್ರತಿಷ್ಠಿತ ಮನೆತನಗಳು ಮುಂದೆ ಬರಬಹುದು.

ಇದು ಪರಸ್ಪರ ಗೌಡ ಕುಟುಂಬಗಳಲ್ಲಿ ನಡೆಯಲು ಅಸಾಧ್ಯ. ಏಕೆಂದರೆ ಕೆಲವೊಂದು ಕುಟುಂಬದಲ್ಲಿ ಕೆಲವೇ ಕ್ರೀಡಾ ಪಟುಗಳು ಲಭ್ಯವಿರುವುದರಿಂದ ಇದು ಕಷ್ಟವಾಗಬಹುದು. ಆದ್ದರಿಂದ ಇದನ್ನು ಪರಸ್ಪರ ಗ್ರಾಮಗಳ ಗೌಡ ಯುವ ಜನತೆಯ ನಡುವೆ ನಡೆಸಬಹುದು. ಈಗಾಗಲೇ ಅನೇಕ ಗ್ರಾಮಗಳಲ್ಲಿ ಗೌಡ ಯುವಕ ಸಂಘಗಳು ನೊಂದಣಿಯನ್ನು ಮಾಡಿಕೊಂಡಿವೆ ಅಲ್ಲದೇ ತಾಲೋಕು ಜಿಲ್ಲಾ ಮಟ್ಟದ ಕ್ರೀಡೆಗಳಲ್ಲಿ ಜಯಗಳಿಸಿವೆ ಹಾಗೂ ಪಾಲ್ಗೊಂಡಿವೆ. ಅದೇ ರೀತಿ ಈ 'ಗೌಡ ಕಾಲ್ಚೆಂಡು' ಕ್ರೀಡೋತ್ಸವವನ್ನು ಪ್ರತಿಷ್ಠಿತ ಮನೆತನಗಳು ಮುಂದೆ ಬಂದು ನೆರವೇರಿಸುವಂತಾಗಲಿ ಇದಕ್ಕೆ ಸಂಘ ಸಂಸ್ಥೆಗಳ ಪ್ರೋತ್ಸಾಹ ದೊರೆತರೆ ಸಾಧ್ಯ. ಕ್ರೀಡಾ ಸ್ಪರ್ಧೆಗಳನ್ನು ಗೌಡ ಬಾಂದವರ ನಡುವೇ ಹಮ್ಮಿಕೊಂಡಾಗ ಪರಸ್ಪರ ಜನಾಂಗದಲ್ಲಿ ಬಾಂಧವ್ಯದ ನಂಟು, ಬೆಳೆಯುತ್ತದೆ. ಒಗ್ಗಟ್ಟು ಮೂಡುತ್ತದೆ. ಅಲ್ಲದೇ ಕ್ರೀಡಾ ಪಟುಗಳು ತಮ್ಮಲ್ಲಿ ಅಡಗಿರುವ ಪ್ರತಿಭೆಗಳನ್ನು ಪ್ರೇಕ್ಷಕರಿಗೆ ಪ್ರದರ್ಶಿಸಲು ಅವಕಾಶವಾಗುತ್ತದೆ. ಗೌಡ ಬಾಂಧವರ ಮುಖಾ ಮುಖಿ ಭೇಟಿಯಾಗುತ್ತದೆ. ಪರಸ್ಪರ ಭೇಟಿಯಿಂದ ನೆಂಟಸ್ಥಾನ ಆಗಲೂ ಸಾಧ್ಯವಾಗುತ್ತದೆ.

ಮಾನ್ಯರೆ, ತಾವುಗಳು ಮಾಡುವ ದುಂದು ವೆಚ್ಚವನ್ನು ಸ್ವಲ್ಪ ಕಡಿಮೆ ಮಾಡಿ ಕ್ರೀಡೆಯ ಕಡೆ ಗಮನ ಹರಿಸಿ ಕ್ರೀಡೋತ್ಸವವನ್ನು ನಡೆಸಲು ಮುಂದೆ ಬಂದರೆ ಅವರ ಹೆಸರು ಶಾಶ್ವತವಾಗಿ ಗೌಡ ಇತಿಹಾಸದಲ್ಲಿ ಮೆಲುಕು ಹಾಕುತ್ತಿರುತ್ತದೆ. ಈ ನಿಟ್ಟಿನಲ್ಲಿ ಶ್ರೀಮಂತ ಮನೆತನಗಳು ಮುಂದೆ ಬಂದು ಈ ವರ್ಷವೇ "ಗೌಡ ಕಾಲ್ಚೆಂಡು ಕ್ರೀಡೋತ್ಸವ" 2002 ವನ್ನು ಸಂಸ್ಥಾಪಿಸಲಿ ಎಂದು ನಮ್ಮ ಬಯಕೆಯಾಗಿದೆ.

ಸಲಹೆ : **ಆರ್. ಕೆ. ಬ್ರದರ್ಸ್**, ಮರಂದೋಡ

ಒಳ್ಳೆ ಕೆಲ್ಸ

ಯಾವುದಾದರ್ ಒಂದ್ ಒಳ್ಳೆ ಕೆಲ್ಸ ಮಾಡಿದಗೋಸ್ಕರ ನಾವ್ ಹಿಂದೆಂದ ವ್ಯಸನ ಪಡ್ವ ಅವಶ್ಯಕತೆ ಇಲ್ಲೆಯೋ, ಕೆಲಸ ಮಾಡಿದಗೋಸ್ಕರ ಒಬ್ಬಂಗೆ ಹೆದ್ರುವ ಅವಶ್ಯಕತೆ ಇಲ್ಲೆಯೋ ಅಂತ ಕೆಲ್ಸನ ಮಾಡ್ದು ಒಳ್ಳೆದ್. ಒಳ್ಳೆ ಕೆಲ್ಸ ಆನಂದ, ಶಾಂತಿ ಕೊಟ್ಟದೆ. ಕಪಟ ದೃಷ್ಟಿಲಿ. ಮೋಸದ್ ಸ್ವಂತ ಆಸೆಗೆ ಆತ್ಮವಂಚನೆ ಮಾಡಿಕಂಡ ಕಾರ್ಬಾರ್ ದುಃಖಕೆ ಕಾರಣ. ಅಶಾಂತಿಗೆ ಕಾರಣ. ಹಸ್‌ಗೂಸಿಗೆ ನಾಟ್ಯಕಲೆ ಗೊತ್ತಿಲ್ದೆ ಇದ್ರೂ, ಅದರ ಅಂಬೆಗಾಲ್ ನಮಿಗೆ ನರ್ತನದಂಗೆ ಆದೆ. ಆ ಅಂಬೆಗಾಲ್ ನಡಿಗೆನ ಆಸೆಪಟ್ಟವೆ. ಹಂಗೆ ಆಡಂಬರದ ಶಬ್ಧ ಇಲ್ಲದೆ ಸತ್ಯ, ಸರಳತೆ, ಮೌನ ಮುಗ್ಧತೆಲಿ ಮಾಡ್ವ ಕೆಲ್ಸನ ಎಲ್ಲವೂ ಸ್ವಾಗತ ಮಾಡಿವೆ. ನಾವ್ ಮಾಡ್ವ ಕೆಲ್ಸನ ಜನ ಮೆಚ್ಚಕು. ಒಳ್ಳೆ ಮನ್ಸ್ ಒಳ್ಳೆ ಕೆಲ್ಸಕ್ಕೆ ಕಾರಣ.

ಕೊಡವ ಭಾಷೆಲಿ : ಚೇಂದ್ರಿಮಾಡ ಜಿ. ಮುತ್ತಪ್ಪ
ಅರೆಭಾಷೆಗೆ : ಪಟ್ಟಡ ಪ್ರಭಾಕರ

ಮಹಿಳೆ ಮತ್ತು ರಾಜಕೀಯ

ಈ ವೈಜ್ಞಾನಿಕ ಯುಗದಲ್ಲಿ ಮಹಿಳೆ ಯಾವ ರಂಗದಲ್ಲಿ ತನ್ನ ಅಡಿಯನ್ನಿರಿಸಿಲ್ಲ? ಇಂದು ಮಹಿಳೆ ಎಲ್ಲ ರಂಗಗಳಲ್ಲೂ ತನ್ನ ದೃಢವಾದ ಹೆಜ್ಜೆಯನ್ನು ಇರಿಸಿದ್ದಾಳೆ. ಹಾಗೆಯೇ ರಾಜಕೀಯದಲ್ಲೂ ಕೂಡ ತನ್ನ ಪ್ರಗತಿಪರ ಅಡಿಯನ್ನಿರಿಸಿ ಮಹತ್ತರ ಪಾತ್ರವನ್ನು ವಹಿಸಿದ್ದಾಳೆ.

ಹಿಂದೆ ಬದುಕಿನ ಎಲ್ಲಾ ರಂಗಗಳಲ್ಲೂ ಪುರುಷರಿಗೆ ಪ್ರಧಾನವಾದ ಪಾತ್ರ ಮಹಿಳೆಯರಿಗೆ ಯಾವ ರಂಗದಲ್ಲೂ ಪ್ರವೇಶ ನಿಷಿದ್ಧ. ಅವಳ ಬದುಕು ಕೇವಲ ನಾಲ್ಕು ಗೋಡೆಗಳಿಗೆ ಸೀಮಿತವಾಗಿತ್ತು. ಯಾವುದೇ ವಿಷಯಕ್ಕೂ ಹೊಸ್ತಿಲು ದಾಟದ ಮಹಿಳೆ, ಕೇವಲ ಮಕ್ಕಳು ಹೆರುವ ಯಂತ್ರವಾಗಿರಬೇಕಿತ್ತು ಎಂಬುದು ಎಲ್ಲರಿಗೂ ತಿಳಿದ ವಿಷಯ.

ನಮ್ಮ ಭಾರತದ ಇತಿಹಾಸವನ್ನು ಗಮನಿಸಿದಾಗ ಬಹಳ ಹಿಂದೆ ಮಹಿಳೆಗೆ ರಾಜಕೀಯದಲ್ಲಿ ಪ್ರಮುಖ ಪಾತ್ರವಿತ್ತು ಎಂಬುದನ್ನು ನೋಡಬಹುದು. ರಾಜಕುಮಾರನಿಗಿದ್ದಷ್ಟೇ ವಿದ್ಯೆ ರಾಜಕುಮಾರಿಗೂ ಇರುತ್ತಿತ್ತು. ಮಹಾರಾಣಿ , ರಾಜನಿಗೆ ಎಲ್ಲಾ ರಂಗಗಳಲ್ಲೂ ಸಲಹೆ ಸೂಚನೆ ನೀಡುತ್ತಿದ್ದಳು ರಾಜನ ಮರಣಾ ನಂತರ ರಾಜ್ಯಭಾರವನ್ನು ಸಮರ್ಥವಾಗಿ ನಿರ್ವಹಿಸಿದ ಎಷ್ಟೋ ಉದಾಹರಣೆಗಳು ನಮ್ಮಲ್ಲಿವೆ. ಕಿತ್ತೂರು ರಾಣಿ ಚೆನ್ನಮ್ಮ, ಬೆಳವಡಿ ಮಲ್ಲಮ್ಮ, ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಇನ್ನಿತರರು.

ಆದರೆ ಆಗಲೂ ಸಹ ಪುರುಷ ವರ್ಗದವರಿಗೆ ಸ್ತ್ರೀಯ ಏಳಿಗೆ ಬಗ್ಗೆ ಸಹಿಸಲಾಗುತ್ತಿರಲಿಲ್ಲ. ಮಂತ್ರಿ, ಇನ್ನಿತರ ಕುಟಿಲರು ಸೇರಿಕೊಂಡು ರಾಜ್ಯದ ಹಕ್ಕನ್ನು ಕಸಿಯುವ ತಂತ್ರ ಹೂಡುತ್ತಿದ್ದರು. ಅವಳು ಹೆಣ್ಣು, ಅವಳ ಕೈಲೇನಾಗುತ್ತದೆ ಎಂಬ ತಾತ್ಸಾರ!" ತೊಟ್ಟಿಲು ತೂಗುವ ಕೈ ದೇಶವನ್ನು ಸಮರ್ಥವಾಗಿ ಆಳಬಲ್ಲದು ಎಂಬುದನ್ನು ನಮ್ಮ ಮಹಿಳೆಯರು ಸಮರ್ಥಿಸಿದ್ದಾರೆ.

ಹಿಂದೆ ರಾಜ ಪ್ರಭುತ್ವ ಹೋದ ನಂತರ ಮಹಿಳೆಗೆ ಮತದಾನದ ಹಕ್ಕು ಕೂಡ ಇರಲಿಲ್ಲ, ಎಂಬುದು ಯಾರಿಗೂ ತಿಳಿದಿಲ್ಲ. 1917 ರಲ್ಲಿ Secretary of State for India ಆಗಿದ್ದ ಶ್ರೀ ಇ. ಎಸ್. ಮಾಂಟಿಗ್ಯೂ ಭಾರತಕ್ಕೆ ಭೇಟಿಯಿತ್ತಾಗ ಭಾರತೀಯ ಮಹಿಳೆಯರ ಪ್ರಥಮ ನಿಯೋಗ ಹೋಗಿ ಅವರನ್ನು ಕಂಡಿತು. ಶ್ರೀಮತಿ ಸರೋಜಿನಿ ನಾಯ್ಡು ಅದರ ನಾಯಕಿ ಆಗಿದ್ದರು. "ರಾಜಕೀಯ ಹಕ್ಕುಗಳು ಮಹಿಳೆಯರಿಗೂ ಬೇಕು ಹಾಗೂ ಸಧ್ಯದ ರಾಜಕೀಯ ವಿದ್ಯಾಮಾನದಲ್ಲಿ ಮಹಿಳೆಯರ ಪಾತ್ರವು ನಿರ್ಮಾಣ ವಾಗಬೇಕು" ಎಂಬ ಬಯಕೆಯಿಂದ ಹೋರಾಟಕ್ಕಾಗಿ ರಚಿತವಾದ ನಿಯೋಗವಿದು. ಇದರ ಸ್ಥಾಪನೆಗೆ ಮಾರ್ಗರೇಟ್ ಕಸಿನ್ಸ್ ಕಾರಣ ಕರ್ತರು. ಇವರು ಕಾರ್ಯದರ್ಶಿ ಕೂಡ ಆಗಿದ್ದರು. ಮತದಾನದ ನಿಯಮ ತಯಾರಿಸುವಾಗ ಮಹಿಳೆಯರನ್ನು ಈ ದೇಶದ ಪ್ರಜೆಗಳೆಂದು ಗಣಿಸಬೇಕೆಂಬುದು ಈ ನಿಯೋಗದ ಕೋರಿಕೆ ಆಗಿತ್ತು.

1919 ರಲ್ಲಿ ಸೌತ್ ಬ್ಯುರೊ ಕಮಿಷನ್ ಮತದಾನದ ಪ್ರಶ್ನೆಯ ಕುರಿತು ಚರ್ಚೆಗೆ ಬಂದಾಗ ಶ್ರೀಮತಿ ಅನಿಬೆಸೆಂಟ್ ಮತ್ತು ಶ್ರೀಮತಿ ಸರೋಜಿನಿ ನಾಯ್ಡು ಈ ಕಮಿಷನ್ ಎದುರು ಮಹಿಳೆಯ ಮತದಾನವನ್ನು ಪರಿಗಣಿಸಬೇಕೆಂದು ಒತ್ತಾಯಿಸಿದಾಗ ಕಮಿಷನ್ ಭಾರತೀಯ ಮಹಿಳೆಯರು ಸಾಮಾಜಿಕವಾಗಿ ದುರ್ಬಲರೆಂದು ತಳ್ಳಿ ಹಾಕಿತು. ಎಂತಹ ಹಾಸ್ಯಸ್ಪದ! ಹೀಗೆ ಹೇಳಿದ 4 ವರ್ಷಗಳಲ್ಲಿ ಇದೇ ದುರ್ಬಲ ಮಹಿಳೆಗೆ ತಾಯ್ನಾಡಿನ ಶಾಸಕಾಂಗಗಳು ಮತದಾನದ ಹಕ್ಕನ್ನು ನೀಡಿದವು.

1921 ರಲ್ಲಿ ಮದ್ರಾಸ್ ಲೆಜಿಸ್ಲೇಟರ್ ಕೌನ್ಸಲ್ ಪ್ರಥಮತ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿತು. ಮೊತ್ತ ಮೊದಲು ಮತದಾನದ ಬೇಡಿಕೆ ಸೊಲ್ಲು ಎತ್ತಿದ ಮಹಿಳೆ ಶ್ರೀಮತಿ ಮಾರ್ಗರೇಟ್ ಕಸಿನ್ಸ್. ಇದಕ್ಕಾಗಿ ಸತತವಾಗಿ 8 ವರ್ಷಗಳ ದೀರ್ಘಕಾಲ ಹೋರಾಟ ಮಾಡಿದ್ದಾರೆ.

ಹೀಗೆ ನಮಗೆ ಮತದಾನದ ಹಕ್ಕು ಸಿಕ್ಕಿ ರಾಜಕೀಯ ಪ್ರವೇಶಿಸಲು ಸಾಧ್ಯವಾಯಿತು. ಈ ಶತಮಾನದ ಎರಡನೆಯ ದಶಕದಿಂದ ಮಹಿಳೆಯರು ಸ್ವಂತ ಆಲೋಚನೆ ಶಕ್ತಿಯಿಂದ ತಮ್ಮದೇ ನಾಯಕತ್ವದಲ್ಲಿ ಮುನ್ನಡೆದರು.

ಆದರೆ ಇಂದು ರಾಜಕೀಯದಲ್ಲಿ ಆಸಕ್ತಿ ಇರುವ ಮಹಿಳೆ ತನ್ನ ಪಕ್ಷಕ್ಕೆ ಮಹಿಳೆಯರ ಮತ ದೊರಕಿಸಿಕೊಡುವಲ್ಲಿ ಮನಸ್ಸನ್ನು ಕೇಂದ್ರಿಕರಿಸಬೇಕಾಗಿದೆ. ಅವಳ ದೊಡ್ಡ ಉದ್ದೇಶವೆಂದರೆ ತನ್ನ ಪಕ್ಷದ ಗೆಲುವು. ಇಷ್ಟಕ್ಕೆ ಮಹಿಳೆಯರ ಪಾತ್ರ ಸೀಮಿತವಾಗಿದೆ. ಇವೆಲ್ಲವನ್ನು ಮೆಟ್ಟಿನಿಂತು ಮೇಲೇರಲು ಪ್ರಯತ್ನಿಸುವ ಮಹಿಳೆಯರನ್ನು ಪುರುಷ ರಾಜಕಾರಣಿಗಳು ಕೆಳಗಿಳಿಸಲು ಯತ್ನಿಸುತ್ತಾರೆ. ಒಟ್ಟಿನಲ್ಲಿ ರಾಜಕೀಯ ಪಗಡೆಯಾಟದಲ್ಲಿ ಸ್ತ್ರೀಯೊಂದು ಕಾಯಿಯಾಗಿ ಬಳಸಲ್ಪಡುತ್ತಿದ್ದಾಳೆ.

ಇಂದು ನಮ್ಮ ರಾಜಕೀಯದಲ್ಲಿ ಮಹಿಳೆಯರ ಪಾತ್ರ ನೋಡಿದರೆ ವಿಷಾದವೆನಿಸುತ್ತದೆ. ಸುಭದ್ರ ಸರಕಾರವನ್ನು ಅಲ್ಲಾಡಿಸಿ ಕೆಳಗುರುಳಿಸಲು ಆಕೆ ಸಮರ್ಥಳು. ಅವಸಾನಗೊಳ್ಳುತ್ತಿರುವ ಪಕ್ಷಕ್ಕೆ ಬೆನ್ನೆಲುಬಾಗಿ ಆಕೆ ಬೇಕು.

ಇತ್ತೀಚಿನ ರಾಜಕೀಯ ವಿದ್ಯಾಮಾನದಲ್ಲಿ ಗಮನ ಸೆಳೆವಂತಹ ಹಲವಾರು ಮಹಿಳೆಯರನ್ನು ಕಾಣಬಹುದು. ರಾಜಕೀಯದಲ್ಲಿ ಬಲವಾದ ಛಾಪನ್ನೊತ್ತಿದ್ದಾರೆ. ಒಟ್ಟಿನಲ್ಲಿ ಮಹಿಳೆ ರಾಜಕೀಯದಲ್ಲಿಂದು ಮಹತ್ತರ ಪಾತ್ರ ವನ್ನು ವಹಿಸಿದ್ದಾಳೆ. ಮಡಿಕೇರಿ ನಗರ ಪ್ರಥಮ ಬಾರಿಗೆ ಮಹಿಳಾ ಅಧ್ಯಕ್ಷರನ್ನು ಹೊಂದಿದೆ. ಇದು ನಿಜವಾಗಿ ಮಹಿಳೆಯ ಅಭಿವೃದ್ಧಿ ಹೊಂದುವ ಎಲ್ಲಾ ಮುನ್ಸೂಚನೆಯಾಗಿದೆ.

ಮೂಡಗದ್ದೆ ಕೃಪಾ
ತಿತಿಮತಿ

ನುಡಿದರೆ ಮುತ್ತಿನ ಹಾರದಂತಿರಬೇಕು.

'ಮಾತೇ ಮುತ್ತು, ಮಾತೇ ಮೃತ್ಯು' ಎಂಬ ನುಡಿಯುಂಟು. ಈ ಉಕ್ತಿ ಮಾತನಾಡುವಾಗ ನಮ್ಮ ಮೈಯೆಲ್ಲ ಕಣ್ಣಾಗಿರಬೇಕು ಎಂದು ನಮ್ಮನ್ನು ಮಾರ್ಮಿಕವಾಗಿ ಎಚ್ಚರಿಸುತ್ತದೆ. ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಎಂಬ ನುಡಿಯಲ್ಲೂ ಇದೇ ಧ್ವನಿಯನ್ನು ನಾವು ಗುರುತಿಸಬಹುದಾಗಿದೆ. ಶರಣರು 'ನುಡಿದರೆ ಮುತ್ತಿನ ಹಾರದಂತಿರಬೇಕು, ಮಾಣಿಕ್ಯದ ದೀಪ್ತಿಯಂತಿರಬೇಕು..' ಎಂದು ಮಾತು ಹೇಗಿದ್ದರೆ ಚೆಂದವೆಂದು ಸಾರಿದ್ದಾರೆ. ನುಡಿಯೊಳಗಾಡಿ ನಡೆದುಕೊಳ್ಳದಿದ್ದರೆ ಕೂಡಲ ಸಂಗಮದೇವನು ಒಲಿಯುವುದಾದರೂ ಹೇಗೆಂದು ಕೆಣಕಿದ್ದಾರೆ, ಈ ಸಂಸ್ಕೃತೋಕ್ತಿ ಯಾರಿಗೆ ತಾನೆ ಅಪರಿಚಿತ?'

'ಸತ್ಯಂ ಬ್ರೂಯಾತ್
ಪ್ರಿಯಂ ಬ್ರೂಯಾತ್
ನಬ್ರೂಯಾತ್ ಸತ್ಯಮಪ್ರಿಯಂ,'

ಅಂದರೆ ಸತ್ಯವನ್ನು ಹೇಳಬೇಕು, ಪ್ರಿಯವಾದುದನ್ನು ಹೇಳಬೇಕು, ಅಪ್ರಿಯವಾದ ಸತ್ಯ ಹೇಳಲ್ಪಡತಕ್ಕದ್ದಲ್ಲ, ಇತರರ ಮನಸ್ಸನ್ನು ನೋಯಿಸುವಂಥ ನುಡಿ ಅಮಾನವೀಯವಾದೀತು. ಹಾಗೊಂದು ವೇಳೆ ವಾಸ್ತವವನ್ನು ಹೇಳಲೇಬೇಕಾದರೆ ಪ್ರಿಯವಾದ ಮಾತಿನಲ್ಲಿ ಅದನ್ನು ಅಭಿವ್ಯಕ್ತಿಸುವ ಮಾರ್ಗವಿದ್ದೇ ಇರುತ್ತದೆ. ಈ ದಿಸೆಯಲ್ಲಿ ಒಂದು ಪ್ರಾಚೀನ ಕಥೆ ಸ್ವಾರಸ್ಯಕರವಾಗಿದೆ. ಅದೊಂದು ಕಾಡು, ಕಾಡಿನಲ್ಲಿ ಮಹಾ ವೃಕ್ಷದ ಕೆಳಗೆ ಋಷಿಯೊಬ್ಬ ತಪಸ್ಸಿಗೆ ಕೂತಿದ್ದ. ಅಚಾನಕವಾಗಿ ಎಲ್ಲಿಂದಲೋ ಇಬ್ಬರು ಕಳ್ಳರು ಬರುತ್ತಾರೆ. ಆ ಪೈಕಿ ಒಬ್ಬ ಮಾತ್ರ ಋಷಿಯ ಹಿತನುಡಿ ಆಲಿಸಿ ತಾನು ಆ ದಿನ ದರೋಡೆ ಮಾಡಿದ್ದ ಒಡವೆಗಳನ್ನು ಅದರ ಒಡೆಯನಿಗೆ ಹಿಂದಿರುಗಿಸಲು ಒಪ್ಪುತ್ತಾನೆ. ಆದರೆ ಇನ್ನೊಬ್ಬ ಹಾಗೆ ಮಾಡುವುದಿರಲಿ, ಋಷಿಯ ಬಳಿ ಇದ್ದ ಸಣ್ಣ ಪುಟ್ಟವಸ್ತ್ರ ಕಮಂಡಲ, ರುದ್ರಾಕ್ಷಿಹಾರ ವಗೈರೆಯನ್ನು ದೋಚಿ ಪರಾರಿಯಾಗುತ್ತಾನೆ. ತುಸು ಸಮಯದ ನಂತರ ಆ ಪ್ರಾಂತ್ಯದ ಅರಸ ಅಲ್ಲಿಗೆ ಕುದುರೆಯೇರಿ ಬರುತ್ತಾರೆ.

'ಋಷಿವರ್ಯರೇ, ಇಬ್ಬರು ಕಳ್ಳರು ಈ ಕಡೆ ಬಂದ ಹಾಗಿತ್ತು, ಅವರು ಎಲ್ಲಿ ಹೋದರು ಹೇಳಿ, ಹಿಡಿದು ತಕ್ಕ ಶಿಕ್ಷೆ ನೀಡಿಯೇ ತೀರುತ್ತೇನೆ' ಎಂದು ರಾಜ ಅಭಯ ಹೇಳುತ್ತಾನೆ. ಋಷಿ ಕ್ಷಣ ಆಲೋಚಿಸಿ ಹೇಳಿದ್ದಾದರೂ ಏನು ಗೊತ್ತೆ? 'ಆ ಇಬ್ಬರಲ್ಲಿ ಒಬ್ಬ ಕಳ್ಳನಲ್ಲ.... ನನಗೆ ಅವನಿಂದ ಏನೂ ಅಪಕಾರವಾಗಲಿಲ್ಲ'

ಪ್ರಿಯವಾದುದನ್ನು ಹೇಳಿ, ಅಪ್ರಿಯವಾದುದನ್ನು ನಿರ್ಲಕ್ಷಿಸುವುದೆಂದರೆ ಇದು.

ಮಾತು ಬಲ್ಲವನಿಗೆ ಜಗಳವಿಲ್ಲವಂತೆ, ದಿನೇ ದಿನೇ ನಮ್ಮ ಬದುಕು ಜಂಜಡವಾಗುತ್ತಿದೆ. ಅತಿ ವೇಗದ ಜೀವನದ ಶೈಲಿ ಯಿಂದಾಗಿ ನಮಗಿಂದು ನೆಮ್ಮದಿ ದೂರವಾಗುತ್ತಿದೆ. ಎಲ್ಲಕ್ಕೂ ನಮಗೆ ಅವಸರ. ಹೆರಿಗೆಯಿರಲಿ, ಮೃತ ಶರೀರದ ಅಂತ್ಯ ಸಂಸ್ಕಾರವಿರಲಿ ಎಲ್ಲವೂ ಶೀಘ್ರವಾಗಿ ಆಗಬೇಕೆನ್ನುವುದೇ ಧೋರಣೆ! ಈಗ ಹಾಸ್ಯ ಪ್ರವೃತ್ತಿ ಎಂದರೆ ಕೇವಲ ನಿಘಂಟಿನಲ್ಲಷ್ಟೇ ಕಾಣಬೇಕಾಗಿದೆಯೆಂದರೆ ಅತಿಶಯೋಕ್ತಿಯೇನಲ್ಲ. ಎಂಥ ಕಠಿಣ ಪ್ರಸಂಗವಿರಲಿ ಕಿಂಚಿತ್ತಾದರೂ ನಿರ್ಮಲ ಹಾಸ್ಯ ಪ್ರಜ್ಞೆಯಿದ್ದರೆ ಅದನ್ನು ನಿಭಾಯಿಸಬಹುದೆನ್ನುವ ಸೂಕ್ಷ್ಮಮತಿ ನಮ್ಮದಾಗಬೇಕಿದೆ. ನಿದರ್ಶನವೊಂದು ಹೀಗಿದೆ. ಸೇತುವೆ ಮೇಲೆ ಬಹು ಕಡಿದಾದ ದಾರಿ. ಆ ಕಡೆಯಿಂದ ಲಾರಿ ಬಂತು. ಈ ಕಡೆಯಿಂದ ಬಸ್ ಬಂತು, ಸೇತುವೆಯ ಮಧ್ಯೆ ಇಬ್ಬರೂ ಎದಿರುಬದಿರಾಗಿ ನಿಂತರು! ನೀನೇ ಹಿಂದೆ ಹೋಗಬಹುದಲ್ಲ ಎಂದು ಲಾರಿಯವನು, ಆಗದು ನೀನೇ ವಾಪಸ್ಸು ಹೋಗು ಎಂದು ಬಸ್ಸಿನವನು. ಪೈಪೋಟಿಯೋ ಪೈಪೋಟಿ. ಹೀಗೆ ಹತ್ತು ನಿಮಿಷ ಸಾಗಿತು. ಉಳಿದ ವಾಹನಗಳೂ ದಿಕ್ಕು ತೋಚದೆ ಆಚೀಚೆ ನಿಲ್ಲುವಂತಾಯಿತು ಲಾರಿಯವ ಆರಾಮವಾಗಿ ದಿನಪತ್ರಿಕೆ ಪುಟ ತಿರುವಲು ಸಿದ್ಧನಾದ. ಬಸ್ಸಿನವ ಇನ್ನೇನು ಹೊಡೆದಾಟಕ್ಕೆ ಸಿದ್ಧವಾಗುತ್ತಾನೆಂದೇ ಎಲ್ಲರ ನಿರೀಕ್ಷೆಯಾಗಿತ್ತು. ಆದರೆ ಪ್ರಸಂಗ ಮಹತ್ತರವೂ ಅನಿರೀಕ್ಷಿತವೂ ಆದ ತಿರುವನ್ನು ಪಡೆಯಿತು. ಬಸ್ಸಿನವ ಹೇಳಿದ್ದಾದರೂ ಏನೆಂದು ಕೊಂಡಿರಿ?

'ಲಾರಿ ಡ್ರೈವರ್ ಸಾಹೇಬರೆ, ದಯವಿಟ್ಟು ನೀವು ಆ ಪತ್ರಿಕೆ ಓದಿದ ಮೇಲೆ ನನಗೆ ಕೊಡಿ ಓದಲಿಕ್ಕೆ...' ಲಾರಿಯವ ನಸುನಕ್ಕು ಹಿಂದೆ ಸರಿದು ಬಸ್ಸು, ಹಾದು ಹೋಗಲು ಅನುಕೂಲ ಮಾಡಿಕೊಟ್ಟನೆಂದು ಬೇರೆ ಹೇಳಬೇಕಿಲ್ಲ. ಮಾತು ಹಿತವೂ ಮನೋಹರವೂ ಆಗಿರಬೇಕೆಂದು ಮಹಾ ಕವಿ ಭಾರವಿ ಹೇಳಿದ್ದಾನೆ. ನವಿರಾದ ಹಾಸ್ಯ ಮಾತಿನಲ್ಲಿ ಬೆರೆತಿದ್ದರೆ ಅದು ಜೀವ ಕಳೆಯಿಂದ ನಳನಳಿಸುತ್ತದೆ. ಆದರೆ ಈ ಹಾಸ್ಯ ಗಂಭೀರವಾಗಿರಬೇಕು. ಪರರನ್ನು ನೋಯಿಸಿ ನಾವು ನಗಬೇಕಾದ ಅಗತ್ಯವೇನೂ ಇಲ್ಲ ಅಲ್ಲವೆ?

ಒಮ್ಮೆ ಅಮೆರಿಕದ ಅಧ್ಯಕ್ಷರಾಗಿದ್ದ ಅಬ್ರಹಾಮ ಲಿಂಕನ್‌ರನ್ನು ಅವರ ಆಪ್ತರೊಬ್ಬರು ಕೇಳಿದರಂತೆ.

'ಲಿಂಕನ್‌ರವರೆ, ನಿಮ್ಮ ಪ್ರತಿಮೆಯೊಂದನ್ನು ಏಕೆ ಇನ್ನೂ ಸ್ಥಾಪಿಸಲಾಗಿಲ್ಲ... ಮಹಾತ್ಮರಾದವರೆಲ್ಲರ ಪ್ರತಿಮೆಗಳೆಲ್ಲ ಇವೆಯಲ್ಲ?

ಅದಕ್ಕೆ ಲಿಂಕನ್ ತೀಕ್ಷ್ಣವಾಗಿ ಅಷ್ಟೇ ಮಾರ್ಮಿಕವಾಗಿ ಪ್ರತಿಕ್ರಯಿಸಿದ್ದು ಹೀಗೆ

'ನನಗಂತು ನೀವು ಹೀಗೆ ಪ್ರಶ್ನಿಸುತ್ತಿರುವುದೇ ಹಿತವೆನ್ನಿಸಿದೆ. ಏಕೆಂದರೆ ನಾಳೆ ಪ್ರತಿಮೆಯನ್ನು ಸ್ಥಾಪಿಸಿದ ನಂತರ ಯಾರಾದರೊಬ್ಬರು ನಿನ್ನ ಪ್ರತಿಮೆಯನ್ನು ಏಕೆ ಸ್ಥಾಪಿಸಿದ್ದಾರೆ ಎಂದು ಕೇಳಬಹುದಲ್ಲ!!'

ಬಲ್ಲವರ ನುಡಿಯೇ ಹಾಗೆ ಬೆಲ್ಲದಂತೆ ಸಿಹಿಯಾಗಿರುತ್ತದೆ. ಸರ್ವಜ್ಞನೇ ಹೇಳಿದಂತೆ ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ.

ಬಿಂಡಿಗನವಿಲೆ ಭಗವಾನ್

ವರ್ಷದಲ್ಲಿ ಒಂದೊಂದು ಸರ್ತಿ MO,/ D.D.,/ CASHಮೂಲಕ ಹಣ ಕಳ್ಸಿ ಸಂಗಾತಿ ಚಂದದಾರರು ಮರೆಯದಿರಿ.

ದೇವರ ಕಾಡು ತಕ್ಕ ಮುಖ್ಯಸ್ಥರ ಮಹಾ ಮಂಡಲಿ ರಚನೆ

ಕೊಡಗಿನ ದೇವರ ಕಾಡುಗಳ ಪಾವಿತ್ರ್ಯತೆ ಹಾಗೂ ಪ್ರಶಾಂತತೆಯನ್ನು ಕಾಪಾಡುವ ನಿಟ್ಟಿನಲ್ಲಿ ಪೊನ್ನಂಪೇಟೆ ಅರಣ್ಯ ಮಹಾ ವಿದ್ಯಾಲಯದ ಆವರಣದಲ್ಲಿ ಇತ್ತೀಚೆಗೆ ಕೊಡಗು ದೇವರ ಕಾಡು ತಕ್ಕ ಮುಖ್ಯಸ್ಥರ ಮಹಾ ಮಂಡಳಿ ರಚನೆಯೊಂದಿಗೆ ಕಾನೂನು ಬದ್ಧ ಹಾಗೂ ಅಧಿಕೃತ ಮುದ್ರೆಯನ್ನು ಒತ್ತಲಾಯಿತು. ಕೊಡಗಿನಲ್ಲಿ ಒಟ್ಟು 1214 ದೇವರ ಕಾಡುಗಳನ್ನು ಗುರುತಿಸಲಾಗಿದ್ದು, ಸುಮಾರು 2550 ಹೆಕ್ಟೇರ್ ವಿಸ್ತೀರ್ಣ ವಿರುವದಾಗಿ ಅರಣ್ಯ ಇಲಾಖೆ ಅಂದಾಜಿಸಿದೆ. ದೇವರ ಕಾಡು ದೇವಸ್ಥಾನ ಸಮಿತಿಗಳು ಅಸ್ತಿತ್ವದಲ್ಲಿದ್ದರೂ ಅವುಗಳು ನೋಂದಾಯಿತ ಸಂಸ್ಥೆಯಾಗಿರದೆ ಕೇವಲ ಸಾಂಪ್ರದಾಯಿಕ ಸಮಿತಿಗಳಾಗಿದ್ದವು. ಈ ಹಿನ್ನಲೆಯಲ್ಲಿ ದೇವರ ಕಾಡು ಅಭಿವೃದ್ಧಿ ಅಸಾಧ್ಯವಾಗಿದ್ದು, ಶತ ಶತಮಾನಗಳಿಂದಲೂ ಕಾನೂನು ತೊಡಕುಗಳಿಗೆ ಸಿಲುಕಿತು.

ಇಂದು ಕೊಡಗಿನ ಊರುಡುವೆ, ಅಂಬಲ, ಮಂದ್ ಹಾಗೂ ದೇವರಕಾಡು ದೇವಸ್ಥಾನ ಸಮಿತಿ ಪದಾಧಿಕಾರಿಗಳ ಸಮ್ಮುಖದಲ್ಲಿ ರಾಜ್ಯ ಮಜರಾಯಿ ಖಾತೆ ಸಚಿವೆ ಸುಮಾವಸಂತ್ ಅವರು ಕೊಡಗು ಜಿಲ್ಲೆಯ ದೇವರ ಕಾಡು ತಕ್ಕ ಮುಖ್ಯಸ್ಥರ ಮಹಾ ಮಂಡಳಿಯ ಏಳು ಕಾರ್ಯಕಾರಿ ಸದಸ್ಯರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರಲ್ಲದೆ, ಐತಿಹಾಸಿಕ ಜಂಟಿ ಅರಣ್ಯ ಕಾರ್ಯಯೋಜನೆ ಮೂಲಕ ದೇವರ ಕಾಡು ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ನೂತನ ಪದ್ಧತಿ ಅನುಷ್ಠಾನಕ್ಕೆ ಚಾಲನೆ ನೀಡಿದ್ದಾರೆ.

ಕೊಡವ ಸಂಪ್ರದಾಯಿಕ ಒಡಿ ಕತ್ತಿಗೆ ಸಹಿ ಮಾಡಿದ ಸಚಿವೆ ಸುಮಾವಸಂತ್ ಅವರು, ಮಹಾ ಮಂಡಳಿಯ ಜಿಲ್ಲಾ ಘಟಕದ ಸ್ಥಾಪಕ ಅಧ್ಯಕ್ಷ ಕೊಡಗು ವೃತ್ತ ಅರಣ್ಯ ಸಂರಕ್ಷಣಾಧಿಕಾರಿ ಅನೂರ್‌ರೆಡ್ಡಿ, ಅವರಿಗೆ ನೀಡುವ ಮೂಲಕ ಶುಭ ಕೋರಿದರು. ಅನೂರ್ ರೆಡ್ಡಿ ಅವರೊಂದಿಗೆ ಮಡಿಕೇರಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಶೇಖರ್, ವೀರಾಜಪೇಟೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀವಾಸ್ತವ್, ಅರಣ್ಯ ಮಹಾ ವಿದ್ಯಾಲಯದ ಪ್ರತಿನಿಧಿ ಕಾರ್ಯದರ್ಶಿ ಡಾ. ಸಿ. ಜಿ. ಕುಶಾಲಪ್ಪ ಪವಿತ್ರ ಅರಣ್ಯಗಳ ಕಾರ್ಯ ಸಮುದಾಯದ ಕಾನೂನು ಸಲಹೆಗಾರ ಕೆ. ಜಿ. ಉತ್ತಪ್ಪ 'ದಿ ಹಿಂದೂ' ಪತ್ರಿಕಾ ಪ್ರತಿನಿಧಿ ಜೀ ವನ್ ಚಿಣ್ಣಪ್ಪ ಹಾಗೂ ಪರಿಸರ ಶಿಕ್ಷಣ ಸಂಸ್ಥೆ (ಸಿ. ಇ. ಇ.) ಯ ಬಾಬು ಅವರುಗಳು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಕೊಡಗಿನ ದೇವರ ಕಾಡುಗಳ ಸರ್ವೆ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಆಧುನಿಕ ಉಪಕರಣವನ್ನು (ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ) ಅರಣ್ಯ ಕಾಲೇಜಿನ ಮೂವರು ವಿದ್ಯಾರ್ಥಿಗಳಿಗೆ ಈ ಸಂದರ್ಭ ಡಾ. ಎನ್. ಸ್ವಾಮಿರಾವ್ ಹಸ್ತಾಂತರಿಸಿದ್ದಾರೆ. ದೇವರ ಕಾಡುಗಳ ಸಮಗ್ರ ಮಾಪನ ಕಾರ್ಯಕ್ಕಾಗಿ ಇಂತಹ ನಾಲ್ಕು ಜಿ. ಪಿ. ಎಸ್ ಉಪಕರಣಗಳಲ್ಲಿ ಎರಡು ಅರಣ್ಯ ಇಲಾಖೆ, ಒಂದು ಅರಣ್ಯ ಮಹಾ ವಿದ್ಯಾಲಯದಲ್ಲಿದ್ದು ಇದೀಗ ಅರಣ್ಯ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಒಂದು ಉಪಕರಣವನ್ನು ನೀಡಲಾಗಿದೆ.

ಕೊಡಗು ಜಿಲ್ಲೆಯ ದೇವರ ಕಾಡು ತಕ್ಕ ಮುಖ್ಯಸ್ಥರ ಮಹಾ ಮಂಡಳಿಯ ಅಧ್ಯಕ್ಷರಾಗಿ ಕೊಡಗು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಖಾಯಂ ಅಧಿಕಾರ ಹೊಂದಿರುತ್ತಾರೆ. ಅರಣ್ಯ ವಿಭಾಗಗಳ ಉಪ ಸಂರಕ್ಷಣಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಕೊಡಗಿನ ಮೂಲ ನಿವಾಸಿ ಪಂಗಡದ 18 ಮಹಿಳೆಯರು, 18 ಪುರುಷರು, ಪ್ರತಿ ಗ್ರಾಮದ ಓರ್ವ ದೇವರ ಕಾಡು ತಕ್ಕ ಮುಖ್ಯಸ್ಥ. ಮೂವರು ಅರಣ್ಯ ಮಹಾ ವಿದ್ಯಾಲಯದ ಪ್ರತಿನಿಧಿಗಳು, ವೀರಾಜಪೇಟೆ ಪರಿಸರ ಶಿಕ್ಷಣ ಸಂಸ್ಥೆಯ ಓರ್ವ ಸದಸ್ಯ, ಮೂರು ತಾಲೂಕಿನ ಸರ್ಕಾರಿಯೇತರ ಸಂಘದ ತಲಾ ಓರ್ವ ಸದಸ್ಯ ಮಹಾ ಮಂಡಳಿಯಲ್ಲಿರುತ್ತಾರೆ ಎಂದು ಪ್ರತಿನಿಧಿ ಕಾರ್ಯದರ್ಶಿ ಡಾ. ಸಿ. ಜಿ. ಕುಶಾಲಪ್ಪ, ಅರಣ್ಯ ಮಹಾ ವಿದ್ಯಾಲಯದ ನಿರ್ದೇಶಕ ಡಾ. ಎನ್. ಸ್ವಾಮಿರಾವ್ ಹಾಗೂ ಡಾ. ಪಾಟೀಲ್ ಅವರು ಪ್ರಸಕ್ತ ಮಹಾ ಮಂಡಳಿಯ ಸದಸ್ಯರಾಗಿದ್ದಾರೆ.

ಕೃಪೆ 22-12-2001, ಶಕ್ತಿ ಪತ್ರಿಕೆ

ವಿ. ಸೂ : ಇತ್ತೀಚೆಗೆ ಶಕ್ತಿಯಲ್ಲಿ ಮುದ್ರಣಗೊಂಡ ವಿಭಾಗ ಇದಾಗಿದೆ. ಕೊಡಗಿನ ಜನ ಸಂಖ್ಯೆಯಲ್ಲಿ ಗೌಡರು ಹೆಚ್ಚಿದ್ದಾರೆ ಅನ್ನುವ ಅಂಶವು ಇತ್ತೀಚೆಗೆ ಬೆಳಕಿಗೆ ಬಂದಿದೆ. ಹಾಗಿದ್ದು ದೇವರ ಕಾಡುವಿನಂತಹ ಮುಖ್ಯವಾದ ವಿಚಾರದಲ್ಲಿ ಯಾವುದೆ ಗೌಡ ಜಾತಿಗೆ ಸೇರಿದ ವ್ಯಕ್ತಿಗಳಿಗೆ ಸ್ಥಾನ ನೀಡಿಲ್ಲದಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಕೊಡಗಿನಲ್ಲಿರುವ ಕೊಡವರಂತೆ ಜಮ್ಮಾ, ಉಂಬಳಿ, ಭೂಮಿ, ಮಲೆ, ಮನೆ, ಮಠಗಳನ್ನು ಹೊಂದಿ, ಕೊಡವರಂತೆ ಕೋವಿ ಲೈಸನ್ಸ್ ಹೊಂದಿ, ಕೊಡವರಂತೆ ಭಾಷೆ. ಸಂಸ್ಕೃತಿ, ಆಚಾರ ವಿಚಾರಗಳಲ್ಲಿ ಮೆರೆದು ಕೊಡಗಿನ ಏಕತೆಗೆ ಐಕ್ಯತೆಗೆ ಸಾಕಷ್ಟು ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಿರುವ ಈ ಗೌಡರ ಬಗ್ಗೆ ಅದೇಕೊ ತಾತ್ಸಾರವೆಂದು ತಿಳಿಯುತ್ತಿಲ್ಲ. 18 ಮೂಲನಿವಾಸಿ ಪಂಗಡದವರಿಗಿಂತ ಗೌಡರ ಪಾಲೇನು ಕಮ್ಮಿ? ರಾಜರ ಕಾಲದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ಅವರ ಅವಕೃಪೆಗೆ ಪಾತ್ರರಾಗಿದ್ದು ತಪ್ಪೆ? ಯಾರು ಈ 18 ಮೂಲ ನಿವಾಸಿಗಳನ್ನು ಹೆಕ್ಕಿ ತೆಗೆದದ್ದು? ಅವರೇನು ಮೇಲ್ಲೋಟದಿಂದ ಬಂದವರೆ? ಗೌಡರು ಮನುಷ್ಯರಲ್ಲವೇ? ಅವರಿಗೂ ಸಹ ಸ್ಥಾನಮಾನ ಬೇಡವೇ?

ಗೌಡರು ಸಹ ಇದೆ ಭೂಮಿಯಲ್ಲಿ ಇದೆ ಭೂ ಖಂಡವಲ್ಲಿ ವಾಸಿಸಿದವರೆ ವಿನಹ ಪಾಶ್ಚಾತ್ಯ ಖಂಡದಿಂದ ಬಂದವರಲ್ಲ. ಕೊಡವರಾದರೋ ಇರಾನ್ ಇರಾಕ್ ಕಡೆಯಿಂದ ಬಂದವರೆಂಬುದು ಈ ಹಿಂದೆ ಮೈಸೂರು ಮಿತ್ರ ಪತ್ರಿಕೆಯಲ್ಲಿ ಬಂದಿದ್ದ ವಿಚಾರ ಓದಿರುವೆವು. ಗೌಡರಾದರೂ ವಿಜಯನಗರ ಸಾಮ್ರಾಜ್ಯದಿಂದ

20ನೇ ಪುಟಕ್ಕೆ

ಕಣ್ಣು

ನನ್ನವಳ ಕಣ್ಣೊ
ಹದ್ದಿನ ಕಣ್ಣು!
ಏಕೆಂದರೆ,
ತುಂಬಾ ಸೂಕ್ಷ್ಮ
ಸೀರೆ ಆಯುವುದರಲ್ಲಿ
ಅವಳ ಕಣ್ಣು!!

ಕಾನಡ್ಕ ಹನೀಶ್ ಅಪ್ಪಾಜಿ, ಮರಗೋಡು.

ಕಾಲ ಮಹಿಮೆ

ಅಂದದೂರ್ ಬೆಂಗಳೂರ್
ಚಂದದೂರ್ ಮೈಸೂರು।
ಸುಂದರ ನಾಡ್ ಮಲೆನಾಡ್
ಚೆಲುವ ನಾಡ್ ಕೊಡಗ್‌ನಾಡ್॥
ಊರಿಗೆ ಬಾತ್ ಬರಗಾಲ
ಜನಿಕೆ ಬಾತ್ ಕೇಡ್‌ಗಾಲ।
ಅಕ್ಕಿಗೆ ಬಾತ್ ರೇಷನ್ನ್
ಸಕ್ರೆಗೆ ಬಾತ್ ಕೂಪನ್ನ್॥
ಬಟ್ಟೆಗೆ ಬಾತ್ ನೈಲಾನ್
ಹೇಳದೆ ಹೋತ್ ಕಾಟನ್ನ್
ಅಳ್ತೆಗೆ ಬಾತ್ ಮೀಟರ್
ಸುರಿಯಕ್ಕ್ ಬಾತ್ ಲೀಟರ್॥
ಕುಟುಂಬ ಯೋಜ್ನೆ ಸುರಾತ್
ಗಂಡ ಹೆಂಣೆಗೆ ಜಗಳಾತ್।
ಸೇಂದಿ ಸರಾಯಿ ಹೆಚ್ಚಾತ್
ಚಾಪೆಲಿ ದುಡ್ಡು ಸೊರ್ರ್ಯೊತ್॥
ಕಾಸ್‌ನ ಬೆಲೆ ಇಳ್‌ದೊತ್
ನೋಟಿನ ಅಗಲ ಸಣ್ಣದಾತ್
ಸತ್ಯಕಾಲ ಒಡ್ಡ್ಯೊತ್
ಲಂಚವತಾರಗ ಹೆಚ್ಚಾತ್॥
ದೇವ ಮಂದಿರ ಬಿದ್ದ್ಯೋತ್
ಸಿನಿಮಾ ಟೆಂಟ್ ಹೆಚ್ಚ್ಯಾತ್
ಕಳ್ಳ ಕಾಕರ ಹೆದ್ರಿಕೆ ಸುರಾತ್
ಮರಗಳ್ಳತನ ಜಾಸ್ತ್ಯಾತ್
ಅಜ್ಜಿಗೆ ಬೇಕ್ ಸಿಂಗಾರ
ಕೊರಳ್‌ಗೆ ಬೇಕ್ ಬಂಗಾರ
ಹೆಂಣೆಗೆ ಕುಂಕುಮ ಬೇಡಾತ್
ಪೌಡರ್ ಲಿಪ್‌ಸ್ಟಿಕ್ ಬಂದಾತ್

ಸ್ವತಹಃ ಬರಹ : **ಬೊಳ್ಳುಮಾನಿ ಈರಪ್ಪ ರುಕ್ಮಿಣಿ**,
ನಂಜರಾಯಪಟ್ಟಣ

ನನ್ನ ತವರೂರು

ನೋಡಪ್ಪಾ ನನ್ನ ತವರೂರ
ಅಲ್ಲೇ ಅನತಿ ದೂರ ಬೆಟ್ಟಾದ ಮ್ಯಾಲೇರ
ಮೆಲ್ಲನಡಿ ಇಡು ಜೋಪಾನ ಇಳಿಜಾರ
ಕಾಲು ಜಾರಿದರ ಕಾವೇರಿ ತೀರ
॥ನೋಡಪ್ಪಾ॥

ಗುಡ್ಡಗಾಡಿನ ಊರ ತುಂಬೆಲ್ಲಾ ಪಚ್ಚೆ ಪೈರ
ದುಮ್ಮಿಕ್ಕಿ ಹರಿವ ನದಿ, ತೊರೆ ಝರಿಯ ಜೋರ
ಅಲ್ಲಲ್ಲೆ ಮರಗಳಲಿ ಕರಿಮೆಣಸಿನ ಬಳ್ಳಿಯ ಹಾರ
ಲೋಲಾಡುವ ಝುಮುಕಿ ಪಚ್ಚೆ ಮಣಿ ಶಿಂಗಾರ
॥ನೋಡಪ್ಪಾ॥

ಒಡಲೆಲ್ಲಾ ಸೊಂಪಿನ ಸೋಪಾನ
ವನವೆಲ್ಲಾ ಇಂಪಿನ ಇನಿಗಾನ
ಘಮ ಘಮಿಸುವ ಯಾಲಕ್ಕಿಯ ಸುವಾಸನಾ
ಕಂಪ ಬೀರುತಿಹ, ಗಂಧ ಚಂದನಾ
॥ನೋಡಪ್ಪಾ॥

ಬರುತಿಹಳು ನೋ ಡಾ ಸುಮ ಬಾಲೆ
ಮುಡಿತುಂಬ ಸಂಪಿಗೆ ಮಲ್ಲಿಗೆ ಮಾಲೆ
ನಿರಿಯ ಚಿಮ್ಮಿ ವಯ್ಯಾರ ನಡಿಗೆಯಲೇ
ಕುಡಿನೋಟ ಬೀರಿ ಮೃಗನಯನದಲೆ
॥ನೋಡಪ್ಪಾ॥

ನೀಡುವಳು ನೀರೆ ಕೈ ಕಾಲಿಗೆ ಬಿಸಿ ನೀರ
ಬಾಳೆ ಹಣ್ಣು ಕೊಡುವಳು ಅತ್ತಿಗೆ " ತಾರ"
ಎಲೆ ಅಡಿಕೆ ತರುವಳು ಅವ್ವ ಹರಿವಾಣದೊಳಗ
ನಗು ತುಂಬಿ ಕೈ ಮುಗಿದು ಕೂಡುವನು ಅಪ್ಪ ಐಮರಮೇಗ
॥ನೋಡಪ್ಪ॥

ಆತ್ಮೀಯತೆ ತೋರಿ ಅಣ್ಣಾ ಕರೆವರು ಊಟ ಮಾಡೇಳೀ
ಉಪಚಾರ ಮಾಡುವರು ಅಜ್ಜ ಸಂಕೋಚ ಮಾಡಬ್ಯಾಡ್ರಿ
ಎರಡು ಕಂಬಳಿ ಜೋಡಿಸಿ ಕೊಡುವರು ನೋಡ್ರೀ
ತಮ್ಮ ನುಡಿವನು ನಮ್ಮೂರಲಿ ಥಂಡಿ ಭಾಳ್ರೀ
॥ನೋಡಪ್ಪಾ॥

ನಸುಕು ಬೆಳಕಾಗ ಎದ್ದು ನೋಡಿದರ
ಕಣ್ಣಮುಂದ ಕೈಲಾಸ ಮಂಜು ಬೆಟ್ಟದ ಚಿತ್ತಾರ
ಮೂಕವಾಗುವುದು ಮನ ಮೂಡೀತು ಮಂದಾರ
ಸೋತು ಹೋಗುವೆ ನೀ ಸುಮಿಗೆ ಮನಸಾರ
॥ನೋ ಡಪ್ಪಾ॥

ಅರಿವಿಲ್ಲದೇ ನುಡಿವೆ ಭಾಳ ಚಂದ ನಿಮ್ಮೂರ
ಮತ್ತೆ ಬರುವೆನೆಂದುಸುರಿ ಹೊರಡುವೆ ಸೊಗಸುಗಾರ
ಅಜ್ಜಿ ನುಡಿವಳು ಬೆಳಗಾಂವ ಭಾಳ ದೂರ
ಸೂಟಿ ದೊರೆತರೆ ಮತ್ತೊಮ್ಮೆ ಇತ್ತ ಬಾರ
॥ನೋಡಪ್ಪಾ॥

– ಕೆ. ಪಿ. ಚೊಂದಮ್ಮ

ತಿಂಗಳುಣ್ಣದವನ ಮನೆಗೆ ತಂಗಳುಂಡವನು ಬಂದಂತೆ

ನಮ್ಮ ಸಂಘದ ಪ್ರವಾಸ ನಂದಿ ಬೆಟ್ಟಕೆ

ಸಂಘದ್ದೊಂದು ಪಯಣ ಅಂದ್ ನಂದಿ ಬೆಟ್ಟಕೆ
ಹತ್ತಿಕೊಂಡೊಕನ ಎಂತ ಬೇನೆ ಮೊಣ್ಕಾಲ್ ಸೊಂಟಕೆ
ಜನಂಗ ತುಂಬಿ ಬಸ್‌ಲಿ ಅಂದ್ ನಮ್ಮ ಪಯಣಲಿ
ಎರಡ್ ಬಸ್‌ನ ಜನಂಗ ಇದ್ದೊ ಒಂದೆ ಬಸ್ಸ್‌ಲಿ ||
ನಮ್ಮ ಬಸ್ಸದ್ ಹತ್ತಿಕೊಂಡೋತ್ ಒಂದೆ ಗೇರ್‌ಲಿ
ಒಳಗೆ ಜನಂಗ ಚಂಡಿ ಆಗಿದ್ದೊ ಬಂದ ಬೆಗರ್‌ಲಿ
ಪಧ್ಯ ಸುರ್ ಮಾಡ್ದೊಯಾರೊ ಸುವ್ವಲಾಲಿ
ಬಸ್ಸ್ ಹೋಕ್ತ ಇತ್ತ್ ಮುಂದೆ ಸುವ್ವಲಾಲಿ ||
ಮಕ್ಕಳ ಕೈಲಿ ಕಡ್ಲೆಕಾಯಿ ಸುವ್ವಲಾಲಿ
ಅಕ್ಕಂದ್ರ ಕೈಲಿ ಸೋಂತೆ ಕಾಯಿ ಸುವ್ವಲಾಲಿ
ಬ್ಯಾಗ್ ತುಂಬ ಬಜ್ಜಿ, ಬೋಂಡ ಸುವ್ವಲಾಲಿ
ಹೀಂಗೆ ನಾವು ಹಾಡ್ ಹೇಳ್ದೊ ಸುವ್ವಲಾಲಿ ||
ಹಂಗು ಹಿಂಗು ಹಾಡ್ತ ಹೋದೊ ನಂದಿಬೆಟ್ಟಕ್ಕೆ
ಇರಿಕೆ ಉಟ್ಟು, ಬಾರಿ ಅದ್ ಲ್ಯಾಕ್ ನೋಟಕೆ
ಸುತ್ತ ತೋಪು ಟಿಪ್ಪು ಡ್ರಾಪು ಬಾರಿ ಲ್ಯಾಕುಟ್ಟು
ಎಲ್ಲ ತಿರ್‌ಗಿ ಬೊಚ್ಚಿ ಹೋದರೆ ಕುಡೆಕೆ ನೀರುಟ್ಟು ||
ಉಂಬಕಲ್ಲಿ ನಾವ್ಗ ಎಲ್ಲ ತೆಕಂಡೆ ಹೋಗಿದ್ದೊ
ಬೀರ್ ಬ್ರಾಂಡಿ ವಿಸ್ಕಿ ಹಂಞ ಜನಂಗ ತಂದಿದ್ದೊ
ಉಂಬಕೆ ಕುದ್ದೊ ಜನಂಗ ಎಲ್ಲ ಒಂದ್ ಸಾಲ್‌ಲಿ
ಇಕ್ಕಿದೊ ನಾವ್ಗೊ ಜನಂಗ ಎಲ್ಲ ಉಂಡೊ ಪೊರ್ಲ್ನಲಿ ||
ಕೇಸರಿ ಬಾತ್ ಮೈಸೂರು ಪಾಕ್ ಸಿಂಹಿದ್ ಎರ್‌ಡೆನೆ
ಮತ್ತೆ ಫಲಾವ್ ಇನ್ನ್ ಕೆಲವು ಇತ್ತ್ ಲ್ಯಾಕ್‌ನೆ
ಉಂಬೊದು ನೋಡಿ ಮರಳಿ ಕುರೆಗ ನೋಡಿವೆ ಹಂಗ್‌ಸಿ
ಮಕ್ಕಳೆ ಬಾಳೆಣ್ಣ್ ಎತ್ತಿಕೊಂಡೋವೊ ಹೇಳ್ದೆ ಅಣ್‌ಗಿಸಿ ||
ಹೆಮ್ಮಣ ಕುರೆ ಒಂದ್ ನೋಡಿ ಮರನೆ ಆಡ್ಸಿದೆ
ಸಣ್ಣ ಕುರೆಗ ಹಕ್ಕಲೆ ಹೋದರೆ ಕಚ್ಚಿ ಓಡ್ಸಿದೆ
ಅಲ್ಲಿ ನೋಡ್ ಕುರೆಗೆ ಬಂದೊಳೊ ಅಕ್ಕನ ಹಕ್ಕಲೆ
ಕಲ್ಲ್ ತೆಗ್ದ್ ಹೊಡ್ದವಲ್ಲದೆ ತಿಂಬಕೆ ಕೊಡ್ದುಲೆ ||
ಹೆಂಗಾರ್ ಮಾಡಿ ಕುರೆಗಳೋಡ್ಸಿ ಉಂಡ್ ಆತ ಪ್ಪ
ಉಂಡ ಬರಲಿ ಎದ್ರಿಕೆ ಕಷ್ಟ ಹೇಳಿವೆ ಅಯ್ಯಪ
ಈಗ ಹಾಕಿದೆ ನೋಡಿ ನನ್ನ ಟೇಪರೆಕಾರ್ಡ್‌ನ
ಹೈದಂಗ ಗೂಡೆಗ ಒಟ್ಟಿಗೆ ಕೊಣ್ದೊ ಕೊಣ್ತ ಕೊಡ್ಗ್‌ನ ||
ಆಗ ಹಿಂಬತ್ ಆತ್ ಜನಂಗ ಹೊರ್‍ಟೊ ನಡ್ಕಂಡ್
ಮಕ್ಕಳ ಬುದ್ಧಿ ಬುಟ್ಟವೊ ಕುರೆಗೆ ಕಲ್ಲ್ ಹೊಡ್ಕಂಡ್
ಅಂತು ಇಂತು ಇಳ್ದ್ ಬಂದೊ ಬಸ್ಸ್‌ಗೆ ಮೆಲ್ಲಂಗೆ
ಕೆಮ್ಮರ್ಲಿ ಯಾರೊ ಫ್ಲೊಟೊನು ಹೊಡ್ದೊ ಬಸ್ಸ್‌ಗೆ ಹತ್ತಿದಾಂಗೆ, ||
ಉಂಡ ಬರಲಿ ಬಸ್‌ಲಿ ಕೆಲವು ನಿದ್ದೆ ಮಾಡಿದ್
ಅವ್ಕ ಗೊತ್ತ್‌ಲೆ ಬಸ್ಸ್‌ದ್ ಹೊಟ್ಟ್ ಬೆಂಗ್ಳೂರ್‌ಗೆ ಬಂದದ್
ಈಗ ಹೇಲಿದೆ ಬೇಗ ಇನ್ನೊಂದು ಟೂರ್ ಹೋಕುಂತ
ಇನ್ನೊಂದು ಟೂರ್ ಹೋದರೆ ನೀವು ಎಲ್ಲೊವು ಬರೊಕುಂತ ||

ರಚನೆ : ಹೊದ್ದೆಟ್ಟಿ ಭವಾನಿ ಶಂಕರ್, ಬೆಂಗಳೂರು

8ನೇ ಪುಟದಿಂದ

ಔಷಧಿಯಿಂದ ಪಾಪೆಯನ್ನು ಹಿಗ್ಗಿಸಿ ಲೇಸರ್ ಕಿರಣ ಹಾಯಿಸಲಾಗುತ್ತದೆ. ಇದನ್ನು ಯಾವ ಪ್ರಮಾಣದಲ್ಲಿ ಕೊಡಬೇಕು. ಎಲ್ಲಿ ಕೊಎಡಬೇಕು, ಎಂಬುದು ಬೆಳವಣಿಗೆಯ ಹಂತವನ್ನು ಅವಲಂಬಿಸಿದೆ. ಪ್ರಾರಂಭಿಕ ಹಂತದಲ್ಲಿ ಲೇಸರ್ ಬಳಕೆಯಿಂದ ಹೋದ ದೃಷ್ಟಿ ಬರುವ ಸಾಧ್ಯತೆ ಇದೆ. ಈ ಚಿಕಿತ್ಸೆಯ ಪೂರ್ಣ ಫಲ ಸಾಧಾರಣವಾಗಿ 6 ವಾರಗಳ ನಂತರ ತಿಳಿಯುತ್ತದೆ.

ಹಾನಿಕಾರಕ ಹಂತ ಹಾಗೂ ಕೆಲವು ಮ್ಯಾಯುಲೋಪಥಿ ಹಂತಗಳಲ್ಲಿ ಕಳೆದುಕೊಂಡ ದೃಷ್ಟಿ ವಾಪಸ್ ಬರುವ ಸಾಧ್ಯತೆ ಕಡಿಮೆ.

ಸಲಹೆ :

1. ಡಯಾಬಿಟೀಸ್ ಇದೆ ಎಂದು ಕಂಡು ಬಂದಾಗ ರೆಟಿನೋಪಥಿ ಬಗ್ಗೆ ಪರೀಕ್ಷೆ ಮಾಡಿಸಿಕೊಳ್ಳಿ.
2. ರೆಟಿನೋಪಥಿ ಸಾಧ್ಯತೆ ಡಯಾಬಿಟೀಸ್‌ನಿಂದ ಎಷ್ಟು ಕಾಲ ದಿಂದ ಬಳಸುತ್ತಿದ್ದಾರೆಂಬುದನ್ನು ಅವಲಂಬಿಸಿದೆ ಇನ್ಸುಲಿನ್ ಅವಲಂಬಿಸದವರಿಗೆ 5 ವರ್ಷಗಳ ನಂತರ ಬರಬಹುದು. ಉಳಿದವರಿಗೆ ಡಯಾಬಿಟೀಸ್ ಬಂದಾಗಲಿಂದಲೂ ಇರಬಹುದು.
3. ಪ್ರತಿ ವರ್ಷ ಕಣ್ಣು ಪರೀಕ್ಷೆ ಅವಶ್ಯ.
4. ಮ್ಯಾಕ್ಯುಲೋಪಥಿ ಇದ್ದವರು ಮೂತ್ರ ಪರೀಕ್ಷೆಯ ಫಲಿತಾಂಶ ಕಣ್ಣು ಚೆನ್ನಾಗಿರುವ ಬೇರೆಯವರಿಗೆ ತೋರಿಸಬೇಕು.
5. ರಕ್ತದಲ್ಲಿ ಸಕ್ಕರೆ ಅಂಶ ಕಟ್ಟುನಿಟ್ಟಾಗಿ ನಿಯಂತ್ರಿಸಿದಲ್ಲಿ ರೆಟಿನೋಪಥಿ ಬೇಗ ಬರುವುದನ್ನು ತಡೆಗಟ್ಟಬಹುದು.
6. ಡಯಾಬಿಟೀಸ್‌ನ್ನು ನಿಯಂತ್ರಿಸಿದಲ್ಲಿ ಕಣ್ಣಿನ ಪೊರೆ, ಮೋತಿ ಬಿಂದು, ಕಣ್ಣಿನ ನರ ದೌರ್ಬಲ್ಯವನ್ನು ಮುಂದೂಡಬಹುದು.

- ಡಾ. ಅನಂತ ರೇವಣಕರ, ಹುಬ್ಬಳ್ಳಿ

18ನೇ ಪುಟದಿಂದ

ಬಂದವರೆಂಬ ಅಂಶ ಈಗ ಬೆಳಕಿಗೆ ಬರುತ್ತಲಿದೆ.

ಪಾಲೂರು ನಂತಹ ಘಟನೆಗಳನ್ನು ಯೋಜಿತವಾಗಿ ಸಮರ್ಥವಾಗಿ ಎದುರಿಸಲು ಕೊಡಗರ ಮತ್ತು ಗೌಡರ ಸಮಾಗಮದ ಅವಶ್ಯಕತೆ ಸಾಕಷ್ಟು ಇರುವಂತಹ ಇಂತಹ ಸಂದರ್ಭದಲ್ಲಿ ಮೂಲ ನಿವಾಸಿಗಳು, ಮೂಲ ನಿವಾಸಿಗಳಲ್ಲದವರೆಂದು ನಮ್ಮನ್ನ ನಾವೇ ಕೆಳಕ್ಕೆ ತಳ್ಳಲ್ಪಡುತ್ತಿರುವುದು ನಿಜಕ್ಕೂ ಕೊಡಗಿನ ಜನತೆಗೆ ಶೋಭೆ ಅಲ್ಲವೆಂಬ ಅಂಶ ನನ್ನದಾಗಿದೆ. ಕೊಡಗಿನ ಚಿಂತನೆಗೆ ಕೊಡಗರು ಗೌಡರು ಒಂದೇ ವೇದಿಕೆಯಲ್ಲಿ ಕುಳಿತು ಚರ್ಚಿಸುವ ವಿಚಾರಗಳು ಸಾಕಷ್ಟು ಇದೆ. ಅಂತಹ ವೇದಿಕೆಯ ನಿರ್ಮಾಣ ಈಗ ಅನಿವಾರ್ಯವಾಗಿದೆ.

– ಪಟ್ಟಡ ಪ್ರಭಾಕರ, ಮೈಸೂರು.

ಕುದಿಯುವುದರೊಳಗೆ ಮೂರು ಸಾರಿ ಹಳಸಿದಂತೆ (ಅಭಿಪ್ರಾಯಗಳನ್ನು ಮೇಲಿಂದ ಮೇಲೆ ಬದಲಿಸುವ ಚಂಚಲ ಪ್ರವೃತ್ತಿ)

ಮನೆ ಮಾರಾಟಕ್ಕಿದೆ

ಮೈಸೂರಿನ ಹೆಬ್ಬಾಳು 2ನೇ ಹಂತದ ಮಾದೇ ಗೌಡ ಸರ್ಕಲ್‌ನ ಎದುರಿನ 30 × 25 ಜಾಗದಲ್ಲಿ 6¾ ಚದರದ, ಮೊಸಾಯಿಕ್ ಫ್ಲೋರಿಂಗ್, ಗ್ರಾನೈಟ್, ಪೋರ್ಟಿಕೊ, 2 ಮಲಗುವ ಕೋಣೆಯ ಬಾತ್‌ರೂಂ ಜೊತೆಯಿರುವ ಸೌಲಭ್ಯದ ಮೂಲೆ ನಿವೇಶನ ನವ ನಿರ್ಮಿತ ಮನೆಯೊಂದು ಮಾರಾಟಕ್ಕಿದೆ.

ಆಸಕ್ತರು ಸಂಪರ್ಕಿಸಿ. ☎ : 0821 - 513348, 516771

ನಿಧನ

ಮೂಲತಃ ಮರಗೋಡು ನಿವಾಸಿ ದಿ. ತೋಟಂಬೈಲು ಈರಪ್ಪನವರ ಮಗ ಇಂದ್ರಾಜು (ವಾಸು)ರವರು ದಿನಾಂಕ 28-12-2002ರಂದು ಮೈಸೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 43 ವರ್ಷ ಪ್ರಾಯವಾಗಿದ್ದು ಪತ್ನಿ ಹಾಗೂ ಇಬ್ಬರು ಮಕ್ಕಳಲ್ಲದೆ ಅಪಾರ ಬಂದುವರ್ಗವನ್ನು ಅಗಲಿದ್ದಾರೆ.

ಪೊರೆಯನ ಆನಂದ, ಮೈಸೂರು.

ಪ್ರಕಟಣೆ : ಕೊಡಗು ಸಂಗಾತಿ ಬರಹಗಾರರಲ್ಲಿ ವಿನಂತಿ

ಕೊಡಗು ಸಂಗಾತಿ, ಪಾಕ್ಷಿಕ ಪತ್ರಿಕೆಯು ಜನಾಂಗದ, ನಾಡಿನ ಅಭಿವೃದ್ಧಿ, ಏಕತೆ, ಐಕ್ಯತೆ ಬಯಸಿ ಬಂದು 9-4-2002ಕ್ಕೆ ಐದು ವರ್ಷ ಪೂರ್ಣಗೊಳ್ಳುವ ಈ ಸುಸಂದರ್ಭದಲ್ಲಿ ಸಂಗಾತಿಯ ಸುಮಾರು 150ಕ್ಕಿಂತಲೂ ಹೆಚ್ಚಿನ ಬರಹಗಾರರಿಂದ ಈ ಕೆಳಗಿನ ವಿಷಯಗಳಲ್ಲಿ ಲೇಖನಗಳನ್ನು ಆಮಂತ್ರಿಸುತ್ತಿದೆ.

1. ಐದು ವರ್ಷದ ಸಂಗಾತಿಯ ಸಾಧನೆ
2. ಜನಾಂಗಕ್ಕೆ ಪತ್ರಿಕ ರಂಗದ ಅವಶ್ಯಕತೆ
3. ಸಂಗಾತಿಯಿಂದ ಜನಾಂಗಕ್ಕೆ ನಾಡಿಗೆ ಆದ ಪ್ರಯೋಜನ
4. ಗೌಡ ಜನಾಂಗ ಎತ್ತ ಸಾಗುತ್ತಿದೆ
5. ಗೌಡ ಜನಾಂಗದಲ್ಲಿ ಸಾಕ್ಷರತೆ
6. ಗೌಡ ಜನಾಂಗದ ಸಂಘ, ಸಂಸ್ಥೆ, ಸಮಾಜಗಳ ಪಾತ್ರ
7. ಉತ್ತಮ ಗೌಡ ಸಂಘ, ಸಂಸ್ಥೆ, ಸಮಾಜ ಯಾವುದಿರಬಹುದು
8. ಗೌಡ ಜನಾಂಗ ಅಂದು - ಇಂದು - ಮುಂದೆ
9. ಗೌಡ ಜನಾಂಗಕ್ಕೆ ವಿಶಾಲ ತಳಹದಿಯ ನೆಲೆಯಿದೆಯೆ
10. ಗೌಡ ಫೇಡರೇಶನ್ನಿನ ಅವಶ್ಯಕತೆ ಎಷ್ಟು ಸಮಂಜಸ
11. ತಮಗೆ ಇಷ್ಟವಾದ ಯಾವುದೇ ಲೇಖನ

ತಮ್ಮ ಲೇಖನವು ದಿನಾಂಕ 28-2-2002ರ ಒಳಗೆ ಸಂಗಾತಿ ಕಛೇರಿಗೆತಲುಪಬೇಕು. ನಂತರ ಬಂದವುಗಳಿಗೆ ಪ್ರಾಶಸ್ತ್ಯ ನೀಡಲಾಗುವುದಿಲ್ಲ. ಉತ್ತಮವಾದವುಗಳನ್ನು ಪ್ರಕಟಿಸಲಾಗುವುದು.

ಸಂಪಾದಕಿ

ಪ್ರಕಟಣೆ : ಅರೆಭಾಷಾ ಬರಹಗಾರರ ವೇದಿಕೆ

ಸನ್ಮಾನ್ಯರೇ,

ನಮ್ಮ ಭಾಷೆ, ಮತ್ತು ಪುರಾತನ ಶ್ರೇಷ್ಠ ಸಂಸ್ಕೃತಿಯ ರಕ್ಷಣೆಗಾಗಿ ನಮಗೊಂದು ವೇದಿಕೆಯ ಅನಿವಾರ್ಯತೆ ಒದಗಿದೆ. ನಮ್ಮ ಸಂಸ್ಕೃತಿ, ಭಾಷೆ ಇತ್ಯಾದಿಗಳು ನಡೆದು ಬಂದ ಹಾದಿಯ ಬಗ್ಗೆ ದಾಖಲಿಸಲು ನಮಗೊಂದು "ಬರಹಗಾರರ ವೇದಿಕೆ" ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಮುಂದಿನ ಏಪ್ರಿಲ್, ಮೇ ತಿಂಗಳಲ್ಲಿ ವೇದಿಕೆಯೊಂದು ಅಸ್ತಿತ್ವಕ್ಕೆ ಬರಲಿದೆ. ಈ ಪ್ರಯುಕ್ತ ಸಂಗಾತಿ ಬರಹಗಾರರು ತಾವು ವೇದಿಕೆಗೆ ಸದಸ್ಯರಾಗಲು ಇಚ್ಛಿಸಿದಲ್ಲಿ 50ಪೈಸೆ ಪೋಸ್ಟ್ ಕಾರ್ಡ್‌ನಲ್ಲಿ ತಮ್ಮ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇತ್ಯಾದಿ ವಿವರವನ್ನು ಕೊಡಗು ಸಂಗಾತಿ ಕಛೇರಿಗೆ ದಿನಾಂಕ 31-3-2002ರ ಒಳಗೆ ಸಲ್ಲಿಸುವಂತೆ ನಮ್ಮ ವಿನಮ್ರ ವಿನಂತಿಯಾಗಿದೆ.

ಸಂಪಾದಕಿ

Reg. No. KA/SK/MYS-88 Registered : 10-01-96 TCI Kar. 09592

ಹಾರ್ದಿಕ ಮನಪೂರ್ವಕ ಶುಭಾಶಯಗಳು

ಕೊಡಕಂಡಿ ಕಾವೇರಮ್ಮ ಸೋಮಣ್ಣ



ಕೊಡಗು ಜಿಲ್ಲೆಯ ಮಡಿಕೇರಿ ಪುರಸಭೆಯ ಇತಿಹಾಸದಲ್ಲೆ ಪ್ರಪ್ರಥಮ ಬಾರಿಗೆ ಮಹಿಳಾ ಅಧ್ಯಕ್ಷೆಯಾಗಿ ದಿನಾಂಕ 2-1-2002ರಂದು ಆಯ್ಕೆ ಆಗಿ ಅಧಿಕಾರ ಗದ್ದುಗೆಗೇರಿದ ಕೊಡಕಂಡಿ ಕಾವೇರಮ್ಮ ಸೋಮಣ್ಣನವರಿಗೆ ನಮ್ಮೆಲ್ಲರ ಹಾರ್ದಿಕ ಶುಭಾಶಯಗಳು. ಕೊಡಕಂಡಿ ಬೋಜಿಯೆಂದೆ ಚಿರಪರಿಚಿತರಾಗಿರುವ ಶ್ರೀಯುತೆಯ ಆಡಳಿತದಲ್ಲಿ ಮಡಿಕೇರಿ ಪುರಸಭೆಯನ್ನು ದೇಶದಲ್ಲೆ ಒಂದು ಮಾದರಿ ಪುರಸಭೆಯನ್ನಾಗಿ ಮಾರ್ಪಡಿಸುವಲ್ಲಿ ಸಕಲ ಶಕ್ತಿ ದೇವತೆಗಳು, ಕುಲದೇವರು ವೆಂಕಟರಮಣ, ತಾಯಿ ಶೃಂಗೇರಿ ಹಾಗೂ ಇಷ್ಟ ದೇವತೆಗಳ ಕೃಪೆಯಿರಲಿ ಎಂದು ಮನಪೂರ್ವಕವಾಗಿ ಆ ಭಗವಂತನಲ್ಲಿ ಪ್ರಾರ್ಥಿಸುವೆವು.

- ಪಟ್ಟಡ ಶೀಲಾಮಣಿ ಪ್ರಭಾಕರ,
ಪಟ್ಟಡ ಮುತ್ತಂಣ ಪ್ರಭಾಕರ ಮತ್ತು ಕೊಡಗು ಸಂಗಾತಿ ಬಳಗ ಹಾಗೂ ಹಿತೈಷಿಗಳು.

ಪ್ರಕಟಣೆ : ಕೊಡಗು ಸಂಗಾತಿ,ಮೈಸೂರು.

STATEMENT ABOUT OWNERSHIP AND OTHER PARTICULARS ABOUT NEWS PAPER - KODAGU SANGATHI, FORTNIGHT MAGAZINE. FORM IV (SEE RULE- 8)

1.	Place of Publication	:	Mysore, Karnataka State
2.	Periodicity of its publication	:	Fsxort Night
3.	Printers Name	:	**Smt. Pattada P. Sheelamani**
	Weather citizen of India	:	Yes/Indian
	(If foreigners state the country of Origin)	:	NIA
	Address	:	35, Savitha Nilaya, Ist Cross, 4th Block, Jayalaximipuram, Mysore - 12
4.	Publishers Name	:	**Smt. Pattada P. Sheelamani**
	Weather citizen of India	:	Yes/Indian
	(If foreigners state the country of Origin)	:	NIA
	Address	:	35, Savitha Nilaya, Ist Cross, 4th Block, Jayalaximipuram, Mysore - 12
5.	Editors Name	:	**Smt. Pattada P. Sheelamani**
	Weather citizen of India	:	Yes/Indian
	(If foreigners state the country of Origin)	:	NIA
	Address	:	35, Savitha Nilaya, Ist Cross, 4th Block, Jayalaximipuram, Mysore - 12
6.	Name and address of individuals who own the News Paper & Partners or Share Holders holding more than one percent of the total Capital	:	**Smt. Pattada P. Sheelamani** Sole Proprietor, 35, Savitha Nilaya, Ist Cross, 4th Block, Jayalaximipuram, Mysore - 12

I, Smt. Pattada **P. Sheelmani** hereby declare that the particulars are given above are to the best of my knowledge.

Place : Mysore
Date : 1-2-2002

Sd/-
Pattada Sheelamani
Publisher

Kodagu Sangathi Kannada Fortnightly Edited, Published, Printed & Owned by **Pattada P. Sheelamani, No. 35, Savitha Nilaya, I Cross, 4th Block, Jayalaxmipuram, Mysore - 12. ☎ : 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/431792.